Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ–19 | ಸಂಚಿಕೆ–28 | ಜುಲೈ 7–13, 2025 | ಪುಟ 16 | ರೂ.10
Volume-19 | Issue-28 | July 7-13, 2025 | Pages:16 | Price: 10/-



ಬಯಲುಗೊಂಡ RSS ಕೋರೆ ಹಲ್ಲುಗಳು

ಸ್ಮಾರ್ಟ್ ಮೀಟರ್ ಕಡ್ಡಾಯ! ಅಪಾಯಕಾರಿ ಯೋಜನೆ

ELI - ಮತ್ತೊಂದು ವಂಚಕ ಯೋಜನೆ

ದೇವನಹಳ್ಳಿ ರೈತರ ಹೋರಾಟದ ಹೊಸ ಘಟ್ಟ



ಅವರನ್ನು ತುಂಡು ತುಂಡು ಮಾಡಿ, ಇಲ್ಲದಿದ್ದರೆ ಅವರು ನಿಮ್ಮನ್ನು ತುಂಡು ಮಾಡುವರು
ಪ್ರಜಾಪ್ರಭುತ್ವಕ್ಕಾಗಿ ಸಂಘರ್ಷದಲ್ಲಿ ದುಡಿಯುವ ವರ್ಗದ (ಲೆವಲರ್ಸ್‌ಗಳ) ಬಲಿದಾನ

ಭಾಗ 31

ಜಿ.ಎನ್. ನಾಗರಾಜ್

"ಅವರನ್ನು ತುಂಡು ತುಂಡು ಮಾಡುವುದನ್ನು ಬಿಟ್ಟರೆ ನಿಮಗೆ ಬೇರೇನೂ ದಾರಿಯಿಲ್ಲ. ನೀವು ಅವರನ್ನು ತುಂಡು ತುಂಡಾಗಿ ಮುರಿದು ಹಾಕದಿದ್ದರೆ ಅವರು ನಿಮ್ಮನ್ನು ತುಂಡು ಮಾಡುವರು. ಇಲ್ಲದಿದ್ದರೆ ಈ ರಾಜ್ಯದಲ್ಲಿ ಹರಿದ ನೆತ್ತರು, ವೆಚ್ಚಮಾಡಿದ ಹಣ ಎಲ್ಲದಕ್ಕೂ ನಿಮ್ಮನ್ನು ಹೊಣೆ ಮಾಡುವರು. ಎಲ್ಲ ವಿಚಾರಶೀಲರ ಮುಂದೆ ನಿಮ್ಮನ್ನು ಈ ಭೂಮಿಯ ಮೇಲಿನ ನಿಕೃಷ್ಟ ಜೀವಿಗಳಲ್ಲಿ ಅತ್ಯಂತ ಹೇಯ ತಿರಸ್ಕಾರಾರ್ಹರನ್ನಾಗಿ ಮಾಡಿಬಿಡುವರು" ಇದು ಸರ್ವಾಧಿಕಾರಿಯಾಗುವ ಹೊಸ್ತಿಲಲ್ಲಿದ್ದ ಕ್ರೋಮ್‌ವೆಲ್‌ನ ಕಿರುಚಾಟ, ಪಾರ್ಲಿಮೆಂಟ್‌ನ ಗ್ರಾಂಡಿ ಸದಸ್ಯರಿಗೆ ನೀಡಿದ ನಿರ್ದೇಶನ.

ಲೆವಲರ್ಸ್‌ಗಳು ಒಂದು ವರ್ಷಕ್ಕೂ ಹೆಚ್ಚು ಕಾಲದಿಂದ ಒತ್ತಾಯಿಸುತ್ತಾ ಬಂದಿದ್ದ ರಾಜನ ವಿಚಾರಣೆಯನ್ನು ತುಂಡು ಪಾರ್ಲಿಮೆಂಟ್ ರಚಿಸಿದ ವಿಚಾರಣಾ ಸಮಿತಿ ನಡೆಸಿತು ಮತ್ತು ಜನವರಿ 30, 1649ರಂದು ರಾಜನ ವಧೆಯಾಯಿತು. ನಂತರ ಒಂದಾದ ಮೇಲೊಂದರಂತೆ ಹಳೆಯ ಆಡಳಿತದ ಸಂಸ್ಥೆಗಳನ್ನು ಈ ತುಂಡು ಪಾರ್ಲಿಮೆಂಟ್ ರದ್ದು ಮಾಡಿತು. ಫೆಬ್ರವರಿ 6ರಂದು ಅಂದಿನ ಬ್ರಿಟಿಷ್ ಸಂಸತ್ತಿನ ಎರಡು ಅಂಗಗಳಲ್ಲಿ ಮಾಂಡಲಿಕರ, ಜಹಗೀರುದಾರರ ಸಭೆಯಾಗಿ ನ್ಯಾಯ ವಿಚಾರಣೆಯ ಅಧಿಕಾರವನ್ನೂ ಪಡೆದಿದ್ದ ಹೌಸ್ ಆಫ್ ಲಾರ್ಡ್ಸ್ ಸಭೆಯನ್ನು ರದ್ದು ಮಾಡಲಾಯಿತು. ಫೆಬ್ರವರಿ 7ರಂದು "ರಾಜ" ಎಂಬ ಅತ್ಯುನ್ನತ ಆಡಳಿತಾಧಿಕಾರದ ಸ್ಥಾನವನ್ನು ಆಡಳಿತದ ಮೇಲೆ "ಅನವಶ್ಯ ಹಾಗೂ ಅತಿಯಾದ ಹೊರೆ, ದೇಶದ ಜನರ ಸ್ವಾತಂತ್ರ್ಯ, ಭದ್ರತೆ, ಸಾರ್ವಜನಿಕ ಹಿತಾಸಕ್ತಿಗೆ ಅಪಾಯಕಾರಿ ಎಂದು ರದ್ದುಮಾಡಲಾಯಿತು. ಫೆಬ್ರವರಿ 13ರಂದು ಹಿಂದಿನ ಲೇಖನದಲ್ಲಿ ವಿವರಿಸಿದಂತೆ ಮುಂದಿನ ಆಡಳಿತ ನಡೆಸಲು ಪ್ರಭುತ್ವ ಮಂಡಳಿ ಎಂಬ ಹೊಸ ಸಂಸ್ಥೆಯನ್ನು ರಚಿಸಲಾಯಿತು. ಅದಕ್ಕೆ ದೇಶದ ಆಡಳಿತದ ಪರಮಾಧಿಕಾರ ನೀಡಲಾಯಿತು.

ಈ ಎಲ್ಲ ಕ್ರಮಗಳನ್ನು ಕೈಗೊಂಡಿದ್ದು ಮತ್ತು ಪ್ರಭುತ್ವ ಮಂಡಳಿಯನ್ನು ರಚಿಸಿದ್ದು ತುಂಡು ತುಂಡಾಗಿದ್ದ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್‌ನ ಸಭೆ. ಈ ಸಭೆಯ ಮೂಲ ಸದಸ್ಯರ ಸಂಖ್ಯೆ 490. ಅದರಲ್ಲಿ ಎರಡು ಬಾರಿ ಮಿಲಿಟರಿ ಬಳಸಿ ಹೊರ ಹಾಕಿದ ನಂತರ ಉಳಿದದ್ದು ಕೇವಲ 90. ಹಳೆಯ ಪಾರ್ಲಿಮೆಂಟಿನ ಈ ಒಂದು ಸಣ್ಣ ತುಂಡನ್ನು ರಾಜಪ್ರಭುತ್ವದ ಎಲ್ಲ ಆದಿಕಾರದ ಅಡಿಪಾಯವನ್ನಾಗಿ ಮಾಡಿದರು, ಕ್ರೋಮ್‌ವೆಲ್ ಮತ್ತು ಗ್ರಾಂಡಿ ಸಂಗಡಿಗರು.

ಲೆವಲರ್ಸ್‌ಗಳು ಹಿಂದಿನಿಂದ ರಾಜ ಮನ್ನಣೆ ಪಡೆದ ಶ್ರೀಮಂತರಿಂದ ತುಂಬಿದ ಹೌಸ್ ಆಫ್ ಲಾರ್ಡ್ಸ್ ಮಾತ್ರವೇ ಅಲ್ಲದೇ "ಸಾಮಾನ್ಯರ" ಸಭೆ ಎಂಬ ಸುಳ್ಳು ಹೆಸರಿನ ಹೌಸ್ ಆಫ್ ಕಾಮನ್ಸ್ ಎರಡನ್ನೂ ರದ್ದು ಮಾಡಬೇಕು. ಅಗ್ರೀಮೆಂಟ್ ಎಂಬ ಸಂವಿಧಾನದ ಪ್ರಕಾರ ಹೊಸ ಚುನಾವಣೆಗಳಲ್ಲಿ ಆಯ್ಕೆಯಾಗಿ ಜನರಿಂದ ಆಳುವ ಅಧಿಕಾರ ಪಡೆದ ನೈಜವಾದ ಹೌಸ್ ಆಫ್ ಕಾಮನ್ಸ್ ಪಾರ್ಲಿಮೆಂಟ್ ಮಾತ್ರ ಮುಂದಿನ ಪ್ರಭುತ್ವ ಸಂಸ್ಥೆಗಳ ಅಡಿಪಾಯ ಆಗುವ ಅರ್ಹತೆ ಪಡೆಯುತ್ತದೆ ಎಂಬ ಅವರ ಅಭಿಪ್ರಾಯವನ್ನು ಮಂಡಿಸಿದ್ದರು.

1647ರಲ್ಲಿ ಸೈನ್ಯದಲ್ಲಿ ನಡೆದ ಸಂವಿಧಾನದ ಚರ್ಚೆಯಲ್ಲಿ ಅಂಗೀಕೃತವಾಗಿದ್ದ ಕರಡನ್ನು ಸೈನ್ಯದ ಮುಂದೆ ಮಂಡಿಸದೆ ವಂಚನೆ ಮಾಡಲಾಗಿತ್ತಲ್ಲಾ! ಆ ಪ್ರಕ್ರಿಯೆಯನ್ನು ಮುಂದುವರೆಸಲು ರಚಿಸಿದ 16 ಜನರ ಸೈನ್ಯ ಮತ್ತು ನಾಗರಿಕರ ಸಮಿತಿಯ ಚರ್ಚೆಗಳನ್ನು ತಿಂಗಳುಗಟ್ಟಲೆ ಮುಂದುವರೆಸಲಾಯಿತು. ಈ ಚರ್ಚೆಗಳು ಇನ್ನೂ ನಡೆಯುತ್ತಿರುವಾಗ, ರಾಜನ ವಿಚಾರಣೆ ಮತ್ತು ಹತ್ಯೆಗೆ ಲೆವಲರ್ಸ್ ಪ್ರಭಾವದ ಸೈನ್ಯದ ಬೆಂಬಲವನ್ನು ಖಾತರಿಗೊಳಿಸಿಕೊಳ್ಳುವುದು ಗ್ರಾಂಡಿಗಳ ತಂತ್ರವಾಗಿತ್ತು. ಈ ಚರ್ಚೆಗಳು ಇನ್ನೂ ನಡೆಯುತ್ತಿರುವಾಗಲೇ ಪ್ರಭುತ್ವ ಮಂಡಳಿಯನ್ನು ರಚಿಸಲಾಯಿತು. ನಾಗರಿಕ ಲೆವಲರ್ಸ್‌ಗಳು ಮತ್ತು ಸೈನ್ಯದ ಲೆವಲರ್ಸ್‌ಗಳು ಒಂದಾಗಿ ಸರಿಯಾದ



ಸಮಯದಲ್ಲಿ ಎಚ್ಚರ ವಹಿಸಿ ಮಧ್ಯಪ್ರವೇಶ ಮಾಡಿದ್ದರೆ ಇದನ್ನು ತಡೆಯಬಹುದಿತ್ತೇನೋ ಎಂಬ ಅಭಿಪ್ರಾಯವನ್ನು ಕೆಲವು ಇತಿಹಾಸಕಾರರು ವ್ಯಕ್ತಪಡಿಸಿದ್ದಾರೆ.

ಸಂವಿಧಾನ ಚರ್ಚೆಯ ಸಮಿತಿಯಲ್ಲಿ ತಮ್ಮ ಬಹಳ ಮುಖ್ಯ ಅಭಿಪ್ರಾಯಗಳಿಗೆ ಮನ್ನಣೆ ನೀಡಿದ ಸರ್ವ ಸಮ್ಮತ ತೀರ್ಮಾನಗಳಿಗೆ ಬರಲಾಗುತ್ತಿದೆ ಎಂದು ಲೆವಲರ್ಸ್‌ಗಳು ಖುಷಿಯಾಗಿರುವಾಗಲೇ ಕ್ರೋಮ್‌ವೆಲ್ ಮತ್ತು ಗ್ರಾಂಡಿಗಳು ಕ್ಷಿಪ್ರ ಕ್ರಾಂತಿ ಮಾಡಿ, ಪ್ರಭುತ್ವ ಮಂಡಳಿ ರಚನೆ ಮಾಡಿ, ಅದಕ್ಕೆ ಆಡಳಿತದ ಎಲ್ಲ ಅಧಿಕಾರ ನೀಡಿಬಿಟ್ಟಿದ್ದರು. ಸರ್ವಾಧಿಕಾರದ ರಚನೆಗಳು ರಚನೆಯಾಗಿ ಬಿಟ್ಟಿದ್ದವು.

ಆಗಿನ ಸಂದರ್ಭದಲ್ಲಿ ಇಂತಹ ಕ್ಷಿಪ್ರ ಕ್ರಾಂತಿಯನ್ನು ತಡೆಯಬಲ್ಲ ಏಕಮಾತ್ರ ಶಕ್ತಿ ಇದ್ದದ್ದು ಲೆವಲರ್ಸ್‌ಗಳಿಗೆ ಮಾತ್ರ. ಅವರು ಮಾತ್ರ ಒಂದು ಸಂಘಟಿತ ರಾಜಕೀಯ ಪಕ್ಷದ ಸ್ವರೂಪ ಪಡೆದಿದ್ದರು. ಆದರೆ ಸುಳ್ಳು, ತಟವಟ, ಭ್ರಮೆಯಲ್ಲಿ ಮುಳುಗಿಸುವುದು, ವಂಚನೆ, ಕುತಂತ್ರ ಇವುಗಳಲ್ಲಿ ಗ್ರಾಂಡಿಗಳಂತಹ ಆಳುವ ವರ್ಗದ ಶಕ್ತಿಗಳಿಗೆ ಶತ ಶತಮಾನಗಳ ಕಾಲದ ಪರಿಣತಿ ಇತ್ತಲ್ಲ! ಇಲ್ಲಿಯವರೆಗೂ ಕೇವಲ ತಂತಮ್ಮ ಬದುಕಿನ ದುಂದುಗದಲ್ಲಿಯೇ ಮುಳುಗಿರುತ್ತಿದ್ದ ದುಡಿಯುವ ವರ್ಗಗಳ ಈ ಪ್ರತಿನಿಧಿಗಳಿಗೆ ಈ ಕುತಂತ್ರಗಳನ್ನು ಬೇಧಿಸುವ ತಿಳುವಳಿಕೆ ಮೂಡಿರಲಿಲ್ಲ.

ಸರ್ವಾಧಿಕಾರದ ವಿರುದ್ಧ ಲೆವಲರ್ಸ್ ಪ್ರತಿಭಟನೆ, ಬಂಧನ

ಆದರೆ ಅಧಿಕಾರವನ್ನು ಆಕ್ರಮಿಸಿಕೊಂಡ ಗ್ರಾಂಡಿಗಳು ಸಂವಿಧಾನ ಸಮಿತಿಯಲ್ಲಿ ಬಂದ ಸರ್ವಸಮ್ಮತಿಯ ಯಾವ ಅಂಶವನ್ನೂ ಜಾರಿಗೆ ತರದೆ ಅದಕ್ಕೆ ವಿರುದ್ಧವಾಗಿ ದಬ್ಬಾಳಿಕೆ ಕ್ರಮಗಳನ್ನು ಕೈಗೊಳ್ಳುತ್ತಿರುವುದರ ವಿರುದ್ಧ ಲೆವಲರ್ಸ್‌ಗಳು ಪ್ರಬಲ ದನಿ ಎತ್ತಿದರು. ಪ್ರಭುತ್ವ ಮಂಡಳಿ ರಚನೆಯಾಗಿ ಕೇವಲ ಹತ್ತಾರು ದಿವಸದಲ್ಲಿಯೇ ಲೆವಲರ್ಸ್ ನಾಯಕ ಲಿಲ್‌ಬರ್ನ್ ತುಂಡು ಪಾರ್ಲಿಮೆಂಟ್ ಮುಂದೆ "ಇಂಗ್ಲೆಂಡನ್ನು ಬಂಧಿಸಿದ ಹೊಸ ಸರಪಳಿಗಳ ಶೋಧ" ಎಂಬ ಕಿರುಪುಸ್ತಿಕೆಯನ್ನು ಮಂಡಿಸಿದ. ಒಂದು ತಿಂಗಳ ನಂತರ ಅದರ ಎರಡನೇ ಭಾಗವೆಂದು ಮತ್ತೊಂದು ಕಿರುಪುಸ್ತಿಕೆಯನ್ನೂ ಮಂಡಿಸಿದ.

ಯಾವ ಗುರಿಗಾಗಿ ರಾಜನ ವಿರುದ್ಧ ಜನ ಸಿಡಿದೆದ್ದರೋ ಆ ಸ್ವಾತಂತ್ರ್ಯ, ಜನತೆಯ ಸ್ವಾತಂತ್ರ್ಯ ಏನಾಯಿತು? ಹೊಸ ಗಣರಾಜ್ಯ ಅಸ್ತಿತ್ವಕ್ಕೆ ಬಂದ ಮೇಲೆ ಪ್ರಭುತ್ವ ಮಂಡಳಿ ಕೈಗೊಂಡ ಕ್ರಮಗಳನ್ನು ಪಟ್ಟಿ ಮಾಡಲಾಗಿತ್ತು. ಅಭಿವ್ಯಕ್ತಿ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯದ ಮೇಲೆ ಮುಂದುವರೆದ ಹಲ್ಲೆ ಸಾಲ ಬಾಕಿಗಾಗಿ ಬಂಧನ, ಎಕ್ಸೈಸ್ ತೆರಿಗೆ, ಆಮದು ರಫ್ತು ಸುಂಕ ಚರ್ಚ್‌ಗಳ ಸುಲಿಗೆ, ಹತ್ತಿ ಕೈಗಾರಿಕೆ ಮೇಲೆ ನಿರ್ಬಂಧ ಇವುಗಳ ಮುಂದುವರಿಕೆಗಳನ್ನು ಪ್ರಶ್ನೆ ಮಾಡಲಾಗಿತ್ತು. ಮುಖ್ಯವಾಗಿ ಗ್ರಾಂಡಿಗಳು ಲೆವಲರ್ಸ್ ಸೈನಿಕ ಪಡೆಗಳ ವಿರುದ್ಧವಾಗಿ ಹೊಸ ಸೈನ್ಯ ಪಡೆಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ ಎಂದು ಅಪಾದನೆ ಮಾಡಲಾಗಿತ್ತು.

ಎರಡನೆಯದರಲ್ಲಂತೂ, ನೇರವಾಗಿ ತುಂಡು ಪಾರ್ಲಿಮೆಂಟ್ ಜನರಲ್ ಕ್ರೋಮ್‌ವೆಲ್ ಮತ್ತವನ ಸಹಚಾರಿಗಳಿಗೆ ಗುಲಾಮೀ ವಿಧೇಯತೆ ತೋರಿಸುತ್ತಿದ್ದಾರೆ ಎಂದು ಆರೋಪಿಸಿದ ಲಿಲ್‌ಬರ್ನ್, ಈ ಪಾರ್ಲಿಮೆಂಟ್ ಗ್ರಾಂಡಿಗಳನ್ನು ದರ್ಬಾರರನ್ನು ನಿಯಂತ್ರಿಸಬೇಕು. ಅಷ್ಟೇ ಅಲ್ಲ, ತನ್ನನ್ನು ತಾನೇ ವಿಸರ್ಜಿಸಿಕೊಳ್ಳಬೇಕು, ಪ್ರಜಾಪ್ರಭುತ್ವೀಯ ಅಗ್ರಿಮೆಂಟ್ ಆಫ್ ಪೀಪಲ್ ಅನ್ನು ಜಾರಿಗೆ ತರಬೇಕು ಎಂದು ಒತ್ತಾಯಿಸಿದ. ಕ್ರೋಮ್‌ವೆಲ್‌ನ ಗುಂಪು ಈಗಾಗಲೇ ಜನರ ಪ್ರೀತಿಯನ್ನು ಕಳೆದುಕೊಂಡಿದೆ ಎಂದು ಸಾರಿದ.

ಗ್ರಾಂಡಿಗಳಿಂದ ತುಂಬಿದ್ದ ಪಾರ್ಲಿಮೆಂಟ್‌ನ ಮುಂದೆ ಗ್ರಾಂಡಿಗಳನ್ನು, ಸ್ವತಃ ಪಾರ್ಲಿಮೆಂಟ್ ಅನ್ನು ಈ ರೀತಿ ಕಟುವಾಗಿ ಧಿಕ್ಕರಿಸಬೇಕಾದರೆ ಲಿಲ್‌ಬರ್ನ್‌ಗೆ ಎಂಟೆದೆ ಇರಬೇಕಲ್ಲವೇ!

ಲೆವಲರ್ಸ್‌ಗಳು ಹೀಗೆ ತಮ್ಮ ಅಧಿಕಾರವನ್ನು ಧಿಕ್ಕರಿಸುವುದನ್ನು, ಇನ್ನು ಮುಂದೆ ಇಂಗ್ಲೆಂಡ್‌ನ ಪರಮಾಧಿಕಾರ ತಮ್ಮದೇ ಎಂದು ಮೆರೆಯುತ್ತಿದ್ದ ಗ್ರಾಂಡಿಗಳಲ್ಲಿ ಅಪಾರ ರೋಷ ಉಕ್ಕಿಸಿತು. ಕಿರುಪುಸ್ತಿಕೆಯ ಎರಡನೇ ಭಾಗದ ಜೊತೆಗೆ ಲೆವಲರ್ಸ್‌ಗಳು ಅಗ್ರಿಮೆಂಟ್ ಬಗ್ಗೆ ಮಾಡುತ್ತಾ ಬಂದ ಪ್ರಸ್ತಾಪಗಳನ್ನು ಹಲವು ಸಾವಿರ ಜನರ ಸಹಿಗಳೊಂದಿಗೆ ಮತ್ತೆ ಸಲ್ಲಿಸಲಾಗಿತ್ತು.

ಲೆವಲರ್ಸ್‌ಗಳು ಎಂದರೆ ಲಿಲ್‌ಬರ್ನ್ ಮತ್ತು ಅವನ ಸಂಗಡಿಗರು ಮಾತ್ರವೇ ಆಗಿರಲಿಲ್ಲವಲ್ಲ.

ಸೈನ್ಯದಲ್ಲಿ ತಮಗೆ ಬಲವಾದ ವಿರೋಧ ಇರುವುದನ್ನು ಬಲ್ಲ ಗ್ರಾಂಡಿ ಸೇನಾಧಿಕಾರಿಗಳು ಯಾವ ಸೈನಿಕರೂ ಪಾರ್ಲಿಮೆಂಟ್‌ಗೆ ಮನವಿ ಸಲ್ಲಿಸುವಂತಿಲ್ಲ. ಏನಿದ್ದರೂ ಅವರು ಮನವಿಗಳನ್ನು ತಮ್ಮ ಮೇಲಾಧಿಕಾರಿಗಳ ಮೂಲಕವೇ ಸಲ್ಲಿಸಬೇಕು ಎಂದು ಕಟ್ಟುನಿಟ್ಟಿನ ನಿಯಮ ಮಾಡಿದರು. ಆದರೆ ಸೈನಿಕರು ಅದನ್ನು ಒಪ್ಪಲಿಲ್ಲ. ಐದು ಜನ ಸೈನಿಕರು ಸೈನ್ಯದ ಮಹಾ ದಂಡನಾಯಕ ಮತ್ತು ಸೇನಾಧಿಕಾರಿಗಳ ಸಮಿತಿಗೆ ಅದರ ವಿರುದ್ಧ ಮನವಿ ಸಲ್ಲಿಸಿದರು. ನಾವು ಕೂಲಿಗಾಗಿ ಸೈನ್ಯಕ್ಕೆ ಸೇರಿದವರಲ್ಲ, ರಾಜಪ್ರಭುತ್ವದ ಅನ್ಯಾಯಗಳ ವಿರುದ್ಧ ಹೋರಾಡುವುದಕ್ಕಾಗಿ ಸೈನ್ಯ ಸೇರಿದವರು. ನಾವು ಸೈನಿಕರು ಎಂದ ಮಾತ್ರಕ್ಕೆ ಪ್ರಜೆಗಳಾಗಿ ನಮ್ಮ ಹಕ್ಕುಗಳನ್ನು ಕಿತ್ತುಕೊಳ್ಳಲಾಗುವುದಿಲ್ಲ ಎಂದು ಪ್ರತಿಭಟಿಸಿದರು. ಆದರೆ ಗ್ರಾಂಡಿಗಳ ಕಣ್ಣಿನಲ್ಲಿ ಅವರು ಕೇವಲ ಕೂಲಿ ಸೈನಿಕರಷ್ಟೇ. ಅವರನ್ನು ಕೂಡಲೇ ಬಂದಿಸಿ ಕೋರ್ಟ್ ಮಾರ್ಷಲ್ ಮಾಡಿ ಸೈನ್ಯದಿಂದ ವಜಾ ಮಾಡಲಾಯಿತು. ಈ ಪ್ರಸಂಗ ಕೂಡಾ ಎರಡು ವರ್ಗ ದೃಷ್ಟಿಕೋನಗಳ ಪರಸ್ಪರ ವಿರುದ್ಧ ನಿಲುವು ಮತ್ತು ವರ್ಗ ಸಂಘರ್ಷವನ್ನು ಎತ್ತಿ ತೋರಿಸುತ್ತದೆ. ವಜಾ ನಂತರ ಈ ಸೈನಿಕರ ಹೆಸರಿನಲ್ಲಿ ಒಂದು ಕಿರುಪುಸ್ತಿಕೆ ಪ್ರಕಟಮಾಡಿದರು. ಅದು ಲಿಲ್‌ಬರ್ನ್ ಎತ್ತಿದ, ರಾಜನ ಹತ್ಯೆಯ ನಂತರದ ಗ್ರಾಂಡಿ ಪಾರ್ಲಿಮೆಂಟ್‌ನ ಅಕ್ರಮಗಳನ್ನು ಪ್ರಶ್ನಿಸಿತು.

ಸೈನ್ಯದಲ್ಲಿ ನಡೆದ ಈ ಘಟನೆ ಮತ್ತು ನಾಗರಿಕರ ಸಹಿಯೊಂದಿಗೆ ಲಿಲ್‌ಬರ್ನ್ ಪಾರ್ಲಿಮೆಂಟ್ ಮುಂದೆ ಮಂಡಿಸಿದ ಕಿರುಪುಸ್ತಿಕೆಗಳ ಧಿಕ್ಕಾರದ ಧ್ವನಿ ಕ್ರೋಮ್‌ವೆಲ್ ಮತ್ತು ಗ್ರಾಂಡಿಗಳಿಗೆ ಇನ್ನು ಇವರನ್ನು ಮಟ್ಟ ಹಾಕದಿದ್ದರೆ ನಮ್ಮ ಆಡಳಿತ ಉಳಿಯುವುದಿಲ್ಲ ಎಂಬ ಆತಂಕವನ್ನು ಉಂಟುಮಾಡಿತು.

ಆದ್ದರಿಂದ ಮೊದಲು ಸೈನ್ಯದ ಹೊರಗಿದ್ದ ಲೆವಲರ್ಸ್‌ಗಳ ಉನ್ನತ ನಾಯಕರ ಧ್ವನಿ ಅಡಗಿಸಲು ತೀರ್ಮಾನಿಸಿದರು. ಕೂಡಲೇ ಪಾರ್ಲಿಮೆಂಟ್ ಲಿಲ್‌ಬರ್ನ್ ಮತ್ತು ಅವನ ಜೊತೆಗೆ ಹಗಲಿಗೆ ಹಗಲು ಕೂಡಿಸಿ ಲೆವಲರ್ಸ್ ವಿಚಾರಗಳನ್ನು ರೂಪಿಸುತ್ತಿದ್ದ ಇತರ ಮೂರು ಜನ ಲೆವಲರ್ಸ್ ನಾಯಕರನ್ನು ದೇಶದ್ರೋಹ ಎಸಗಿದವರೆಂದು ಘೋಷಿಸಿತು. ಬೆಳ್ಳಂಬೆಳಗ್ಗೆ ನಾಲ್ಕೂ ಜನರನ್ನೂ ಬಂಧಿಸಿ ಪ್ರತ್ಯೇಕ ಬಂದೀಖಾನೆಗಳಲ್ಲಿ ಕೂಡಲಾಯಿತು. ಪ್ರಭುತ್ವ ಮಂಡಳಿಯ ಮುಂದೆ ಹಾಜರುಪಡಿಸಿ ಪ್ರಶ್ನಿಸಲಾಯಿತು. ಲೆವಲರ್ಸ್ ನಾಯಕರೆಲ್ಲ ಈ ಮಂಡಳಿಗೆ ನಮ್ಮನ್ನು ಬಂಧಿಸುವ, ಶಿಕ್ಷಿಸುವ ಅಧಿಕಾರವನ್ನೇ ನಿರಾಕರಿಸಿದರು. ಲಿಲ್‌ಬರ್ನ್, "ನಾನು ಯಾವುದನ್ನೂ ಗುಟ್ಟಾಗಿ ಮಾಡಿಲ್ಲ. ಲಕ್ಷಾಂತರ ಜನರಿಗೆ ಗೊತ್ತಾಗುವಂತೆಯೇ ಮಾಡಿದ್ದೇನೆ. ಪ್ರಜಾಪ್ರಭುತ್ವ ತತ್ವಗಳನ್ನು ದೇಶದ ಮುಂದೆ ಮಂಡಿಸಿದ್ದಕ್ಕಾಗಿ ನನ್ನ ಜೀವವನ್ನೇ ತ್ಯಾಗ ಮಾಡುವ ಅವಶ್ಯಕತೆ ಬರುವುದಾದರೆ ಸಿದ್ಧನಿದ್ದೇನೆ" ಎಂದು ಉತ್ತರಿಸಿದ.

ಪ್ರಭುತ್ವ ಮಂಡಳಿಯಲ್ಲಿ ಇವರ ಬಂಧನದ ಬಗ್ಗೆ ಬಿರುಸಾದ ಚರ್ಚೆಯಾಯಿತು. ಈ ಚರ್ಚೆಯ ಸಮಯದಲ್ಲಿಯೇ ಈ ಲೇಖನದ ಮೊದಲ ಭಾಗದಲ್ಲಿ ಉಲ್ಲೇಖಿಸಲಾದ ಕ್ರೋಮ್‌ವೆಲ್‌ನ ಎಂಬ ದುಷ್ಟ ಹೆಳಿಕೆಯ ಮೂಲಕ ("ನಾವು ಅವರನ್ನು ತುಂಡರಿಸದಿದ್ದರೆ ಅವರು ನಮ್ಮನ್ನು ತುಂಡು ಮಾಡುತ್ತಾರೆ") ತನ್ನ ವರ್ಗ ಕ್ರೌರ್ಯವನ್ನು ಬಹಿರಂಗಗೊಳಿಸಿದ. ಆದರೂ ಈ ಮಂಡಳಿಯಲ್ಲಿ ಗಣನೀಯ ಸಂಖ್ಯೆಯ ಸದಸ್ಯರು ಬಂಧನವನ್ನು ಬೆಂಬಲಿಸಲಿಲ್ಲ. ಕೇವಲ ಅಲ್ಪ ಬಹುಮತದೊಂದಿಗೆ ಇವರುಗಳನ್ನು ಮುಂದಿನ ವಿಚಾರಣೆಗೆ ಒಪ್ಪಿಸಲು ಮಂಡಳಿ ನಿರ್ಧರಿಸಿತು.

ಪುಟ 5 ಕ್ಕೆ

* **ಕೇಂದ್ರ ಸರ್ಕಾರದ RDSS ಯೋಜನೆಯಡಿಯಲ್ಲಿ ವಿಧಿಸಲಾದ ವ್ಯವಸ್ಥೆ**
* **ಸಂಪೂರ್ಣ ವಿದ್ಯುತ್ ಮೀಟರ್ ತಂತ್ರಜ್ಞಾನ ಮತ್ತು ನಿಯತಾಂಕಗಳನ್ನು ಖಾಸಗಿ ಕಂಪನಿಗಳಿಗೆ ಹಸ್ತಾಂತರಿಸುವ ಅಪಾಯಕಾರಿ ಯೋಜನೆ**
* **ಹೋರಾಟದ ಮೂಲಕ ತಡೆಯಬಹುದು ಎಂಬುದನ್ನು ತೋರಿಸಿಕೊಟ್ಟ ಪಶ್ಚಿಮ ಬಂಗಾಳದ ಜನತೆ**

ಸ್ಮಾರ್ಟ್ ಮೀಟರ್: ಬೆಸ್ಕಾಂ ವ್ಯಾಪ್ತಿಯ ಗ್ರಾಮೀಣ ಪ್ರದೇಶದಲ್ಲೂ ಕಡ್ಡಾಯ:



ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು (ಬೆಸ್ಕಾಂ) ತನ್ನ ವ್ಯಾಪ್ತಿಯ ಗ್ರಾಮೀಣ ಪ್ರದೇಶಗಳಲ್ಲಿ ಜುಲೈ 1 ರಿಂದ ಹೊಸ ಮತ್ತು ತಾತ್ಕಾಲಿಕ ವಿದ್ಯುತ್ ಸಂಪರ್ಕಗಳಿಗೆ ಸ್ಮಾರ್ಟ್ ಮೀಟರ್ ಕಡ್ಡಾಯಗೊಳಿಸಿದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ)ದ ಆದೇಶದಂತೆ ಬೆಸ್ಕಾಂ ವ್ಯಾಪ್ತಿಯಲ್ಲಿ ಸ್ಮಾರ್ಟ್ ಮೀಟರ್ ಕಡ್ಡಾಯಗೊಳಿಸಲಾಗಿದೆ. 2025ರ ಫೆಬ್ರವರಿ 15ರಿಂದ ಪ್ರಾರಂಭವಾದ ಸ್ಮಾರ್ಟ್ ಮೀಟರ್ ನಿಯೋಜನೆಯು, ಬೆಂಗಳೂರು ನಗರ ಸೇರಿದಂತೆ ಬೆಸ್ಕಾಮ್ ವ್ಯಾಪ್ತಿಯಲ್ಲಿರುವ ನಗರ ಪ್ರದೇಶಗಳಲ್ಲಿ ಮಾತ್ರ ಕಡ್ಡಾಯವಾಗಿತ್ತು. ಹೀಗ ಬೆಸ್ಕಾಂ ವ್ಯಾಪ್ತಿಯ ಗ್ರಾಮೀಣ ಪ್ರದೇಶಗಳಿಗೂ ಕಡ್ಡಾಯಗೊಳಿಸಿದೆ. ಹೊಸ ಅಥವಾ ತಾತ್ಕಾಲಿಕ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿದಾರರು ಬೆಸ್ಕಾಮ್–ಅಧಿಕೃತ ಔಟ್‌ಲೆಟ್‌ಗಳಿಂದ ಸ್ಮಾರ್ಟ್ ಮೀಟರ್‌ಗಳನ್ನು ಖರೀದಿಸಬಹುದು ಮತ್ತು ಸಂಪರ್ಕ ಔಪಚಾರಿಕತೆಗಳೊಂದಿಗೆ ಮುಂದುವರಿಯಬಹುದು ಎಂದು ಪ್ರಕಟಣೆ ತಿಳಿಸಿದೆ.

"ಅಡ್ವಾನ್ಸ್ಡ್ ಮೀಟರಿಂಗ್ ಇನ್ಫ್ರಾಸ್ಟ್ರಕ್ಚರ್ (AMI) ತಂತ್ರಜ್ಞಾನವನ್ನು ಬಳಸಿಕೊಂಡು, ಈ ಮೀಟರ್‌ಗಳು ಗ್ರಾಹಕರು ಮತ್ತು ಬೆಸ್ಕಾಮ್ ನಡುವೆ ವಿದ್ಯುತ್ ಬಳಕೆಯ ಡೇಟಾವನ್ನು ಸಂಗ್ರಹಿಸುವ ಮೂಲಕ ನೇರ ಸಂವಹನವನ್ನು ಸಕ್ರಿಯಗೊಳಿಸುತ್ತವೆ. ಬಳಕೆದಾರರು ಮೊಬೈಲ್ ಅಪ್ಲಿಕೇಶನ್ ಮೂಲಕ ನೈಜ–ಸಮಯದ ವಿದ್ಯುತ್ ಬಳಕೆ, ವೋಲ್ಟೇಜ್ ಮತ್ತು ವಿದ್ಯುತ್ ಅಂಶವನ್ನು ಮೇಲ್ವಿಚಾರಣೆ ಮಾಡಬಹುದು ಮತ್ತು ರೀಚಾರ್ಜ್ ಆಯ್ಕೆಗಳನ್ನು ಪ್ರವೇಶಿಸಬಹುದು. ಗ್ರಾಹಕರು ಮುಂಗಡ ಪಾವತಿಗಳನ್ನು ಮಾಡಬಹುದು ಮತ್ತು ತಮ್ಮ ಅಪೇಕ್ಷಿತ ಅವಧಿಗೆ ರೀಚಾರ್ಜ್ ಮಾಡಬಹುದು, ಇದು ಅಗತ್ಯವಿರುವಂತೆ ವಿದ್ಯುತ್ ಬಳಸಲು ಅನುವು ಮಾಡಿಕೊಡುತ್ತದೆ. ವಿದ್ಯುತ್ ಕಡಿತದ ಸಂದರ್ಭದಲ್ಲಿ, ಬಿಲ್ ಪಾವತಿಯ ನಂತರ ವಿದ್ಯುತ್ ಅನ್ನು ತಕ್ಷಣವೇ ಮರುಸ್ಥಾಪಿಸಬಹುದು"ಎಂದು ಪ್ರಕಟಣೆ ತಿಳಿಸಿದೆ.

ಬೆಂಗಳೂರು ನಗರ, ಉತ್ತರ ಮತ್ತು ದಕ್ಷಿಣ ಜಿಲ್ಲೆಗಳು, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ಬೆಸ್ಕಾಂ ತನ್ನ ಸೇವೆಗಳನ್ನು ಒದಗಿಸುತ್ತದೆ.

ಕೇಂದ್ರ ಇಂಧನ ಪ್ರಾಧಿಕಾರದ ನಿರ್ದೇಶನದಂತೆ 2021–22ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಇಂಧನ ಸಚಿವಾಲಯವು 'ಪರಿಷ್ಕೃತ ವಿತರಣಾ ವಲಯ ಯೋಜನೆ' (RDSS) ರೂಪಿಸಿತ್ತು. ಈ ಯೋಜನೆಯಡಿಯಲ್ಲಿ ವಿಧಿಸಲಾದ ವ್ಯವಸ್ಥೆಯು ಸಂಪೂರ್ಣ ವಿದ್ಯುತ್ ಮೀಟರ್ ತಂತ್ರಜ್ಞಾನ ಮತ್ತು ನಿಯತಾಂಕಗಳನ್ನು ಖಾಸಗಿ ಕಂಪನಿಗಳಿಗೆ ಹಸ್ತಾಂತರಿಸುವ ಅಪಾಯಕಾರಿ ಯೋಜನೆಯಾಗಿದೆ. ದೇಶದ ಇತರೆ ರಾಜ್ಯಗಳಂತೆ ಕರ್ನಾಟದಲ್ಲಿಯೂ ಕೇಂದ್ರ ಸರ್ಕಾರದ ಈ ಯೋಜನೆಯನ್ನು ವೇಗವಾಗಿ ಜಾರಿಗೆ ತರಲು ರಾಜ್ಯ ಸರ್ಕಾರ ಹೊರಟಿದೆ. ಇದರ ಭಾಗವಾಗಿ 2024ರ ಮಾರ್ಚ್ 6ರಂದು ಸ್ಮಾರ್ಟ್ ಮೀಟರ್ ಅನುಷ್ಠಾನದ ಕುರಿತು ಕೆಇಆರ್‌ಸಿ ಮಾರ್ಗಸೂಚಿಗಳನ್ನು ಹೊರಡಿಸಿತು. ಅಂದಿನಿಂದ ಹಂತಹಂತವಾಗಿ ಸ್ಮಾರ್ಟ್ ಮೀಟರ್ ಅಳವಡಿಕೆಗಳನ್ನು ಕೈಗೊಳ್ಳುತ್ತಿದೆ. ಈಗ ಬೆಸ್ಕಾಂ ವ್ಯಾಪ್ತಿಯಲ್ಲಿ ಕಡ್ಡಾಯಗೊಳಿಸಿರುವ ಸರ್ಕಾರ ಹಂತ ಹಂತವಾಗಿ ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಮಾಡುತ್ತದೆ.

ಕಾರ್ಪೊರೇಟ್‌ಗಳ ಗುಪ್ತ ಕಾರ್ಯಸೂಚಿ

ಸಿಂಗಲ್ ಫೇಸ್ ಸ್ಮಾರ್ಟ್ ಮೀಟರ್‌ಗೆ 5,000 ಮತ್ತು ತ್ರೀ ಫೇಸ್ ಸ್ಮಾರ್ಟ್ ಮೀಟರ್‌ಗೆ 8,800 ರೂ. ದರ ನಿಗಧಿ ಮಾಡಲಾಗಿದೆ ಎಂದು ಕೆಇಆರ್‌ಸಿ ಹೇಳಿದೆ. ಸ್ಮಾರ್ಟ್ ಮೀಟರ್ ಗುತ್ತಿಗೆ ಪ್ರಕ್ರಿಯೆಯಲ್ಲಿ ಅಕ್ರಮಗಳಾಗಿವೆ ಎಂದು ರಾಜ್ಯದ ವಿರೋಧ ಪಕ್ಷ ಬಿಜೆಪಿ ಮತ್ತು ಜೆಡಿಎಸ್ ನಾಯಕರು ದೊಡ್ಡ ಧ್ವನಿಯಲ್ಲಿ ಪ್ರತಿಭಟಿಸಿದ್ದನ್ನು ನಾವು ನೋಡಿದ್ದೇವೆ. ಮತ್ತೊಂದೆಡೆ, ಈ ಹಗರಣದ ಬಗ್ಗೆ ಮತ್ತು ಸ್ಮಾರ್ಟ್ ಮೀಟರ್‌ಗಳ ದುಬಾರಿ ದರಕ್ಕೆ ಸಂಬಂಧಿಸಿ ಮತ್ತು ಗ್ರಾಹಕರಿಗೆ ವಿದ್ಯುತ್ ಸ್ಮಾರ್ಟ್ ಮೀಟರ್‌ಗಳ ಅಳವಡಿಕೆಯನ್ನು ಕಡ್ಡಾಯಗೊಳಿಸುವ ನಿರ್ಧಾರಗಳ ಕಾನೂನು ಬದ್ಧತೆ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದು, ಈ ಸಂಬಂಧ ಪ್ರಕರಣ ಚಾಲ್ತಿಯಲ್ಲಿದೆ. ಆದರೆ, ಈ ಯೋಜನೆಯು ಕರ್ನಾಟಕಕ್ಕೆ ಮಾತ್ರ ಸೀಮಿವಾಗಿಲ್ಲ ಮತ್ತು ಇದನ್ನು ದೇಶಾದ್ಯಂತ ಜಾರಿಗೊಳಿಸಲು ಆಯಾ ರಾಜ್ಯಗಳು ಕ್ರಮಕೈಗೊಳ್ಳುತ್ತಿವೆ.

ಸಿಂಗಲ್ ಫೇಸ್ ಪ್ರತಿ ಸ್ಮಾರ್ಟ್ ಮೀಟರ್‌ಗೆ 5,000 ಮತ್ತು ತ್ರೀ ಫೇಸ್ ಸ್ಮಾರ್ಟ್ ಮೀಟರ್‌ಗೆ 8,800 ರೂ. ದರ ನಿಗಧಿಮಾಡಲಾಗಿದ್ದರೂ, ಇದರ ವೆಚ್ಚ 10,000 ರೂ.ಗಳವರೆಗೂ ಆಗುತ್ತದೆ ಎಂದು ಹೇಳಲಾಗುತ್ತಿದೆ. ಇಷ್ಟು ವೆಚ್ಚ ಮಾಡಿದರೂ, ಈ ಮೀಟರ್‌ಗಳ ಜೀವಿತಾವಧಿ ಕೇವಲ 5 ವರ್ಷಗಳು ಮಾತ್ರ. ಅಂದರೆ, ಪ್ರತಿ ಗ್ರಾಹಕರಿಗೆ ಒಂದು ಮೀಟರ್‌ಗಾಗಿಯೇ ವರ್ಷಕ್ಕೆ ರೂ. 2,000 ಹೆಚ್ಚುವರಿ ಹೊರೆಯಾಗುತ್ತದೆ. ರಾಷ್ಟ್ರೀಯ ಮಟ್ಟದಲ್ಲಿ ಜನರ ಮೇಲೆ ಅಂದಾಜು ರೂ. 50,000 ಕೋಟಿ ಹೆಚ್ಚುವರಿ ವೆಚ್ಚವನ್ನು ಹೇರಲಾಗುತ್ತದೆ. ಈ ಯೋಜನೆಯ ಕ್ರೌರ್ಯ ಇಲ್ಲಿಗೆ ನಿಲ್ಲುವುದಿಲ್ಲ. ಖಾಸಗಿ ಕಂಪನಿಗಳು ಗ್ರಾಹಕರ ಹಣದಿಂದ ತಮ್ಮ ವ್ಯವಹಾರವನ್ನು ನಡೆಸುತ್ತವೆ. ಮೀಟರ್‌ನಲ್ಲಿ ಪ್ರಿಪೇಯ್ಡ್ ಹಣ ಖಾಲಿಯಾದರೆ ಅಥವಾ ಅದರಲ್ಲಿ ತಾಂತ್ರಿಕ ದೋಷ ಉಂಟಾದರೆ, ಸ್ವಯಂಚಾಲಿತವಾಗಿ ವಿದ್ಯುತ್ ಸಂಪರ್ಕ ಕಡಿತಗೊಳ್ಳುತ್ತದೆ. ಮುಂದಿನ ದಿನಗಳಲ್ಲಿ ರೈತರು ಮತ್ತು ಬಡವರಿಗೆ ಎಲ್ಲಾ ಸಬ್ಸಿಡಿಗಳನ್ನು ತೆಗೆದುಹಾಕಲಾಗುತ್ತದೆ. ವೇರಿಯಬಲ್ ಬೆಲೆಗಳು, ವೈಯಕ್ತಿಕ ಡೇಟಾ ಸಂಗ್ರಹಣೆ, ಸೈಬರ್ ದಾಳಿಯ ಅಪಾಯಗಳು ಜನರ ಸಾರ್ವಭೌಮತ್ವಕ್ಕೆ ಬೆದರಿಕೆ ಹಾಕುತ್ತವೆ. ಇದರಿಂದ ಪಾರಾಗಲು ಜನತೆ ಹೋರಾಟಕ್ಕೆ ಇಳಿಯಬೇಕಿದೆ. ಸ್ಮಾರ್ಟ್ ಮೀಟರ್ ಅಳವಡಿಕೆಯಲ್ಲಿನ ರಹಸ್ಯ ಕಾರ್ಯಸೂಚಿಯನ್ನು ಗುರುತಿಸಿ ಅವುಗಳನ್ನು ಜನರ ನಡುವೆ ಬಹಿರಂಗಪಡಿಸಿ ಜನರನ್ನು ಹೋರಾಟಕ್ಕೆ ಅಣಿನೆರಸಬೇಕಿದೆ. ಈ ವಿಷಯದಲ್ಲಿ ಪಶ್ಚಿಮ ಬಂಗಾಳದಲ್ಲಿ ನಡೆದ ಹೋರಾಟ ನಮಗೆ ದಾರಿ ದೀಪವಾಗುತ್ತದೆ.

ಹೋರಾಟದ ಮೂಲಕ ತಡೆಹಿಡಿದ ಪಶ್ಚಿಮ ಬಂಗಾಳ ಜನತೆ

ಪಶ್ಚಿಮ ಬಂಗಾಳದಲ್ಲಿ ಪ್ರಿಪೇಯ್ಡ್ ಸ್ಮಾರ್ಟ್ ಮೀಟರ್ ಯೋಜನೆಯ ವಿರುದ್ದ ಅಲ್ಲಿನ ವಿದ್ಯುತ್ ನೌಕರರು ಮತ್ತು ಜನತೆ ಒಟ್ಟಾಗಿ ಹೋರಾಟ ನಡೆಸಿದ ಪರಿಣಾಮ ಅಲ್ಲಿನ ಸರ್ಕಾರ ಈ ಯೋಜನೆಯನ್ನು ನಿಲ್ಲಿಸಿದೆ. 15 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಪಶ್ಚಿಮ ಬಂಗಾಳ ರಾಜ್ಯವು ಜನರಿಂದ ಸಂಘಟಿತ ಪ್ರತಿಭಟನೆಯನ್ನು ಕಂಡಿದೆ. ಇದು ಐತಿಹಾಸಿಕ ವಿಜಯವಾಗಿದ್ದು, ಇದು ತೃಣಮೂಲ ಸರ್ಕಾರದ ಜನವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಕಾರಣವಾಗಿದೆ.

ಆಧುನಿಕ ಹೋರಾಟದ ತಂತ್ರ

ಪಶ್ಚಿಮ ಬಂಗಾಳದಲ್ಲಿ ಭಾರತೀಯ ವಿದ್ಯುತ್ ನೌಕರರ ಒಕ್ಕೂಟ (EEFI) ನೇತೃತ್ವದ ಈ ಆಂದೋಲನವು ಆರಂಭದಲ್ಲಿ ಸಮಸ್ಯೆಯ ರಹಸ್ಯ ಕಾರ್ಯಸೂಚಿಯನ್ನು ಗುರುತಿಸಿ ಜನರ ನಡುವೆ ಬಹಿರಂಗಪಡಿಸಿತು. ಆದರೆ ಅದರ ನಿಜವಾದ ಶಕ್ತಿ ವಿದ್ಯುತ್ ವಲಯದ ಉದ್ಯೋಗಿಗಳಿಂದ ಕಾರ್ಮಿಕರು, ರೈತರು, ಸಣ್ಣ ವ್ಯಾಪಾರಿಗಳು ಮತ್ತು MSME ಗಳಿಗೆ (ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು) ವಿಸ್ತರಿಸುವುದರಲ್ಲಿತ್ತು. ಪ್ರತಿ ಜಿಲ್ಲೆಯಲ್ಲಿಯೂ ಗ್ರಾಹಕ–ನೌಕರರ ಸಮ್ಮೇಳನಗಳನ್ನು ನಡೆಸಲಾಯಿತು. ಗ್ರಾಮ ಪಂಚಾಯತ್ ಮತ್ತು ವಾರ್ಡ್‌ವಾರು ಸಭೆಗಳು, ರೈತರೊಂದಿಗೆ ನೂರಾರು ಸಂಭಾಷಣೆಗಳು, ನಿವಾಸಿಗಳ ಸಂಘಗಳೊಂದಿಗೆ ವ್ಯಾಪಕ ಪ್ರಚಾರದಂತಹ ಸಮಗ್ರ ಸಾರ್ವಜನಿಕ ಜಾಗೃತಿ ಅಭಿಯಾನವನ್ನು ಪ್ರಾರಂಭಿಸಲಾಯಿತು. ಅತ್ಯಂತ ಆಶ್ಚರ್ಯಕರ ವಿಷಯವೆಂದರೆ ದೂರದ ಹಳ್ಳಿಗಳಲ್ಲಿಯೂ ಸಹ ಜನರು ತಂಡ ತಂಡವಾಗಿ ಬಂದು ಈ ಸಂಕೀರ್ಣ ತಾಂತ್ರಿಕ ಸಮಸ್ಯೆಯನ್ನು ಗಮನವಿಟ್ಟು ಆಲಿಸಿದರು. ಬೀದಿ ಬದಿಯಲ್ಲಿರುವ ಸಣ್ಣ ಕೂಟಗಳು ದೊಡ್ಡ ಕೂಟಗಳಾಗಿ ಬೆಳೆಯಲು ಪ್ರಾರಂಭಿಸಿದವು. ಜನರು ತಮ್ಮ ಜೀವನ ಮತ್ತು ಜೀವನೋಪಾಯದ ಮೇಲೆ ನೇರವಾಗಿ ಪರಿಣಾಮ ಬೀರುವ ಈ ಯೋಜನೆಯ ವಿರುದ್ಧ ತಮ್ಮದೇ ಆದ ಬಂಡಾಯದ ರೀತಿಯಲ್ಲಿ ಒಟ್ಟುಗೂಡಿದರು.

ಗೆಲುವಿನ ಸವಿಯಾದ ಕ್ಷಣಗಳು

ಡಿಸೆಂಬರ್ 2023ರಲ್ಲಿ, ಪಶ್ಚಿಮ ಬಂಗಾಳದ 37 ಲಕ್ಷ ಮನೆಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಕೆಯ ಗುರಿಯನ್ನು ನಿಗದಿಪಡಿಸಲಾಗಿತ್ತು. ಆದರೆ, ಪ್ರತಿಭಟನೆಯ ತೀವ್ರತೆಯಿಂದಾಗಿ ಸರ್ಕಾರ ಅದನ್ನು ಕಾರ್ಯಗತಗೊಳಿಸಲು ಸಾಧ್ಯವಾಗಲಿಲ್ಲ. 2024ರಲ್ಲೂ ಇಡೀ ಯೋಜನೆಯನ್ನು ಕಾರ್ಯಗತಗೊಳಿಸಲು ಸಾಧ್ಯವಾಗಲಿಲ್ಲ. 2024ರ ಅಂತ್ಯದ ವೇಳೆಗೆ ಕೆಲವು ಪ್ರದೇಶಗಳಲ್ಲಿ ಸ್ಮಾರ್ಟ್ ಮೀಟರ್ ಅಳವಡಿಸಲು ಮೋಸದ ಪ್ರಯತ್ನಗಳು ನಡೆದಾಗ ಜನರ ಕೋಪ ಭುಗಿಲೆದ್ದಿತು. ಸರಿಯಾದ ಅಧಿಸೂಚನೆಯಿಲ್ಲದೆ ಅಸ್ತಿತ್ವದಲ್ಲಿರುವ ಮೀಟರ್‌ಗಳನ್ನು ಬದಲಾಯಿಸುವುದು ಮತ್ತು ಹೆಚ್ಚಿನ ಶುಲ್ಕ ವಿಧಿಸುವಂತಹ ಅಕ್ರಮಗಳು ಸಾರ್ವಜನಿಕರ ವಿರೋಧವನ್ನು ಮತ್ತಷ್ಟು ತೀವ್ರಗೊಳಿಸಿದವು. ಸಿಐಟಿಯು ನೇತೃತ್ವದಲ್ಲಿ ವಿದ್ಯುತ್ ವಿತರಣಾ ಕಚೇರಿಗಳ ಹೊರಗೆ ತೀವ್ರ ಪ್ರತಿಭಟನೆಗಳು ನಡೆದವು. ರಾಜ್ಯಾದ್ಯಂತ ಪ್ರತಿಭಟನೆಗಳು ಹರಡುತ್ತಿದ್ದಂತೆ, ಸಾರ್ವಜನಿಕ ವಿರೋಧದ ಬಲ ಮತ್ತು ಯೋಜನೆಯ ವ್ಯಾಪಕ ತಿರಸ್ಕಾರವನ್ನು ಸರ್ಕಾರ ಒಪ್ಪಿಕೊಳ್ಳಬೇಕಾಯಿತು. ಅಂತಿಮವಾಗಿ, ಪಶ್ಚಿಮ ಬಂಗಾಳ ಸರ್ಕಾರವು ಇಡೀ ಯೋಜನೆಯನ್ನು ಹಿಂತೆಗೆದುಕೊಂಡಿತು.

ನಮಗೆ ಪಾಠಗಳು

ಈ ಗೆಲುವು ನಮಗೆ ಹಲವು ಪ್ರಮುಖ ಪಾಠಗಳನ್ನು ಕಲಿಸುತ್ತದೆ. ಸರಿಯಾದ ಸಮಸ್ಯೆ ಗುರುತಿಸುವಿಕೆ ಮತ್ತು ಸರಿಯಾದ ಸಾರ್ವಜನಿಕ ಅರಿವು ಗೆಲುವಿಗೆ ಆಧಾರವಾಗಿದೆ. ಸೇವಾ ವಲಯದ ಕಾರ್ಮಿಕರು ಆ ಸೇವೆಗಳನ್ನು ಬಳಸುವ ಗ್ರಾಹಕರೊಂದಿಗೆ ಸೇರಿಕೊಂಡಾಗ, ಹೋರಾಟದ ಶಕ್ತಿ ಹಲವು ಪಟ್ಟು ಹೆಚ್ಚಾಗುತ್ತದೆ. ಖಾಸಗೀಕರಣದ ಸಂಕೀರ್ಣ ಮತ್ತು ವಿಕಸನಗೊಳ್ಳುತ್ತಿರುವ ರೂಪಗಳನ್ನು ಅರ್ಥಮಾಡಿಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ. ಸಾರ್ವಜನಿಕ ಆಸ್ತಿಗಳನ್ನು ರಕ್ಷಿಸುವುದು ನವ ಉದಾರವಾದಿ ಪ್ರತಿರೋಧದ ಹೃದಯಭಾಗದಲ್ಲಿದೆ. ಪಶ್ಚಿಮ ಬಂಗಾಳದ ಜನರ ಈ ಗೆಲುವು ಕತ್ತಲೆಯ ಕಾಲದಲ್ಲಿ ಭರವಸೆಯ ದಾರಿದೀಪವಾಗಿ ನಿಂತಿದೆ. ಇದು ಸಾಮೂಹಿಕ ಹೋರಾಟದ ಶಕ್ತಿಯನ್ನು ಪುನರುಚ್ಚರಿಸುತ್ತದೆ ಮತ್ತು ಭವಿಷ್ಯದ ಲೆಕ್ಕವಿಲ್ಲದಷ್ಟು ಜನ ಚಳುವಳಿಗಳಿಗೆ ಬಾಗಿಲು ತೆರೆಯುತ್ತದೆ. ನಿಸ್ಸಂದೇಹವಾಗಿ, ಇದು ಜನ ಚಳುವಳಿಗಳಲ್ಲಿ ನಂಬಿಕೆಯನ್ನು ಪುನರುಜ್ಜೀವನಗೊಳಿಸುವ ಐತಿಹಾಸಿಕ ವಿಜಯವಾಗಿದೆ.

ಸ್ಮಾರ್ಟ್ ಮೀಟರ್ಗಳನ್ನು ಏಕೆ ವಿರೋಧಿಸಬೇಕು ?

1) ಈಗ ನಾವು ಮೊದಲು ವಿದ್ಯುತ್ ಬಳಸುತ್ತೇವೆ, ನಂತರ ವಿದ್ಯುತ್ ಬಿಲ್ ಪಾವತಿಸುತ್ತೇವೆ. ಸ್ಮಾರ್ಟ್ ಮೀಟರಿಂಗ್ ವ್ಯವಸ್ಥೆಯಲ್ಲಿ, ನಾವು ಮೊದಲು ಪಾವತಿಸಬೇಕು, ನಂತರ ವಿದ್ಯುತ್ ಬಳಸಬಹುದು. ಉದಾಹರಣೆಗೆ, ಮೊಬೈಲ್ ಫೋನ್‌ನಲ್ಲಿ, ಮೊದಲು ಪಾವತಿಸಿ, ನಂತರ ಮಾತನಾಡಬಹುದು. ಹಣ ಖಾಲಿಯಾದಾಗ, ವಿದ್ಯುತ್ ಸಂಪರ್ಕವು ಸ್ವಯಂಚಾಲಿತವಾಗಿ ಸಂಪರ್ಕ ಕಡಿತಗೊಳ್ಳುತ್ತದೆ. ಮೀಟರಿಂಗ್ ಕಂಪನಿಯ ತಪ್ಪಿನಿಂದಾಗಿ ಹಣ ಖಾಲಿಯಾಗಿದ್ದರೂ, ಪ್ರಾಯೋಗಿಕವಾಗಿ ಏನೂ ಮಾಡಲು ಸಾಧ್ಯವಾಗುವುದಿಲ್ಲ.
2) ಈಗ ರಾಜ್ಯ ಸರ್ಕಾರ ಗ್ರಾಹಕರಿಗೆ ಕೊಡುತ್ತಿರುವ ಸಬ್ಸಿಡಿಗಳನ್ನು ಹಿಂತೆಗೆದುಕೊಳ್ಳಲಾಗುತ್ತದೆ. ನಿರ್ದಿಷ್ಟವಾಗಿ ಹೇಳುವುದಾದರೆ, ಕೃಷಿ ಗ್ರಾಹಕರಿಗೆ ಪರಸ್ಪರ ಸಬ್ಸಿಡಿಗಳನ್ನು ಅವರ ಫೀಡರ್‌ಗಳನ್ನು ಬೇರ್ಪಡಿಸುವ ಮೂಲಕ ಹಿಂತೆಗೆದುಕೊಳ್ಳಲಾಗುತ್ತದೆ. ಇದರ ಪರಿಣಾಮವಾಗಿ, ದೇಶದ ಕೃಷಿ ವ್ಯವಸ್ಥೆಯು ದೊಡ್ಡ ಬಿಕ್ಕಟ್ಟನ್ನು ಎದುರಿಸಬೇಕಾಗುತ್ತದೆ.
3) ನೇರ ಲಾಭ ವರ್ಗಾವಣೆ(ಡಿಬಿಟಿ)ಯನ್ನು ಪರಿಚಯಿಸಲಾಗುವುದು. ಅಂದರೆ, ರಾಜ್ಯ ಸರ್ಕಾರವು ಸಬ್ಸಿಡಿ ನೀಡಲು ಬಯಸಿದರೆ, ಅದನ್ನು ನೇರವಾಗಿ ಬ್ಯಾಂಕಿಗೆ ವರ್ಗಾಯಿಸಲಾಗುತ್ತದೆ. ಅಡುಗೆ ಅನಿಲದ ಸಬ್ಸಿಡಿ ವಿಷಯದಲ್ಲಿ ಇದನ್ನು ಈಗಾಗಲೇ ಪರಿಚಯಿಸಲಾಗಿದೆ. ನಂತರ ಫಲಿತಾಂಶ ಏನಾಯಿತು ಎಂದು ಎಲ್ಲರಿಗೂ ತಿಳಿದಿದೆ.
4) ಸ್ಮಾರ್ಟ್ ಮೀಟರಿಂಗ್ ವ್ಯವಸ್ಥೆಯು ಗ್ರಾಹಕರನ್ನು ನೇರವಾಗಿ ಮುಕ್ತ ಮಾರುಕಟ್ಟೆಗೆ ತಳ್ಳುತ್ತದೆ. ವಿದ್ಯುತ್ ದರವು ಅಸಹಜ ದರದಲ್ಲಿ ಹೆಚ್ಚಾಗುತ್ತದೆ. ದಿನದ ವಿವಿಧ ಸಮಯಗಳಲ್ಲಿ ವಿದ್ಯುತ್ ಬೆಲೆಗಳು ಬದಲಾಗುತ್ತವೆ. ಗರಿಷ್ಠ ಬೇಡಿಕೆಯ ಸಮಯದಲ್ಲಿ, ವಿದ್ಯುತ್ ಬೆಲೆಗಳು ಸಾಮಾನ್ಯ ಜನರ ವ್ಯಾಪ್ತಿಯನ್ನು ಮೀರುತ್ತವೆ. ಗರಿಷ್ಠ ಬೇಡಿಕೆಯ ಸಮಯದಲ್ಲಿ, ಪ್ರತಿ ಯೂನಿಟ್ ವಿದ್ಯುತ್ ಬೆಲೆ ಮತ್ತಷ್ಟು ಹೆಚ್ಚುತ್ತದೆ.
5) ವಿತರಣಾ ಕಂಪನಿಗಳು (ESCOM) ಮಾರುಕಟ್ಟೆಯಿಂದ ವಿದ್ಯುತ್ ಖರೀದಿಸಿ ಗ್ರಾಹಕರಿಗೆ ಪೂರೈಸುತ್ತದೆ. ಆದರೆ ಸ್ಮಾರ್ಟ್ ಮೀಟರಿಂಗ್ ಕಂಪನಿಯು ಗ್ರಾಹಕರಿಂದ ಹಣವನ್ನು ಸಂಗ್ರಹಿಸುತ್ತದೆ ಮತ್ತು ಎಲ್ಲಾ ಸರ್ಕಾರಿ ಮತ್ತು ಖಾಸಗಿ ಕಂಪನಿಗಳು ಹಣವನ್ನು ಹಿಂದಿರುಗಿಸಿದ ನಂತರ ವಿತರಣಾ ಕಂಪನಿಯು ಉಳಿದದ್ದನ್ನು ಪಡೆಯುತ್ತದೆ. ಅಂದರೆ, ವಿತರಣಾ ಕಂಪನಿಯು ತನಗೆ ಅರ್ಹವಾದ ಹಣಕ್ಕಾಗಿ ಮೂರನೇ ವ್ಯಕ್ತಿಯನ್ನು ಅವಲಂಬಿಸಬೇಕಾಗುತ್ತದೆ.
6) ರಾಜ್ಯದ ವಿದ್ಯುತ್ ಸರಭರಾಜು ಕಂಪನಿಗಳು ಆರ್ಥಿಕವಾಗಿ ದುರ್ಬಲಗೊಳ್ಳುತ್ತದೆ. ಖಾಸಗಿ ಕಂಪನಿಗಳು ಲಾಭದಾಯಕ ಪ್ರದೇಶಗಳಲ್ಲಿ ವಿದ್ಯುತ್ ವ್ಯವಹಾರವನ್ನು ಮಾಡುತ್ತವೆ.
7) ಹೆಚ್ಚಿನ ಸಂಖ್ಯೆಯ ಗ್ರಾಹಕರ ವೈಯಕ್ತಿಕ ಮಾಹಿತಿಯನ್ನು ದೇಶೀಯ ಮತ್ತು ವಿದೇಶಿ ಖಾಸಗಿ ಕಂಪನಿಗಳಿಗೆ ವರ್ಗಾಯಿಸಲಾಗುತ್ತದೆ.
8) ಈ ವ್ಯವಸ್ಥೆ ತುಂಬಾ ಅಪಾಯಕಾರಿ ಎಂದು ವಿಶ್ವ ಬ್ಯಾಂಕ್ ಹೇಳುತ್ತದೆ.
9) ಈ ವ್ಯವಸ್ಥೆಯು ದೇಶದ ಸಾರ್ವಭೌಮತ್ವ ಮತ್ತು ರಾಜ್ಯಗಳ ಸಾಂವಿಧಾನಿಕ ಹಕ್ಕುಗಳನ್ನು ದುರ್ಬಲಗೊಳಿಸುತ್ತದೆ.

ಜೂನ್ 27ರಿಂದ 30, 2025ರ ವರೆಗೆ ನಡೆದ ಭಾರತ ವಿದ್ಯಾರ್ಥಿ ಫೆಡರೇಷನ್ನ (SFI) 18ನೇ ಅಖಿಲ ಭಾರತ ಸಮ್ಮೇಳನವು ಶಿಕ್ಷಣದ ಶುಲ್ಕ ಹೆಚ್ಚಳ, ಸರ್ಕಾರಿ ಶಾಲೆಗಳನ್ನು ಮುಚ್ಚುವ ಸರ್ಕಾರದ ಹುನ್ನಾರಗಳು, ವಿದ್ಯಾರ್ಥಿಗಳ ಹಾಸ್ಟೆಲ್ ಸೇರಿದಂತೆ ಹಲವಾರು ವಿಷಯದ ಬಗ್ಗೆ ಚರ್ಚಿಸಿತು. ಶಿಕ್ಷಣದ ಖಾಸಗೀಕರಣ ಹಾಗೂ ಕೋಮುವಾದದ ವಿರುದ್ಧದ ಹೋರಾಟ, ಉದ್ಯೋಗದ ಹಕ್ಕಿಗಾಗಿ ಒತ್ತಾಯ, ಪರಿಸರ ಸಂರಕ್ಷಣೆಗಾಗಿ ಹೋರಾಟಗಳನ್ನು ರೂಪಿಸುವ ನಿರ್ಣಯಗಳನ್ನು ಅಂಗೀಕರಿಸಿತು. ಪ್ರಜಾಪ್ರಭುತ್ವ ಹಾಗೂ ಬಹುತ್ವ ಭಾರತಕ್ಕಾಗಿ ಶ್ರಮಿಸುವ ಮತ್ತು ಆರ್‌ಎಸ್‌ಎಸ್ ನೇತೃತ್ವದ ಕೇಂದ್ರ ಸರ್ಕಾರ ಶಿಕ್ಷಣದ ಮೇಲೆ ನಡೆಸುತ್ತಿರುವ ನಿರಂತರ ದಾಳಿಗಳ ವಿರುದ್ಧ ಹೋರಾಟಗಳನ್ನು ಗಟ್ಟಿಗೊಳಿಸುವ ಕರೆಯನ್ನು ಸಮ್ಮೇಳನವು ನೀಡಿತು.

ಶಿಕ್ಷಣದ ಖಾಸಗೀಕರಣ ಹಾಗೂ ಕೋಮುವಾದದ ವಿರುದ್ಧ ಹೋರಾಡಲು

ಎಸ್‌ಎಫ್‌ಐ ಅಖಿಲ ಭಾರತ ಸಮ್ಮೇಳನ ಕರೆ



‘ಶಿಕ್ಷಣ ನಮ್ಮ ಹಕ್ಕು, ಏಕತೆಯೇ ಮಾರ್ಗ, ವೈವಿಧ್ಯತೆಯೇ ಶಕ್ತಿ’ ಎಂಬ ಘೋಷಣೆಯೊಂದಿಗೆ, ಭಾರತ ವಿದ್ಯಾರ್ಥಿ ಫೆಡರೇಷನ್ (SFI)ನ 18ನೇ ಅಖಿಲ ಭಾರತ ಸಮ್ಮೇಳನವು ಜೂನ್ 27ರಿಂದ 30, 2025ರವರೆಗೆ ಒಟ್ಟು ನಾಲ್ಕು ದಿನಗಳ ಕಾಲ ಕೇರಳದ ಕೊಯಿಕೋಡ್‌ನಲ್ಲಿ ನಡೆಯಿತು. ಹೊಸ ಶಿಕ್ಷಣ ನೀತಿ–2020, ಶಿಕ್ಷಣ ಕ್ಷೇತ್ರವನ್ನು ಖಾಸಗೀಕರಣ, ಕೇಸರೀಕರಣ ಮಾಡುತ್ತಿರುವ ಬಗ್ಗೆ ಹಾಗೂ ಇದರ ಅಪಾಯದ ಬಗ್ಗೆ ಸಮ್ಮೇಳನದಲ್ಲಿ ಚರ್ಚೆಯಾಯಿತು. ಶಿಕ್ಷಣದ ಶುಲ್ಕ ಹೆಚ್ಚಳ, ಸರ್ಕಾರಿ ಶಾಲೆಗಳನ್ನು ಮುಚ್ಚುವ ಸರ್ಕಾರದ ಹುನ್ನಾರಗಳು ಹಾಗೂ ವಿದ್ಯಾರ್ಥಿಗಳ ಹಾಸ್ಟೆಲ್ ಸೇರಿದಂತೆ ಹಲವಾರು ವಿಷಯದ ಬಗ್ಗೆ ಚರ್ಚಿಸಿ ಎಲ್ಲರಿಗೂ ಸಮಾನ ಗುಣಮಟ್ಟದ ಉಚಿತ ಶಿಕ್ಷಣದ ಆಶಯದತ್ತ ಹೆಜ್ಜೆಹಾಕಲು ಹೋರಾಟಗಳ ಅಗತ್ಯವಿದೆಯೆಂದು ಪ್ರತಿನಿಧಿಗಳು ಒತ್ತಾಯಪಡಿಸಿದರು.

ಕೇಂದ್ರದ ಬಿಜೆಪಿ ಸರ್ಕಾರ ಮನುವಾದಿ ಶಿಕ್ಷಣದ ನೀತಿಗಳನ್ನು ಕಡ್ಡಾಯ ಗೊಳಿಸುತ್ತಿರುವುದು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಸೇರಿದಂತೆ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಹಾಗೂ ಫೆಲೋಶಿಪ್ ನೀಡದೇ ಕಡೆಗಣಿಸಿದ್ದರ ಬಗ್ಗೆ ತೀವ್ರವಾಗಿ ವಿರೋಧ ವ್ಯಕ್ತಪಡಿಸಲಾಯಿತು. ಮುಖ್ಯವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನಮಾಡುವ ಹಾಗೂ ಕೆಲಸಮಾಡಿಕೊಂಡು ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಸಂಘಟಿಸುವ ಅಗತ್ಯವಿದೆ ಎಂದು ಅಭಿಪ್ರಾಯ ವ್ಯಕ್ತವಾಯಿತು.

ಸಮ್ಮೇಳನವು ಪ್ರಜಾಪ್ರಭುತ್ವ ಹಾಗೂ ಬಹುತ್ವ ಭಾರತಕ್ಕಾಗಿ ಶ್ರಮಿಸುವ ಹಾಗೂ ಆರ್‌ಎಸ್‌ಎಸ್ ನೇತೃತ್ವದ ಕೇಂದ್ರ ಸರ್ಕಾರವು ಶಿಕ್ಷಣದ ಮೇಲೆ ನಡೆಸುತ್ತಿರುವ ನಿರಂತರ ದಾಳಿಗಳ ವಿರುದ್ಧ ಹೋರಾಟಗಳನ್ನು ಗಟ್ಟಿಗೊಳಿಸುವ ಕರೆ ನೀಡಿತು.

82 ಪ್ರತಿನಿಧಿಗಳು ಸುಮಾರು ಏಳೂವರೆ ಗಂಟೆಗಳ ಕಾಲ ಚರ್ಚೆ

ಪ್ರತಿನಿಧಿ ಅಧಿವೇಶನದಲ್ಲಿ, ಎಸ್‌ಎಫ್‌ಐನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಮಯೂಖ್ ಬಿಸ್ವಾಸ್ ಅವರು ಕರಡು ವರದಿಯನ್ನು ಮಂಡಿಸಿದರು. 32 ವಿದ್ಯಾರ್ಥಿನಿಯರು ಸೇರಿ ಒಟ್ಟು 82 ಪ್ರತಿನಿಧಿಗಳು ಸುಮಾರು ಏಳೂವರೆ ಗಂಟೆಗಳ ಕಾಲ ಚರ್ಚೆಯಲ್ಲಿ ಭಾಗವಹಿಸಿದ್ದರು. ಅಂಬೇಡ್ಕರ್ ವಿವಿ ದೆಹಲಿ, ಹೈದರಾಬಾದ್‌ನ ಸೆಂಟ್ರಲ್ ವಿವಿ ಹಾಗೂ ಆರ್.ಜೆ. ಖರ್ ಕಾಲೇಜಿನಲ್ಲಿ ನ್ಯಾಯಕ್ಕಾಗಿ ನಡೆದ ಬೃಹತ್ ಹೋರಾಟಗಳಿಂದ ಸಮ್ಮೇಳನದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳಿಗೆ ಪ್ರೇರಣೆಯಾಗಿದ್ದು ಇತರೆ ರಾಜ್ಯಗಳಲ್ಲಿ ಹೆಚ್ಚೆಚ್ಚು ಹೋರಾಟಗಳನ್ನು ನಡೆಸುವ ಬಗ್ಗೆ ಉತ್ಸುಕರಾಗಿದ್ದರು.

‘ಪ್ಯಾಲೆಸ್ಟೈನ್ ಸಾಲಿಡಾರಿಟಿ ನಗರ’ದಲ್ಲಿ ಪ್ರತಿನಿಧಿ ಅಧಿವೇಶನ

ಸಮ್ಮೇಳನದ ಪ್ರತಿನಿಧಿ ಅಧಿವೇಶನ ಜೂನ್ 27ರಂದು ಪ್ಯಾಲೆಸ್ಟೈನ್ ಸಾಲಿಡಾರಿಟಿ ನಗರದ ಸಿತಾರಾಮ್ ಯೆಚೂರಿ– ನೇಪಾಳ್ ದೇಬ್ ಭಟ್ಟಾಚಾರ್ಯ ವೇದಿಕೆಯಲ್ಲಿ ಪ್ರಾರಂಭವಾಯಿತು. ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಕಾಮ್ರೇಡ್ ಪಿ.ಎ.ಮೊಹಮ್ಮದ್ ರಿಯಾಜ್ ಅವರು ಪ್ರತಿನಿಧಿಗಳನ್ನು ಸ್ವಾಗತಿಸಿದರು. ಸಮ್ಮೇಳನವನ್ನು ಪ್ರಸಿದ್ಧ ಪತ್ರಕರ್ತರಾದ ಶಶಿಕುಮಾರ ಹಾಗೂ ರಂಗಭೂಮಿ ನಟರು ಹಾಗೂ ಸಿನಿಮಾ ನಿರ್ದೇಶಕರಾದ ಎಂ.ಕೆ.ರೈನಾ ರವರು ಉದ್ಘಾಟಿಸಿದರು.

ಸಮ್ಮೇಳನದಲ್ಲಿ ಒಟ್ಟು 517 ಪ್ರತಿನಿಧಿಗಳು, 198 ವೀಕ್ಷಕರು ಹಾಗೂ 76 ಕೇಂದ್ರಕಾರ್ಯಕಾರಿ ಸಮಿತಿ ಸದಸ್ಯರು ಭಾಗವಹಿಸಿದ್ದರು. ಪ್ರತಿನಿಧಿಗಳಲ್ಲಿ ಶೇ. 70ರಷ್ಟು ವಿದ್ಯಾರ್ಥಿ ಪ್ರತಿನಿಧಿಗಳು ಹಾಗೂ ಶೇ. 30ರಷ್ಟು ವಿದ್ಯಾರ್ಥಿನಿ ಪ್ರತಿನಿಧಿಗಳು, ಜೊತೆಗೆ ಒಬ್ಬರು ಟ್ರಾನ್ಸ್ ಜೆಂಡರ್ ಹಾಗೂ ಒಬ್ಬರು ಲೈಂಗಿಕ ಅಲ್ಪಸಂಖ್ಯಾತ ಪ್ರತಿನಿಧಿ ಭಾಗವಹಿಸಿದ್ದರು.

ಪ್ರತಿನಿಧಿಗಳ ಸಾಮಾಜಿಕ ಹಿನ್ನಲೆ

ಒಟ್ಟು ಪ್ರತಿನಿಧಿಗಳ ಸಾಮಾಜಿಕ ಹಿನ್ನಲೆಯಲ್ಲಿ 51 ಪ್ರತಿನಿಧಿಗಳು ಅಲ್ಪಸಂಖ್ಯಾತ ಸಮುದಾಯದವರು, 41 ಪ್ರತಿನಿಧಿಗಳು ಬುಡಕಟ್ಟು ಪ್ರದೇಶಗಳಿಂದ ಹಾಗೆಯೇ 181 ಪ್ರತಿನಿಧಿಗಳು ದಲಿತ ಸಮುದಾಯದಿಂದ ಭಾಗಿಯಾಗಿದ್ದರು. ಹೆಚ್ಚಿನ ಪ್ರತಿನಿಧಿಗಳು 24ರಿಂದ 30 ವರ್ಷದ ಒಳಗಿನ ವಯಸ್ಸಿನವರಾಗಿದ್ದರು. ಬಹುತೇಕರು ಪದವಿ, ಸ್ನಾತಕೋತ್ತರ, ಕಾನೂನು, ವೈದ್ಯಕೀಯ ಹಾಗೂ ಪಿಎಚ್‌ಡಿ ಅಧ್ಯಯನ ಮಾಡುವ ಪ್ರತಿನಿಧಿಗಳಾಗಿದ್ದಾರೆ.

ಕೋಮು ಸಂಘಟನೆ ಹಾಗೂ ಪ್ರಭುತ್ವದಿಂದ ಬೆದರಿಕೆಗೆ ಒಳಪಟ್ಟ, ಹಲ್ಲೆಗೊಳಗಾದ, ಜೈಲಿಗೆ ಹೋಗಿದ್ದ ವಿದ್ಯಾರ್ಥಿ ಪ್ರತಿನಿಧಿಗಳ ಭಾಗವಹಿಸುವಿಕೆ ಈ ಸಮ್ಮೇಳನದ ಪ್ರಭಾವಶಾಲಿಯಾಗಿತ್ತು. ಅವರ ಅನುಭವಗಳು ಇತರೆ ವಿದ್ಯಾರ್ಥಿಗಳಿಗೆ ಶಕ್ತಿ ಮತ್ತು ಪ್ರೇರಣೆಯಾದವು.

ಜೂನ್ 27ರಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಪ್ರಧಾನ ಕಾರ್ಯದರ್ಶಿ (AIDWA) ಪಿ.ಕೆ.ಶ್ರೀಮತಿ, ಅಖಿಲ ಭಾರತ ಕಿಸಾನ್ ಸಭಾ (AIKS) ಪ್ರಧಾನ ಕಾರ್ಯದರ್ಶಿ ವಿಜೂ ಕೃಷ್ಣನ್, ಸಿಐಟಿಯುನ ಎಳಮಾರಂ ಕರೀ, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (DYFI) ಪರವಾಗಿ ಎ.ಎ.ರಹೀಂ ಅವರು ಭಾಗವಹಿಸಿ ಶುಭಾಶಯ ಕೋರಿ ಕೇಂದ್ರ ಸರ್ಕಾರದ ಕೋಮುವಾದ ಮತ್ತು ಖಾಸಗೀಕರಣದ ನೀತಿಗಳ ವಿರುದ್ಧ ಐಕ್ಯತೆಯಿಂದ ಹೋರಾಡುವ ಅಗತ್ಯವಿದೆ ಎಂದು ಮನವರಿಕೆ ಮಾಡಿದರು.



ಎಸ್‌ಎಫ್‌ಐ ನ ಹಿರಿಯ ಒಡನಾಡಿಗಳಾದ ಬಿಮನ್ ಬೋಸ್, ಪ್ರಕಾಶ್ ಕಾರಟ್, ಎಂ.ಎ.ಬೇಬಿ, ನಿಲೋತ್ಪಾಲ್ ಬಸು, ಎ.ವಿಜಯರಾಘವನ್, ವೈ. ವೆಂಕಟೇಶ್ವರರಾವ್, ಕೆ.ಎನ್.ಬಾಲಗೋಪಾಲ್, ಪಿ.ಕೃಷ್ಣಪ್ರಸಾದ್, ಕೆ.ಕೆ.ರಾಘೇಶ್, ಪಿ.ಕೆ.ಬಿಜು, ವಿ.ಶಿವದಾಸನ್, ವಿಕ್ರಂ ಸಿಂಗ್ ಮೊದಲಾದವರು ಹಳೇ ಬೇರು – ಹೊಸ ಚಿಗುರು ಹೆಸರಿನಲ್ಲಿ ಸಮ್ಮೇಳನ ಭಾಗವಾಗಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿ ಹೋರಾಟಗಳ ಅನುಭವ ಹಂಚಿಕೊಂಡರು.

ಪೈಕಾ ಬುಡಕಟ್ಟು ಸಮುದಾಯದ ವಿದ್ಯಾರ್ಥಿ ಸುಗ್ರಿವ್ ಮಂಡೆ ಅವರಿಗೆ ಸನ್ಮಾನ

ಹಾಗೇಯೇ ಮಹಾರಾಷ್ಟ್ರದ ಪೈಕಾ ಬುಡಕಟ್ಟು ಸಮುದಾಯದ ವಿದ್ಯಾರ್ಥಿ ಸುಗ್ರಿವ್ ಮಂಡೆ ಅವರಿಗೆ ಮೌಂಟ್ ಎವರೆಸ್ಟ್ ಹತ್ತಿದ ಸಾಧನೆಗಾಗಿ ಕಾಮ್ರೇಡ್ ಸುಭಾಷ್ ಚಕ್ರವರ್ತಿ ಕುಟುಂಬದ ಪರವಾಗಿ ಗೌರವಧನ ನೀಡಿ ಸನ್ಮಾನಿಸಲಾಯಿತು. ವಿಶೇಷವಾಗಿ ಎಸ್‌ಎಫ್‌ಐ ನ ಹುತಾತ್ಮರಾದ ಸಂಗಾತಿಗಳ ಕುಟುಂಬದ ಸದಸ್ಯರು ಸಮ್ಮೇಳನಕ್ಕೆ ಆಗಮಿಸಿ ಶುಭಾಶಯಗಳನ್ನು ತಿಳಿಸಿದರು.

ಅದೇ ಸಂದರ್ಭದಲ್ಲಿ ಸ್ಟೂಡೆಂಟ್ಸ್ ಸ್ಟ್ರಗಲ್ ಪತ್ರಿಕೆಯ ವಿಶೇಷ ಪತ್ರಿಕೆ ಹಾಗೂ ಸ್ಟೂಡೆಂಟ್ಸ್ ಸ್ಟ್ರಗಲ್ ಸೈನ್ಸ್ ಜರ್ನಲ್ ಬಿಡುಗಡೆ ಮಾಡಲಾಯಿತು. ಎಸ್‌ಎಫ್‌ಐ ನ ಹುತಾತ್ಮರಾದ ಸಂಗಾತಿಗಳ ಕುರಿತು ‘ಬ್ಲೇಜಿಂಗ್ ಸ್ಟಾರ್ಸ್’ ಎಂಬ ಪುಸ್ತಕವನ್ನು ಬಿಡುಗಡೆ ಮಾಡಿ ಪ್ರತಿನಿಧಿಗಳಿಗೆ ವಿತರಿಸಲಾಯಿತು. ಹಾಗೆಯೇ ಪರ್ಯಾಯ ಶಿಕ್ಷಣ ಆಯೋಗದ ಕರಡು ವರದಿಯನ್ನು ಚರ್ಚೆ–ಪ್ರತಿಕ್ರಿಯೆಗಾಗಿ ಎಲ್ಲರಿಗೂ ಹಂಚಲಾಯಿತು.

ಪ್ಯಾಲೇಸ್ತೇನ್ ದೇಶದ ರಾಯಭಾರಿಗಳು ವಿಡಿಯೋದ ಸಂದೇಶದ ಮೂಲಕ ಸಮ್ಮೇಳನದಲ್ಲಿ ಭಾಗವಹಿಸಿದ ಪ್ರತಿನಿಧಿಗಳಿಗೆ ಶುಭಾಶಯಗಳನ್ನು ಹಾಗೂ ತಮ್ಮ ಬೆಂಬಲವನ್ನು ಸೂಚಿಸಿದರು. ಆ ಸಂದರ್ಭದಲ್ಲಿ ಇಡೀ ಸಮ್ಮೇಳನ ಪ್ಯಾಲೇಸ್ತೇನಿ ಜನತೆಯ ಜೊತೆ ನಾವಿದ್ದೇವೆ ಎಂದು ಘೋಷಣೆ ಹಾಕುವುದರ ಮೂಲಕ ಐಕ್ಯ ಬೆಂಬಲವನ್ನು ನೀಡಲಾಯಿತು.

ಶಿಕ್ಷಣದ ಖಾಸಗೀಕರಣ ಹಾಗೂ ಕೋಮುವಾದದ ವಿರುದ್ಧದ ಹೋರಾಟ, ಪ್ಯಾಲೇಸ್ಟೈನ್ ಮತ್ತು ಕ್ಯೂಬಾ ಜನರೊಂದಿಗಿನ ಐಕ್ಯತೆ, ಉದ್ಯೋಗದ ಹಕ್ಕಿಗಾಗಿ ಒತ್ತಾಯ, ಕಾರ್ಪೋರೇಟ್ ಹಾಗೂ ಸರ್ಕಾರದ ನೀತಿಗಳಿಂದ ಪರಿಸರ ಸಂರಕ್ಷಣೆಗಾಗಿ ಹೋರಾಟಗಳನ್ನು ರೂಪಿಸುವುದು ಸೇರಿದಂತೆ ಈ ಸಮ್ಮೇಳನವು ಒಟ್ಟು 38 ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಅಧ್ಯಕ್ಷರಾಗಿ ಆದರ್ಶ ಎಂ.ಸಾಜಿ, ಪ್ರಧಾನ ಕಾರ್ಯದರ್ಶಿಯಾಗಿ ಸ್ರಿಜನ್ ಭಟ್ಟಾಚಾರ್ಯ ಆಯ್ಕೆ

ಅಖಿಲ ಭಾರತ ಅಧ್ಯಕ್ಷರಾಗಿ ಆದರ್ಶ ಎಂ ಸಾಜಿ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಸ್ರಿಜನ್ ಭಟ್ಟಾಚಾರ್ಯ ಆಯ್ಕೆಯಾದರು. ಕರ್ನಾಟಕ ರಾಜ್ಯದಿಂದ ಕೇಂದ್ರ ಕಾರ್ಯಕಾರಿ ಸಮಿತಿ ಸಮಿತಿ ಸದಸ್ಯರಾಗಿ ಶಿವಪ್ಪ, ವಿಜಯ್ ಕುಮಾರ ಹಾಗೂ ಸುಜಾತ ಅವರನ್ನು, ರಾಷ್ಟ್ರೀಯ ಕೇಂದ್ರವಾಗಿ ದೊಡ್ಡ ಬಸವರಾಜ ಗುಳೇದಾಳ ಅವರನ್ನು ಒಳಗೊಂಡಂತೆ ಸಮ್ಮೇಳನವು ಒಟ್ಟು 87 ಸದಸ್ಯರ ಕೇಂದ್ರ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿತು. ಎಂಟು ಸ್ಥಾನಗಳನ್ನು ಖಾಲಿ ಬಿಡಲಾಗಿದೆ. ಒಬ್ಬರನ್ನು ಶಾಶ್ವತ ಅಹ್ವಾನಿತ ಸದಸ್ಯರನ್ನಾಗಿ ಆಯ್ಕೆಮಾಡಲಾಯಿತು.

ರಾಜ್ಯದಾದ್ಯಂತ ವಿವಿಧ ಕಾರ್ಯಕ್ರಮಗಳು

ಸಮ್ಮೇಳನವನ್ನು ಕೇರಳದಲ್ಲಿ ನಡೆಸಲು ತೀರ್ಮಾನವಾದಾಗಿನಿಂದಲೂ ಎಸ್‌ಎಫ್‌ಐ ಕೇರಳ ರಾಜ್ಯ ಸಮಿತಿಯು ಸಮ್ಮೇಳನದ ಸಂದೇಶವನ್ನು ಪ್ರಚಾರಪಡಿಸಲು ಮತ್ತು ಬೆಂಬಲ ಸಂಗ್ರಹಿಸಲು ಅನೇಕ ಚಟುವಟಿಕೆಗಳನ್ನು ಪ್ರಾರಂಭಿಸಿತು. ಎಸ್‌ಎಫ್‌ಐ ಕಾರ್ಯಕರ್ತರು ಕೊಯಿಕ್ಕೋಡ್‌ನಾದ್ಯಂತ ಸುಮಾರು 25 ↗

ಕರ್ನಾಟಕದ ಮಾವಿನ ಮಡಿಲು ತಲ್ಲಣಿಸಿದೆ

ಜಿ.ಆರ್.ಮುರಳಿಕೃಷ್ಣ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆಮದು– ರಫ್ತು ನೀತಿಗಳು, ಹವಾಮಾನ ವೈಪರೀತ್ಯಗಳು, ಆಂಧ್ರ, ತಮಿಳುನಾಡಿನ ಒತ್ತಡ, ರಾಜ್ಯದಲ್ಲಿ ಜ್ಯೂಸ್ ಕಾರ್ಖಾನೆಗಳ ಕೊರತೆ ಸೇರಿದಂತೆ ಹಲವಾರು ಕಾರಣಗಳು ಮಾವಿನ ದರ ನೆಲ ಕಚ್ಚುವಂತೆ ಮಾಡಿದೆ.

ಭಾರತ 95 ಲಕ್ಷ ಟನ್ ನಿಂದ 1.20 ಲಕ್ಷ ಟನ್ ಮಾವು ಬೆಳೆಯುವ ಮೂಲಕ ವಿಶ್ವದಲ್ಲೇ ಮೊದಲ ಸ್ಥಾನದಲ್ಲಿದೆ. ದೇಶದಲ್ಲಿ ಉತ್ತರಪ್ರದೇಶ ಮೊದಲ ಸ್ಥಾನದಲ್ಲಿದ್ದರೆ ಕರ್ನಾಟಕ ನಾಲ್ಕನೆ ಸ್ಥಾನದಲ್ಲಿದೆ. ರಾಜ್ಯದಲ್ಲಿ ಅವಿಭಜಿತ ಕೋಲಾರ ಜಿಲ್ಲೆ ಪ್ರಥಮ ಸ್ಥಾನದಲ್ಲಿದ್ದು 55 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುವುದು. 66ಕ್ಕೂ ಹೆಚ್ಚು ವಿಶಿಷ್ಟ ತಳಿಗಳನ್ನು ಬೆಳೆಯುವ ಮೂಲಕ ಶ್ರೀನಿವಾಸಪುರ ಮಾರುಕಟ್ಟೆ ವಿಶ್ವಪ್ರಸಿದ್ಧವಾಗಿದೆ.

ಈ ವರ್ಷ ಇಳುವರಿ ಕಡಿಮೆ ಇದ್ದುದರಿಂದ ರೈತರು ಉತ್ತಮ ದರ ಸಿಗಲಿದೆ ಎಂಬ ನಿರೀಕ್ಷೆಯಲ್ಲಿದ್ದರು. ಆದರೆ ಹವಾಮಾನ ವೈಪರೀತ್ಯಗಳಿಂದ ಸಾಕಷ್ಟು ಬೆಳೆ ನಷ್ಟವಾಯಿತು. ಇದಲ್ಲದೆ ಮೇ ತಿಂಗಳಲ್ಲಿ ಮಂಡಿಗಳು ಪ್ರಾರಂಭಗೊಂಡರೂ ತಿನ್ನುವ ಹಣ್ಣು (ಟೇಬಲ್ ಫ್ರೂಟ್)ಗಳಿಗೂ ಒಳ್ಳೆಯ ದರ ಸಿಗಲಿಲ್ಲ. ಜೂಸ್ ಕಂಪನಿಗಳೂ ಮಾವು (ತೋತಾಪುರಿ) ಖರೀದಿಗೆ ಮುಂದಾಗದಿದ್ದಾಗ ಪ್ರತಿ ಕೆ.ಜಿ ದರ 3–5 ರೂ.ಗಳಿಗೆ ಕುಸಿಯಿತು.

ಆಂಧ್ರ ಸರ್ಕಾರ ಅಲ್ಲಿನ ಮಾವು ಬೆಳೆಗಾರರಿಗೆ ಟನ್‌ಗೆ 4,000 ರೂ. ಬೆಂಬಲ ಬೆಲೆ ಘೋಷಿಸಿದೆ. ಮಾತ್ರವಲ್ಲದೆ ಜ್ಯೂಸ್ ಕಂಪನಿಗಳೊಂದಿಗೆ ಮಾತುಕತೆ ನಡೆಸಿ ಟನ್‌ಗೆ 8,000 ರೂ. ನೀಡುವಂತೆ ಮಾಡಿದೆ. ಇದರಿಂದ ಅಲ್ಲಿನ ರೈತರಿಗೆ ಟನ್‌ಗೆ 12,000 ರೂ.ಸಿಗಲಿದೆ.

ಹಣ್ಣಿನ ಜ್ಯೂಸ್ ಆಮದು:

ಮಾವು ಬೆಳೆಗಾರರ ಸಂಕಷ್ಟಕ್ಕೆ ಪ್ರಮುಖ ಕಾರಣ ಹಣ್ಣಿನ ಜ್ಯೂಸ್ ಆಮದು ಮಾಡಿಕೊಳ್ಳುತ್ತಿರುವುದು. ಸುಮಾರು 126 ದೇಶಗಳಿಂದ ಆಮದಾಗುತ್ತಿದ್ದು 2023ರ ಸೆಪ್ಟೆಂಬರ್‌ನಿಂದ ಅಕ್ಟೋಬರ್ ನಡುವೆ 7896 ಹಡಗುಗಳಷ್ಟು ಜ್ಯೂಸ್ ಆಮದಾಗಿದೆ. ಹೀಗಾಗಿ 2024ರ ಏಪ್ರಿಲ್ ನಿಂದ 2025ರ ಮಾರ್ಚ್‌ವರೆಗೆ ಭಾರತದಲ್ಲಿ ಉತ್ಪಾದನೆಯಾಗಿರುವ ಜ್ಯೂಸ್‌ನಲ್ಲಿ ಶೇ.70ರಷ್ಟು ಬಳಕೆಯಾಗಿಲ್ಲ. ಇದರಿಂದ ದೇಶದ ಫ್ಯಾಕ್ಟರಿಗಳು ಜ್ಯೂಸ್ ಉತ್ಪಾದಿಸುವ ಹಣ್ಣುಗಳ ಖರೀದಿಗೆ ಮುಂದಾಗುತ್ತಿಲ್ಲ.



ಹಣ್ಣಿನ ರಸ ಸಾಂದ್ರೀಕರಣದಲ್ಲಿ ಅಮೆರಿಕ, ಉಕ್ರೇನ್ ಮತ್ತು ರಷ್ಯಾಗಳು ಅಗ್ರ ಸ್ಥಾನದಲ್ಲಿವೆ. ಚೀನಾ ಮತ್ತು ವಿಯೆಟ್ನಾಂ ನಂತರದ ಸ್ಥಾನಗಳಲ್ಲಿವೆ. ಭಾರತ ತನಗೆ ಅಗತ್ಯವಾದ ಹೆಚ್ಚಿನ ಹಣ್ಣಿನ ರಸವನ್ನು ಚೀನಾ, ನೆದರ್‌ಲ್ಯಾಂಡ್ ಮತ್ತು ಅರ್ಜೆಂಟೀನಾಗಳಿಂದ ಆಮದು ಮಾಡಿಕೊಳ್ಳುತ್ತದೆ.

ಉತ್ಪಾದನೆ ವೆಚ್ಚ:

ಮಾವಿನ ಹಣ್ಣು ಬೆಳೆಯುವುದು ಅತ್ಯಂತ ಸೂಕ್ಷ್ಮ ಮತ್ತು ದುಬಾರಿ ಬಾಬತ್ತಾಗಿದೆ. ಒಂದು ಟನ್ ಮಾವು ಬೆಳೆಯಲು ಉತ್ಪಾದನಾ ವೆಚ್ಚ 12,000 ರೂ.ಗಳಾಗುತ್ತದೆ. ಆದರೆ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿರುವುದು ಕೇವಲ ಕೇವಲ 3,000 ರೂ. ಅದರಲ್ಲಿ 2,000 ರೂ. ಖರ್ಚು ತೆಗೆದರೆ ಉಳಿಯುವುದು 1,000 ರೂ. ಮಾತ್ರ. ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು(ಕೇಂದ್ರ ಮತ್ತು ರಾಜ್ಯ) ಎಂಐಎಸ್ (ಮಾರ್ಕೆಟ್ ಇನ್‌ಟರ್‌ವೆನ್‌ಷನ್ ಸ್ಕೀಂ) ಅಡಿಯಲ್ಲಿ ನೀಡುವ 4,000 ರೂ. ಸೇರಿದರೆ ಒಟ್ಟು 5,000 ಮಾತ್ರ ಗಿಟ್ಟುತ್ತದೆ. ಆಗಲೂ ಬೆಳೆಗಾರರು 7,000 ರೂ. ನಷ್ಟ ಅನುಭವಿಸಬೇಕಾಗುತ್ತದೆ.

ಕಾರ್ಖಾನೆಗಳ ಕೊರತೆ:

ಆಂಧ್ರದ ಚಿತ್ತೂರು ಮತ್ತು ತಮಿಳುನಾಡಿನ ಕೃಷ್ಣಗಿರಿಯಲ್ಲಿ 80ಕ್ಕೂ ಹೆಚ್ಚು ಹಣ್ಣಿನ ತಿರುಳು (ಪಲ್ಪ್/ಜ್ಯೂಸ್) ತೆಗೆಯುವ ಕಾರ್ಖಾನೆಗಳು ಇವೆ. ಕರ್ನಾಟಕದಲ್ಲಿ ಕೇವಲ ನಾಲ್ಕು ಕಾರ್ಖಾನೆಗಳು ಮಾತ್ರ ಇವೆ. ಇಲ್ಲಿ ರಾಜ್ಯದಲ್ಲಿ ಕಾರ್ಖಾನೆಗಳು ಆರಂಭವಾಗದಿರಲು ಹಲವಾರು ಕಾರಣಗಳಿವೆ. ಮೊದಲಿಗೆ ಕಾರ್ಖಾನೆಗಳಿಗೆ ಬೇಕಾಗಿರುವ ಮೂಲಸೌಲಭ್ಯವನ್ನು ಒದಗಿಸುತ್ತಿಲ್ಲ. ಅಂದರೆ ಭೂಮಿ, ನೀರು, ವಿದ್ಯುತ್ ಇತರೆ ಸೌಲಭ್ಯಗಳನ್ನು ರಾಜ್ಯ ಸರ್ಕಾರಗಳು ಕಲ್ಪಿಸುತ್ತಿಲ್ಲ. ಜೊತೆಗೆ ಆಂಧ್ರ ಮತ್ತು ತಮಿಳುನಾಡಿನಲ್ಲಿ ಉತ್ಪಾದಕರಿಗೆ ಮಾರುಕಟ್ಟೆ ಬೆಂಬಲ ಬೆಲೆ (ಎಮ್‌ಎಸ್‌ಪಿ), ಮಾರುಕಟ್ಟೆ ಮಧ್ಯಪ್ರವೇಶ ಯೋಜನೆ(ಎಂಐಎಸ್). ದರ ವ್ಯತ್ಯಾಸ ಪಾವತಿ ಯೋಜನೆ(ಪಿಡಿಪಿಎಸ್) ಸೌಲಭ್ಯವನ್ನು ನೀಡಲಾಗುವುದು.

ಮಧ್ಯಪ್ರವೇಶ ಯೋಜನೆಗೆ ಮಿತಿ:

ರಾಜ್ಯ ಸರ್ಕಾರ ಮಧ್ಯ ಪ್ರವೇಶ ಯೋಜನೆಯನ್ನು ಮಿತಿಗೊಳಿಸಿದೆ. ಇದು ರೈತರಿಗೆ ಮಾರಕವಾಗಿದೆ. ಈ ಯೋಜನೆಯಡಿ ರೈತನು ಬೆಳೆದಿರುವ ಎಲ್ಲಾ ಬೆಳೆಗೂ ಪರಿಹಾರ ಸಿಗುವುದಿಲ್ಲ. ಸರ್ಕಾರ ಪರಿಹಾರಕ್ಕೆ ಗರಿಷ್ಠ 2 ಹೆಕ್ಟೇರ್ ನಿಗದಿಪಡಿಸಿದೆ. ಅಂದರೆ 5 ಎಕರೆಗೆ ಮಾತ್ರ ಪರಿಹಾರ ನೀಡಲಾಗುವುದು. ಒಂದು ಎಕರೆಗೆ 2 ಟನ್ ಫಸಲು ಬಂದರೆ 5 ಎಕರೆಗೆ 10 ಟನ್ ಆಗುತ್ತದೆ. ಇದಕ್ಕಿಂತಲೂ ಹೆಚ್ಚು ಬೆಳೆದ ರೈತರಿಗೆ ಪರಿಹಾರ ಸಿಗುವುದಿಲ್ಲ.

ಬೆಲೆ ಕುಸಿತಕ್ಕೆ ಕಾರಣವಾದ ಪ್ರಮುಖ ಅಂಶಗಳು:

1. ಆಮದು ಮತ್ತು ರಫ್ತು ನೀತಿ.
2. ಚಿತ್ತೂರು ಸುತ್ತಮುತ್ತ ಪ್ರದೇಶ, ತಮಿಳುನಾಡಿನಲ್ಲಿ ಒಮ್ಮೆಗೆ ಹಣ್ಣು ಬಂದಿರುವುದು.
3. ಅಗತ್ಯ ಸಂಖ್ಯೆಯ ಜ್ಯೂಸ್ ಫ್ಯಾಕ್ಟರಿಗಳು ಇಲ್ಲದಿರುವುದು.
4. ವಿವಿಧ ದೇಶಗಳ ನಡುವಿನ ಯುದ್ಧಗಳು.
5. ಆಮದು ಜ್ಯೂಸ್‌ಗೆ ಕಡಿಮೆ ಜಿಎಸ್‌ಟಿ ಶೇ.16 ವಿಧಿಸುತ್ತಿರುವುದು.
6. ಆಮದಿಗೆ ರಿಯಾಯಿತಿ ನೀಡುತ್ತಿರುವುದು.

ರೈತರ ಬೇಡಿಕೆಗಳು:

1. ಪ್ರತಿ ಟನ್‌ಗೆ 15,000 ರೂ. ಪಾವತಿಸಬೇಕು.
2. ಪ್ರತಿ ರೈತನಿಗೆ 2ಹೆಕ್ಟೇರ್ ಮಿತಿಯನ್ನು 5 ಹೆಕ್ಟೇರ್‌ಗೆ ಹೆಚ್ಚಿಸಬೇಕು.
3. 2 ಹೆಕ್ಟೇರ್‌ಗೆ 10 ಟನ್ ಇರುವುದನ್ನು ಮರು ಪರಿಶೀಲನೆ ಮಾಡಿ 25 ಟನ್‌ಗೆ ಹೆಚ್ಚಿಸಬೇಕು.
4. ಸ್ಥಳೀಯವಾಗಿ ಕಾರ್ಖಾನೆಗಳ ಸ್ಥಾಪನೆಗೆ ಸರ್ಕಾರ ಪ್ರೋತ್ಸಾಹ ನೀಡಬೇಕು.
5. ಸಹಕಾರಿ ರಂಗದ ಸಫಲನಂತಹ ಇನ್ನಷ್ಟು ಸಂಸ್ಥೆಗಳನ್ನು ಸ್ಥಾಪಿಸಬೇಕು.
6. ಪ್ರಾಥಮಿಕ ಮತ್ತು ಪ್ರೌಢಶಾಲೆ ಮಕ್ಕಳಿಗೆ ಮಧ್ಯಾಹ್ನದ ಊಟದ ಜೊತೆಗೆ ಹಣ್ಣಿನ ರಸ ಪ್ಯಾಕೆಟ್ ನೀಡುವುದು.
7. ಮಾವಿನ ಅಭಿವೃದ್ಧಿ ಮತ್ತು ಮಾರುಕಟ್ಟೆ ಮಧ್ಯಪ್ರವೇಶಕ್ಕೆ ವರ್ಷಕ್ಕೆ ಸಾವಿರ ಕೋಟಿ ರೂ. ಮೀಸಲಿಡುವುದು.
8. ವಿದೇಶಿ ಹಣ್ಣುಗಳ ರಸದ ಮೇಲೆ ನಿಯಂತ್ರಣ ಹೇರಬೇಕು.

ಸಾವಿರ ಮನೆಗಳಿಗೆ ಭೇಟಿ ನೀಡಿ, ಸಮ್ಮೇಳನದ ಸಂದೇಶವನ್ನು ಜನರಿಗೆ ತಲುಪಿಸಿದ್ದರು.

ರಾಜ್ಯಾದ್ಯಂತ ವಿವಿಧ ಸ್ಥಳಗಳಲ್ಲಿ ಸಾಮಾಜಿಕ ಮತ್ತು ರಾಜಕೀಯ ವಿಷಯಗಳ ಬಗ್ಗೆ ಸೆಮಿನಾರ್‌ಗಳು ಹಾಗೂ ಚಲನಚಿತ್ರೋತ್ಸವ, ನಾಟಕೋತ್ಸವ ಮತ್ತು ಪ್ರದರ್ಶನಗಳು ಸೇರಿದಂತೆ ಸಾಂಸ್ಕೃತಿಕ ಸಮಾರಂಭಗಳನ್ನು ನಡೆಸಲಾಯಿತು. ವಿದ್ಯಾರ್ಥಿನಿಯರ ಸಮ್ಮೇಳನ, ವಿದ್ಯಾರ್ಥಿಗಳ ಮ್ಯಾರಾಥಾನ್ ಹಾಗೂ ಕ್ರೀಡಾ ಸ್ಪರ್ಧೆಗಳಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಉತ್ಸಾಹವನ್ನು ಹೆಚ್ಚಿಸಿದ್ದವು.

ಸಮ್ಮೇಳನದ ಭಾಗವಾಗಿ ಧ್ವಜ ಜಾಥಾ ಇಡುಕ್ಕಿಯ ಕಾಮ್ರೇಡ್ ಧೀರಜ್ ಸ್ಮಾರಕ ಪೈನಾವು ಇಂಜಿನಿಯರಿಂಗ್ ಕಾಲೇಜಿನಿಂದ, ಧ್ವಜ ಸ್ತಂಭ ಜಾಥಾ ಹುತಾತ್ಮ ಕೆ.ವಿ.ಸುಧೀಶ್ ರವರ ಗ್ರಾಮವಾದ ಕೂದುಪರಂಬದಿಂದ ಹಾಗೂ ಹುತಾತ್ಮ ಜ್ಯೋತಿ ಜಾಥ ಹುತಾತ್ಮರಾದ ಸಂಗಾತಿ ಸೋಮು ಹಾಗೂ ಸಿಂಬುರವರ ತ್ಯಾಗರಾಜ ಕಾಲೇಜು ಆಫ್ ಇಂಜಿನಿಯರಿಂಗ್, ತಿರುಪರಕುಂಡ್ರಂನಿಂದ ಆರಂಭವಾಗಿ ಜೂನ್ 26ರಂದು ಕೇರಳದ ಕೊಯಿಕೋಡ್‌ಗೆ ತಲುಪಿದವು. ನೂರಾರು ಸಂಖ್ಯೆಯ ವಿದ್ಯಾರ್ಥಿಗಳು ಈ ಜಾಥಾಗಳನ್ನು ಸುರಿವ ಜೋರಾದ ಮಳೆಯ ನಡುವೆಯೂ ಉತ್ಸಾಹದಿಂದ ಸ್ವಾಗತಿಸಿದರು.

ಬಹಿರಂಗ ಸಭೆಯಲ್ಲಿ 30,000 ಕ್ಕೂ ಹೆಚ್ಚು ಜನರ ಭಾಗಿ

ಸಮ್ಮೇಳನದ ಬಹಿರಂಗ ಸಭೆಗೆ 30 ಸಾವಿರಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು– ಪೋಷಕರು ಬೃಹತ್ ಹಾಗೂ ಆಕರ್ಷಕ ಮೆರಣಿಗೆಯೊಂದಿಗೆ ಆಗಮಿಸಿದ್ದರು. ಬಹಿರಂಗಸಭೆಯ ಉದ್ಘಾಟನೆಯನ್ನು ಕೇರಳ ರಾಜ್ಯದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೆರವೇರಿಸಿದರು. ವಿಶೇಷ ಅಹ್ವಾನಿತರಾಗಿ ಆಗಮಿಸಿದ್ದ ಹುತಾತ್ಮ ಸಂಗಾತಿ ಧೀರಜ್ ಅವರ ತಂದೆ–ತಾಯಿ ಸಮ್ಮೇಳನದ ಬಹಿರಂಗ ಸಭೆಗೆ ಆಗಮಿಸಿದ್ದ ಎಲ್ಲರಿಗೂ ಶುಭಾಶಯಗಳನ್ನು ತಿಳಿಸಿ ಮಾತನಾಡಿದರು.

ವರದಿ: ಭೀಮನಗೌಡ ಸುಂಕೇಶ್ವರಹಾಳ್

ಅವರನ್ನು ತುಂಡು ತುಂಡು ಮಾಡಿ........ ಪುಟ 2 ರಿಂದ

ಬಂಧನದ ವಿರುದ್ಧ ದುಡಿಯುವ ಜನರ ಪ್ರತಿಭಟನೆ

ಲೆವೆಲರ್ಸ್ ನಾಯಕರುಗಳ ಬಂಧನ ಲಂಡನ್ ನಗರದ ಕುಶಲ ಕರ್ಮಿಗಳು, ಅಪ್ರೆಂಟಿಸ್‌ಗಳು, ಇತರ ದುಡಿಯುವ ಜನರ ನಡುವೆ ಸಂಚಲನ ಉಂಟುಮಾಡಿತು. ವಿವಿಧ ಪ್ರಾಂತ್ಯಗಳು, ಜಿಲ್ಲೆಯಲ್ಲಿದ್ದ ಲೆವೆಲರ್ಸ್ ಸಂಘಟನೆಯ ನಡುವೆ ಹರಡಿತು. ನಾಲ್ಕಾರು ದಿನದ ಒಳಗೆ ಲೆವೆಲರ್ಸ್ ನಾಯಕರನ್ನು ಬಿಡುಗಡೆ ಮಾಡಬೇಕೆಂಬ ಒತ್ತಾಯವನ್ನೊಳಗೊಂಡ ಹತ್ತಾರು ಸಾವಿರ ಜನರ ಸಹಿ ಉಳ್ಳ ಮನವಿಯನ್ನು ತುಂಡು ಪಾರ್ಲಿಮೆಂಟ್‌ಗೆ ಸಲ್ಲಿಸಲಾಯಿತು.

ಈ ಮಧ್ಯೆ ಇಂಗ್ಲೆಂಡ್‌ನಲ್ಲಿ ರಾಜಪ್ರಭುತ್ವದ ವಿರುದ್ಧ ಇದ್ದ, ಧಾರ್ಮಿಕ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯದ ಪರವಾಗಿದ್ದ ಕೆಲವು ಕ್ರಿಶ್ಚಿಯನ್ ಪಂಥಗಳೂ ಕೂಡಾ ಲೆವೆಲರ್ಸ್‌ಗಳೊಡನೆ ಸಂಬಂಧ ಕಡಿದುಕೊಂಡರು. ಅವರ ವಿರುದ್ಧ ಕಿರುಪುಸ್ತಿಕೆಯನ್ನು ಪ್ರಕಟಿಸಿದರು. ಜೈಲಿಗೆ ಭೇಟಿ ನೀಡಿ ಅವರು ಕ್ಷಮಾಪಣೆಗಾಗಿ ಮನವಿ ಮಾಡಬೇಕೆಂದು ಒತ್ತಾಯಿಸಿದರು. ಹಿಂದೆ ಲೆವೆಲರ್ಸ್ ಜೊತೆಗಾರರಾಗಿದ್ದ ಈಗಿನ ಆಳುವವರೊಡನೆ, ಈ ಕ್ರಿಶ್ಚಿಯನ್ ಪಂಥಗಳೂ ಸೇರಿಕೊಂಡು ಲೆವೆಲರ್ಸ್‌ಗಳನ್ನು ಒಂಟಿಯಾಗಿಸಿದರು. ಅವರ ಮೇಲೆ ಕಲ್ಲು ಬೀಸಲು ಪ್ರಾರಂಭಿಸಿದರು. ಆಗ ಲೆವೆಲರ್ಸ್‌ಗಳು ಧಾರ್ಮಿಕ ನಂಬಿಕೆಗಳು, ಅದರ ಕಟ್ಟಲೆಗಳನ್ನು ಪಾಲಿಸುವುದು ಅಥವಾ ಪಾಲಿಸದಿರುವುದು ಏನೇ ಇರಲಿ ವ್ಯಕ್ತಿಗಳು ಜನತೆಯ ಹಿತಕ್ಕೆ ಎಷ್ಟು ಬದ್ಧನಾಗಿದ್ದಾನೆ, ತನ್ನ ನೆರೆ ಹೊರೆಯವರ ಜೊತೆ ಯಾವ ನಡವಳಿಕೆ ಹೊಂದಿದ್ದಾನೆ ಎಂಬುದಷ್ಟೇ ಆಡಳಿತದಲ್ಲಿ ಮುಖ್ಯ ಎನಿಸಿಕೊಳ್ಳುತ್ತದೆ ಎಂದರು. ಇವರೆಲ್ಲರೂ ಕ್ರಿಶ್ಚಿಯನ್ ಧರ್ಮದ ಬೈಬಲ್ ನಿಷ್ಠ ಸರಳ ಪಂಥ ಪ್ಯೂರಿಟನ್ ಪಂಥಕ್ಕೆ ಸೇರಿದ್ದರೂ ಸೆಕ್ಯುಲರ್ ತತ್ವದ ಆರಂಭಿಕ ವಿಚಾರಗಳನ್ನು ಪ್ರತಿಪಾದಿಸಿದರು.

ಗ್ರಾಂಡಿಗಳು ಲೆವೆಲರ್ಸ್ ವಿರುದ್ಧ, ಇವರು ರಾಜ, ರಾಣಿಯರ ಏಜೆಂಟ್‌ಗಳಾಗಿದ್ದಾರೆ ರಾಜಪರ ಶಕ್ತಿಗಳೊಂದಿಗೆ, ಕ್ಯಾಥೋಲಿಕ್ ಪರ ಪಂಥಗಳೊಂದಿಗೆ ಸೇರಿ ಸಂಚು ನಡೆಸುತ್ತಿದ್ದಾರೆ, ಇವರು ಅರಾಜಕತಾವಾದಿಗಳು, ಬೈಬಲ್‌ನ ಮೇಲೆ ನಿಷ್ಠೆಯಿಲ್ಲದ ನಾಸ್ತಿಕರು ಎಂದೆಲ್ಲ ಅಪಪ್ರಚಾರದ ಸುರಿಮಳೆಗೈದರು. (ಆಳುವ ವರ್ಗಗಳು, ಇಂದೂ ತಾನು ನೇರವಾಗಿ ಎದುರಿಸಲಾಗದ ದುಡಿಯುವ ವರ್ಗಗಳ ಚಳವಳಿ ಮತ್ತು ಸಂಘಟನೆಗಳ ವಿರುದ್ಧ ಈಗಲೂ ಹಬ್ಬಿಸುವ ಅಪಪ್ರಚಾರಗಳ ಪ್ರತಿರೂಪದಂತಿದೆಯಲ್ಲವೇ.) ಮತ್ತೊಂದು ಕಿರುಪುಸ್ತಿಕೆಯ ಮೂಲಕ ಇವುಗಳಿಗೆ ಸರಿಯಾದ ಉತ್ತರವನ್ನು ಲೆವೆಲರ್ಸ್ ನಾಯಕರು ನೀಡಿದರು.

ಈ ಎಲ್ಲ ಅಪಪ್ರಚಾರಗಳ ನಡುವೆಯೂ, ಕ್ರಿಶ್ಚಿಯನ್ ಪಂಥಗಳೂ ಅದಕ್ಕೆ ಕೈ ಜೊಡಿಸಿದ್ದರ ನಡುವೆಯೂ ಜನರು ಲೆವೆಲರ್ಸ್‌ಗಳ ಬಿಡುಗಡೆಗಾಗಿ ಮತ್ತೂ ಒಂದು ಮನವಿ ಅರ್ಪಿಸಿದರು. ಅಷ್ಟೇ ಅಲ್ಲ ಇಂಗ್ಲೆಂಡ್‌ನ ಚರಿತ್ರೆಯಲ್ಲಿಯೇ ಮೊದಲ ಬಾರಿಗೆ ಮಹಿಳೆಯರು ರಾಜಕೀಯ ರಂಗಕ್ಕೆ ಇಳಿದರು. ತಾವೂ ಒಂದು ಪ್ರತ್ಯೇಕ ಮನವಿ ಮಾಡಿದರು. ಲಂಡನ್‌ನ ಅಪ್ರೆಂಟಿಸ್‌ಗಳು, ಸೈನಿಕರು ಕೂಡಾ ಪ್ರತ್ಯೇಕ ಮನವಿ ಅರ್ಪಿಸಿದರು.

ಈ ಕಡೆ ಜನರ ಪ್ರೀತಿಗೂ, ಆ ಕಡೆ ತಮ್ಮ ವಿರುದ್ಧ ನಡೆಯುತ್ತಿದ್ದ ಅಪಪ್ರಚಾರಗಳಿಗೂ ಉತ್ತರ ನೀಡುವಂತೆ ಅಗ್ರಿಮೆಂಟ್ ಆಫ್ ಪೀಪಲ್ ಎಂಬ ಸಂವಿಧಾನದ ಪ್ರಸ್ತಾವಗಳನ್ನು ಮತ್ತಷ್ಟು ಉತ್ತಮಗೊಳಿಸಿ ಮುಂದಿಟ್ಟರು.(ಹಿಂದಿನ ಲೇಖನವೊಂದರಲ್ಲಿ ನೀಡಿದ ವಿವರಗಳನ್ನು ನೆನಪಿಸಿಕೊಳ್ಳೋಣ)

ಇದು 'ಸುಂಕ ಸಮರ'ವಲ್ಲ, ವ್ಯಾಪಾರದ ಮೇಲೆ 'ಸಾಮ್ರಾಜ್ಯಶಾಹಿ ಮತ್ತು ಟ್ರಂಪ್‌ನ ಯುದ್ಧ' ಎಂಬ ವಿಷಯದ ಕುರಿತು 'ಇ.ಎಂ.ಎಸ್. ಭವನ ಅಧ್ಯಯನ ವೃತ್ತ'ದ ಉಪನ್ಯಾಸ ಸರಣಿ–2, ಜೂನ್ 7, 2025ರಂದು ಇ.ಎಂ.ಎಸ್. ಭವನದಲ್ಲಿ ನಡೆಯಿತು. ಆರ್ಥಿಕ ವಿಷಯದ ಪತ್ರಕರ್ತರು, ದಿ ಹಿಂದೂ, ಫ್ರಂಟ್‌ಲೈನ್ ನಿಯತಕಾಲಿಕಗಳ ನಿವೃತ್ತ ಸಹಾಯಕ ಸಂಪಾದಕರಾದ ವಿ.ಶ್ರೀಧರ್ ರವರು ಈ ಕುರಿತು ಮುಖ್ಯ ವಿಚಾರ ಮಂಡಿಸಿದರು. ಆರಂಭದಲ್ಲಿ ಅಧ್ಯಯನ ವೃತ್ತದ ಸಂಚಾಲಕರಾದ ಆರ್.ರಾಮಕೃಷ್ಣ ಪ್ರಾಸ್ತಾವಿಕ ಮಾತುಗಳನ್ನು ಆಡಿದರು. ಜನವರಿ 2025ರಲ್ಲಿ ಟ್ರಂಪ್ ಅಮೆರಿಕದ ಅಧ್ಯಕ್ಷನಾದ ಮೇಲೆ 'ಅಮೆರಿಕ ಮೊದಲು' ಎಂಬ ನೀತಿಯನ್ನು ಘೋಷಿಸಿ ಹಲವಾರು ಬದಲಾವಣೆಗಳನ್ನು ತರಲಾಗಿದೆ. ಬೇರೆ ಬೇರೆ ದೇಶಗಳಲ್ಲಿ ಬಂಡವಾಳ ಹೂಡಿ ಉತ್ಪಾದನೆ ಮಾಡುತ್ತಿರುವ ಅಮೆರಿಕದ ಕಂಪನಿಗಳನ್ನು ಸ್ವಂತ ದೇಶದಲ್ಲೇ ಉತ್ಪಾದನೆ ಮಾಡಬೇಕೆಂದು ಆಹ್ವಾನಿಸಲಾಗುತ್ತಿದೆ. ಭಾರತವೂ ಸೇರಿದಂತೆ, ಅಮೆರಿಕಕ್ಕೆ ಬೇರೆ ಬೇರೆ ದೇಶಗಳಿಂದ ಬರುವ ವಸ್ತುಗಳ ಮೇಲೆ ವಿಪರೀಪ ಸುಂಕವನ್ನು ಹೇರಿ, ಜಾಗತಿಕ ವ್ಯಾಪಾರದಲ್ಲಿ ತೀವ್ರವಾದ ಅಲ್ಲೋಲ ಕಲ್ಲೋಲವಾಗಿದೆ. ಈ ಬೆಳವಣಿಗೆಗಳ ಹಿಂದಿನ ಕಾರಣಗಳೇನು? ಭಾರತದ ಮೇಲೆ, ಭಾರತದ ಜನ ಸಾಮಾನ್ಯರ ಮೇಲೆ ಈ ನೀತಿಯ ಪರಿಣಾಮವೇನು ಎಂದು ಕಂಡುಕೊಳ್ಳುವುದು, ಸಮಸ್ಯೆಯ ಪರಿಹಾರದ ದಾರಿಯ ಮೇಲೆ ಬೆಳಕು ಚೆಲ್ಲುವುದು ಈ ಉಪನ್ಯಾಸ ಮತ್ತು ಸಂವಾದದ ಮುಖ್ಯವಾದ ಉದ್ದೇಶ ಎಂದು ರಾಮಕೃಷ್ಣ ಹೇಳಿದರು. ಈ ಮುಂದಿನದು ವಿ.ಶ್ರೀಧರ ರವರು ಮಂಡಿಸಿದ ವಿಷಯ. ಅವರದೇ ಮಾತುಗಳಲ್ಲಿ.

ಇದು 'ಸುಂಕ ಸಮರ'ವಲ್ಲ, ವ್ಯಾಪಾರದ ಮೇಲೆ ಸಾಮ್ರಾಜ್ಯಶಾಹಿ ಮತ್ತು ಟ್ರಂಪ್‌ನ ಯುದ್ಧ

'ಸುಂಕ ಸಮರ ಅಲ್ಲ'– ಸಾಮ್ರಾಜ್ಯ ಶಾಹಿ ಆಕ್ರಮಣ

'ಸುಂಕ ಸಮರ' ಎನ್ನಲಾಗಿರುವ ಈ ಬೆಳವಣಿಗೆಯು ಸಾಮ್ರಾಜ್ಯಶಾಹಿಯು ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಅನ್ನುವದರ ಸೂಚನೆಯಾಗಿದೆ. ಎರಡನೇ ಮಹಾಯುದ್ಧದ ನಂತರ ಜಪಾನ್, ಬ್ರಿಟನ್, ಅಮೇರಿಕ ಒಂದಾಗಿದ್ದವು. ಈಗ ಅವರ ಸಂಬಂಧಗಳಲ್ಲಿಯೇ ಒಂದು ಬಿರುಕು ಮೂಡಿದೆ ಅನ್ನುವುದನ್ನು ನಮ್ಮ ಮುಂದೆ ಟ್ರಂಪ್ ತೆರೆದಿಟ್ಟಿದ್ದಾರೆ. ನಮ್ಮ ಮಾಧ್ಯಮಗಳು ಟ್ರಂಪ್‌ರವರನ್ನು ಹುಚ್ಚು ಮನುಷ್ಯ ಎಂದು ಬಿಂಬಿಸುವುದನ್ನು ನಾವು ಒಪ್ಪಲು ಸಾಧ್ಯವಿಲ್ಲ. ಯಾಕೆಂದರೆ ಟ್ರಂಪ್ ಹುಚ್ಚನೆ ಆಗಿದ್ದರೆ ತನ್ನ ಹಿತಾಸಕ್ತಿಯನ್ನು ಸರಳವಾಗಿ ಮುಂದುವರಿಸಲು ಸಾಧ್ಯವಾಗುತ್ತಿರಲಿಲ್ಲ. 'ರೆಸಿಪ್ರೋಕಲ್ ಟ್ಯಾರಿಫ್' ಅನ್ನುವ ಪರಿಕಲ್ಪನೆಯನ್ನು 'ಪರಸ್ಪರ ಶುಲ್ಕ' ಎಂದು ಭಾವಿಸಲು ಸಾಧ್ಯವಿಲ್ಲ. ಕಾರಣ ಈ ಪರಿಕಲ್ಪನೆಯಿಂದ ಬಡ ದೇಶಗಳ ಮೇಲೆ ಅಮೇರಿಕ ನಿರಂತರ ಶೇಕಡ ಶೇ. 40 ರಷ್ಟು ತೆರಿಗೆ ಹೇರುತ್ತಿದೆ. ತನ್ನ ತೆರಿಗೆಯ ಉತ್ಸಾಹ ಎಷ್ಟರಮಟ್ಟಿಗೆ ಪ್ರಪಂಚದ ದೇಶಗಳ ಮೇಲೆ ಪ್ರಯೋಗಿಸಲು ಹೊರಟಿದೆಯೆಂದರೆ, ಮಡಗಾಸ್ಕರ್ ಎಂಬ ಚಿಕ್ಕ ದೇಶ ವೆನಿಲವನ್ನು ಉತ್ಪಾದನೆ ಮಾಡಿ, ಇಡೀ ವಿಶ್ವಕ್ಕೆ ಶೇ. 80ರಷ್ಟು ಪೂರೈಸುತ್ತಿರುವ ದೇಶ. ತನ್ನ ಕಾಲ ಮೇಲೆ ತಾನು ನಿಲ್ಲಲು ಸಾಧ್ಯವಾಗದ ಈ ದೇಶಕ್ಕೆ ಅಮೆರಿಕ ಶೇ. 40 ರಷ್ಟು ಸುಂಕ ವಿಧಿಸಿದೆ. ಅಷ್ಟೇ ಅಲ್ಲದೆ ಜನ ವಾಸವೇ ಇಲ್ಲದ ಅಟ್ರಾಂಟಿಕ ದ್ವೀಪಕ್ಕೂ ಸುಂಕ ವಿಧಿಸಿರುವುದು ಅಮೆರಿಕದ ನಿರ್ದಯತೆ ತೋರಿಸುತ್ತದೆ.

'ಆಮದಿಗೆ ಒತ್ತಡ' ಗಾಜಾ ನರಮೇಧದಂತೆ..

ಮೇಲೆ ತಿಳಿಸಿದಂತಹದ್ದೇ ಪರಿಸ್ಥಿತಿ ನಮ್ಮ ಭಾರತಕ್ಕೂ ಇದೆ. ಭಾರತದಿಂದ ರಫ್ತು ಆಗುವಷ್ಟು ಅಮೇರಿಕದಿಂದ ಆಮದು ಮಾಡಿಕೊಳ್ಳುವಂತೆ ಒತ್ತಡ ಹೇರುವುದು ಗಾಜಾ ನರಮೇಧದಷ್ಟೇ ಆತಂಕಕಾರಿ. ಅಮೆರಿಕದ ವಸ್ತು ಉತ್ಪಾದಕಗಳನ್ನು ತನ್ನದಾಗಿಸಿಕೊಳ್ಳಲು ಭಾರತ ಸದೃಢವಾಗಿಲ್ಲ. ಗಾಜಾದಲ್ಲಿ ಯುದ್ಧವೆಂದು ಹೇಳಿಕೊಂಡರೂ, ಅಲ್ಲಿ ಆಗುತ್ತಿರುವುದು ಮಾತ್ರ ಒಂದೇ ಕಡೆಯಿಂದ ನಡೆಯುತ್ತಿರುವ ನಿರಂತರ ವಿನಾಶಕಾರಿ ದಾಳಿ, ಮಾರಣಹೋಮ. ಅಮೇರಿಕವು ಬಡ ರಾಷ್ಟ್ರಗಳ ಮೇಲೆ ತನ್ನ ಸುಂಕದ ಮೂಲಕ ಮಾಡುವ ದಾಳಿ ಮತ್ತು ಮಾರಣಹೋಮ ಗಾಜಾದಷ್ಟೆ ಅಪಾಯಕಾರಿ ಸಂಗತಿ. ಈ ಸುಂಕದ ತಿಕ್ಕಾಟವು ಜಗತ್ತು ಅಪ್ಪಿಕೊಂಡಿರುವ ಸುಂಕ ರಹಿತ–ನಿರ್ಬಂಧ ರಹಿತ–ಮುಕ್ತ ವ್ಯಾಪಾರ ಎನ್ನಲಾಗುವ 'ನವ ಉದಾರಿಕರಣ'ದ ತನ್ನ ಮಾರ್ಗದ ಕೊನೆ ಹಾಗೂ ಅಂತ್ಯ ತಲುಪಿದೆ ಅನ್ನುವುದನ್ನು ತೋರಿಸುತ್ತದೆ. ಮತ್ತು ಅದು ಅಮೆರಿಕ ರಾಜಕೀಯ ಸಿದ್ಧಾಂತ–ತತ್ವ ಮಾತ್ರವಾಗಿ ಉಳಿಸಿಕೊಂಡಿರುವುದು ಕಾಣಬಹುದು. ಎರಡನೇ ಪ್ರಪಂಚ ಯುದ್ಧವಾದ ನಂತರ ಜಾಗತಿಕವಾಗಿ ಸೋವಿಯತ್ ರಷ್ಯಾ ಅಸ್ತಿತ್ವದಲ್ಲಿ ಇದ್ದುದರಿಂದ ಜಾಗತಿಕ ಸಮತೋಲನ ಸಾಧ್ಯವಾಗಿತ್ತು. ಸಣ್ಣ ಸಣ್ಣ ದೇಶಗಳು ಉತ್ಪಾದನೆ ಮಾಡುತ್ತಿರುವಾಗ ಅಭಿವೃದ್ಧಿ ಹೊಂದಿದ ಬಲಿಷ್ಠ ದೇಶಗಳು ಅದರ ಲಾಭ ಅನುಭವಿಸುತ್ತಿರುವಾಗ, ಸಣ್ಣ ದೇಶಗಳು ಮೌಲ್ಯ ವರ್ಧನೆ ಮಾಡುವಲ್ಲಿ ವಿಫಲವಾಗಿವೆ. ಕಾರಣ ಅಭಿವೃದ್ಧಿ ಹೊಂದಿದ ದೇಶಗಳು ಸಣ್ಣ ದೇಶಗಳು ಮೌಲ್ಯವರ್ಧನೆ ಮಾಡುವಲ್ಲಿ ನಿಗ್ರಹ ಮಾಡುತ್ತಿವೆ. ಉದಾಹರಣೆಗೆ ಕೃಷಿಯಿಂದ ಆಗುವ ಉತ್ಪಾದನೆಯನ್ನು ಸರ್ಕಾರ ತನ್ನ ಬೊಕ್ಕಸಕ್ಕೆ ಇಟ್ಟು ರೈತರಿಗೆ ಬೆಂಬಲ ಬೆಲೆ ನೀಡುವಲ್ಲಿ ಪ್ರಯಾಸ ಮಾಡಬೇಕಿತ್ತು. ಹೀಗಿರುವಾಗ ಸರಕಾರ ರೈತರಿಗೆ ಬೆಂಬಲ ಬೆಲೆ ನೀಡದೆ ಇರಲು ಹೊರಗಿನ ಶಕ್ತಿಗಳು ಒತ್ತಡ ಹೇರುತ್ತಿವೆ. ಸುಮಾರು 50 ವರ್ಷಗಳ ಹಿಂದೆ, ವಿಶ್ವಸಂಸ್ಥೆಯ ವಾಣಿಜ್ಯ ಒಪ್ಪಂದ 1976ರ ಪ್ರಕಾರ ಡಾಲರ್‌ನ ಬೆಲೆ ನಿಗದಿ ಮಾಡಲಾಗಿತ್ತು.

ಈ ಸಮಕಾಲಿನ ಸಂದರ್ಭದಲ್ಲಿ ಡಾಲರ್‌ನ ಬೆಲೆ ಏರಿಕೆಯಾಗಿದ್ದರೂ, ಅದರಂತೆ ಬೆಂಬಲ ಬೆಲೆ ಕೊಡಲು ಸಾಧ್ಯವಿಲ್ಲ ಎಂದು ಹೇಳುವಾಗ ಮೌಲ್ಯವರ್ಧನೆಗಳು ಒಂದು ಭ್ರಮೆಯಾಗಿ ಉಳಿದಿದೆ. ಈಗ ಸಾರ್ವಜನಿಕ ವೆಚ್ಚಗಳನ್ನು ಹೆಚ್ಚು ಮಾಡುವ ಮೂಲಕ ಮೌಲ್ಯವರ್ಧನೆ ಹೆಚ್ಚಿಸಿಕೊಳ್ಳುವ ಸ್ಥಿತಿಯಲ್ಲಿ ನಾವಿದ್ದೇವೆ. ಸುದೀರ್ಘ ಕಾಲ ಬಾರಿ ಪ್ರಮಾಣದಲ್ಲಿ ಜಾಗತಿಕ ಪರಿಸರವನ್ನು ನಾಶಗೊಳಿಸಿದ ಮುಂದುವರೆದ ದೇಶಗಳು, ಪರಿಸರ ಸ್ನೇಹಿ ದೇಶಗಳು, ಬಡ ದೇಶಗಳೂ ಸಹ ಜಾಗತಿಕ ಪರಿಸರ ಸಂರಕ್ಷಣೆಗೆ ಸಂಪನ್ಮೂಲಗಳನ್ನು ಕೊಡುವಂತೆ ಒತ್ತಾಯ ಮಾಡುತ್ತಿದ್ದಾರೆ. ಅಮೆರಿಕ ಮತ್ತು ಭಾರತದ ಪರಮಾಣು ಒಪ್ಪಂದ ಆದ ಸಮಯದಲ್ಲಿ ಭಾರತಕ್ಕೆ ಬೋಯಿಂಗ್ ವಿಮಾನ ಕೊಳ್ಳುವಂತೆ ಮಾಡಿ, ಭಾರತ ಸರಕಾರದ ಒಡೆತನದಲ್ಲಿದ್ದ ವಿಮಾನಯಾನ ಸಂಸ್ಥೆ 'ಏರ್ ಇಂಡಿಯಾ'ಗೆ ನಷ್ಟವಾಗುವಂತೆ ಮಾಡಿ, ಖಾಸಗೀಕರಣಕ್ಕೆ ಒಪ್ಪಿಸುವಂತಾಯಿತು. 2008ರಲ್ಲಿ ಉಂಟಾದ ಜಾಗತಿಕ ಆರ್ಥಿಕ ಕುಸಿತದಿಂದ 17 ವರ್ಷಗಳ ನಂತರವೂ ಸಹ ಜಪಾನ್, ಜರ್ಮನಿ, ಯುರೋಪ್‌ಗಳಂತಹ ದೇಶಗಳು ಸುಧಾರಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಆರ್ಥಿಕತೆಯಲ್ಲಿ ಸುಧಾರಿಸಿಕೊಂಡ ದೇಶವೆಂದರೆ ಚೀನಾ. ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮಗಳಿಂದ ಹೊರಬರಲು ಚೀನಾವು ಆಂತರಿಕವಾಗಿ ಮೂಲಭೂತ ಸೌಕರ್ಯಗಳ ನಿರ್ಮಾಣದಲ್ಲಿ ಬಹಳ ದೊಡ್ಡ ಹೂಡಿಕೆ ಮಾಡಿತು. ಟ್ರಂಪ್‌ನ ಎರಡು ಕಾಲಾವಧಿಯಲ್ಲಿಯೂ ಅಮೆರಿಕದಿಂದ ಆಮದು ಮತ್ತು ಚೀನಾದಿಂದ ಅಮೆರಿಕಕ್ಕೆ ಆಗುವ ರಫ್ತು ಕಡಿಮೆ ಮಾಡಿಕೊಂಡು ಅಮೆರಿಕ ಮೇಲಿನ ಅವಲಂಬನೆ ಇಲ್ಲದಂತೆ, ತನ್ನ ಆರ್ಥಿಕತೆ ಸಾಮರ್ಥ್ಯವನ್ನು ತೋರಿಸಿದೆ. ಉತ್ಪಾದನೆ ಮಾಡುವ ಸಣ್ಣ ಸಣ್ಣ ದೇಶಗಳು ತನ್ನ ಉತ್ಪಾದನೆಯ ಮೌಲ್ಯವನ್ನು ಅಭಿವೃದ್ಧಿ ಹೊಂದಿದ ದೇಶಗಳು ನಿಯಂತ್ರಿಸಿ, ಮೌಲ್ಯ ಕುಗ್ಗಿಸಿ, ಸ್ವ ಅಭಿವೃದ್ಧಿ ಹೊಂದುತ್ತಿರುವುದನ್ನು ಕಾಣಬಹುದು. ಅವರು ಮೌಲ್ಯವರ್ಧನೆಯು ಒಂದು ಭ್ರಮೆಯಾಗಿ ಉಳಿದಿದೆ.

ವಾಣಿಜ್ಯ : ಸರಕಾರದ ಪಾತ್ರ ಮುಖ್ಯ

ವಾಣಿಜ್ಯ ಒಪ್ಪಂದದ ಬಗ್ಗೆ ಆರ್ಥಿಕತಜ್ಞರು ಹೇಳುವಂತೆ ಶತಮಾನಗಳ ಕಾಲ ಸಾಧ್ಯವಾಗುವ ಉತ್ಪನ್ನಗಳನ್ನು ಮಾಡುತ್ತಾ, ಉತ್ಪಾದನೆಯಾಗದ ಉತ್ಪಾದನೆಯನ್ನು ವಿಸರ್ಜಿಸುವಂತೆ ತಮ್ಮ ನಿಲುವನ್ನು ಹಂಚಿಕೊಂಡಿದ್ದರು. ಈ ಸಿದ್ಧಾಂತದಿಂದ ದಾಖಲೆಯ ಬೆಳವಣಿಗೆಯ ಉತ್ಪನ್ನ ಮಾಡಲು ಸಾಧ್ಯವಿಲ್ಲ. ಬದಲಾದ ಕಾಲಮಾನದಂತೆ ನಮ್ಮ ಶಕ್ತಿಯನ್ನು ಬದಲಾಯಿಸಿಕೊಳ್ಳದಿದ್ದರೆ ನಮ್ಮ ಉಳಿವು ಸಾಧ್ಯವಿಲ್ಲ. ಭಾರತದಲ್ಲಿ ಸರಕಾರ ವಾಣಿಜ್ಯ ಚಟುವಟಿಕೆಯ ಆರ್ಥಿಕತೆಯಲ್ಲಿ ಯಾವುದೇ ಪಾತ್ರ ವಹಿಸಬಾರದು ಎಂಬ ಒತ್ತಡವನ್ನು ಸಾಮ್ರಾಜ್ಯಶಾಹಿ ಶಕ್ತಿಗಳು ಹೇರುತ್ತಿದ್ದಾರೆ ಅನ್ನುವುದು ನಮ್ಮ ದುರಂತ. ಮುಂದುವರೆದ ದೇಶಗಳಾದ ಜಪಾನ್ ಮತ್ತು ದಕ್ಷಿಣ ಕೊರಿಯಾ ದೇಶಗಳಲ್ಲಿ ಸರಕಾರದ ಸಹಕಾರದಿಂದ ಸಾರ್ವಜನಿಕ ಹೂಡಿಕೆ ಮಾಡಿರುವುದನ್ನು ಕಾಣಬಹುದು. ಭಾರತದಿಂದ ರಫ್ತಾಗುವ ಹೆಚ್ಚಿನ ಸರಕು ಎಂದರೆ ಕರಡು ತೈಲ ಆಧಾರಿತ ಉತ್ಪನ್ನಗಳು. ಈ ಉತ್ಪನ್ನವು ಮಿತಿಯಾದ ಸ್ಥಿತಿಯಲ್ಲಿದ್ದು, ಭಾರತ ಅಭಿವೃದ್ಧಿ ಹೊಂದಿದ ದೇಶವಾಗಿ ಮುಂದುವರಿಯಲು ಸಾಧ್ಯವೇ ಎಂಬ ಗಂಭೀರ ಪ್ರಶ್ನೆ ಇದೆ. ಮುಕ್ತ ವಾಣಿಜ್ಯ ಒಪ್ಪಂದಗಳು ದೇಶಗಳ ನಡುವೆ ಆಗುವ ವಾಣಿಜ್ಯ ಒಪ್ಪಂದದ ಮಾಹಿತಿ, ಭಾರತದ ಜನರಿಗೆ ಭಾರತದಲ್ಲಿ ಲಭ್ಯವಿಲ್ಲದೆ ಬ್ರಿಟನ್ ದೇಶದ ವೆಬ್‌ಸೈಟ್‌ನಲ್ಲಿ ಲಭ್ಯವಾಗಿದೆ. ಅದರಲ್ಲಿ ಬಹು ಆತಂಕ ಕಾರಿಯಾದ ಅಂಶಗಳಿವೆ.



ಅಸಮತೋಲನ

2040ರ ಹೊತ್ತಿಗೆ ಬ್ರಿಟನ್‌ನಿಂದ ಭಾರತಕ್ಕೆ ಆಮದಾಗುವ ಸರಕುಗಳು ಶೇಕಡ ಶೇ. 40 ರಷ್ಟು ಏರಿಕೆಯಾಗಿರುವ ಮಾಹಿತಿ ಲಭ್ಯವಿದೆ. ಇದೆ ಭಾರತದಿಂದ ಬ್ರಿಟನ್ ದೇಶಕ್ಕೆ ರಫ್ತಾಗುವ ಸರಕುಗಳು ಶೇಕಡಾ ಶೇ. 25ರಷ್ಟು ಮಾತ್ರ ಎಂಬ ಮಾಹಿತಿಯೂ ಇದೆ. ಇದು ಭಾರತದ ದೃಷ್ಟಿಗೆ ಆತಂಕಕಾರಿಯಾದ ವಿಚಾರ ಎಂಬುದು ಬಯಲಾಗಿದೆ. ನೆರೆ ರಾಷ್ಟ್ರಗಳ ಜೊತೆ ನಾವು ಮಾಡಿಕೊಳ್ಳುವ ಭಾರತದ ಮುಕ್ತ ಒಪ್ಪಂದದ ಮಾಹಿತಿ ಇದೇ ರೀತಿಯಾಗಿ ಅಸಮಾನವಾಗಿ ಇರಬಹುದು ಎಂಬ ಆತಂಕವಿದೆ. ಭಾರತ ನೆರೆಯ ದೇಶಗಳ ಜೊತೆಗಿನ ಒಪ್ಪಂದ ಸಮಾನವಾಗಿರದೆ ವಾಣಿಜ್ಯದಲ್ಲಿ ಲಾಭ ಮಾಡಲು ಸಾಧ್ಯವಾಗಿರುವುದಿಲ್ಲ ಹಾಗೂ ತಾಂತ್ರಿಕ ಹಾಗೂ ಮಾಧ್ಯಮಗಳ ಮೇಲೆ ಮತ್ತೊಬ್ಬರ ಹಿಡಿತದಿಂದ ವಿಷಯ ಮುಚ್ಚಿಡುವ ಪ್ರಕ್ರಿಯೆ ಮುಂದುವರೆದಿದೆ ಮತ್ತು ನೆರೆ ರಾಷ್ಟ್ರಗಳ ಭಾಂಧವ್ಯ ಕುಸಿತದಿಂದ ವಾಣಿಜ್ಯ ಲಾಭ ಕಷ್ಟ ಸಾಧ್ಯವಾಗಬಹುದು. ಚೀನಾ ದೇಶವು ಟ್ರಂಪ್‌ನ ಎರಡು ಅಧಿಕಾರ ಕಾಲ ಅವಧಿಯಲ್ಲಿಯೂ ಅಮೇರಿಕದ ಜೊತೆಗಿನ ವಾಣಿಜ್ಯ ಚಟುವಟಿಕೆ ಕಡಿಮೆ ಮಾಡಿ ತನನ್ನು ತಾನು ಶಸಕ್ತಗೊಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ನೆರೆ ದೇಶಗಳನ್ನು ಒಟ್ಟುಗೂಡಿಸಿ ಟ್ರಂಪ್‌ನ ಸಾಮ್ರಾಜ್ಯಶಾಹಿ ದಾಳಿಯನ್ನು ಎದುರುಗೊಳ್ಳಲು ಬಲಗೊಂಡಿದೆ. ಭಾರತವು ವಿಶ್ವಗುರು ಎಂದು ಕರೆಸಿಕೊಂಡು ಅಮೇರಿಕಾದ ಎದುರು ನಿಲ್ಲಲು ಸಾಧ್ಯವೇ? ಸಾಧ್ಯವಿಲ್ಲ, ಭಾರತ ತನ್ನ ಮೂರ್ಖತನದಿಂದ ನೆರೆ ದೇಶಗಳ ಜೊತೆಯ ಸಂಬಂಧ ಕಳೆದುಕೊಂಡು ನಿಷ್ಠೂರತೆಯ ಅವಸ್ಥೆಯಲ್ಲಿದೆ. ಅಮೆರಿಕದ ಅಣತಿಗೆ ವಿರುದ್ಧವಾಗಿ, ಜಪಾನ್ ತನ್ನ ರಕ್ಷಣಾ ಬಡ್ಜೆಟ್ ಹೆಚ್ಚಿಸಿಕೊಂಡಿದೆ. ಉತ್ತರ ಕೊರಿಯ–ದಕ್ಷಿಣ ಕೊರಿಯಾ ಒಂದಾಗುವ ಮಾತುಕತೆಗಳನ್ನು ನಡೆಸುತ್ತಿವೆ. ಇವೆಲ್ಲವೂ ಆಂತರಿಕ ಕ್ರಮಗಳು. ಹಾಗಂತ ಮೊದಲಗಿಂತ ಅಮೆರಿಕ ಈಗ ದುರ್ಬಲವಾಗಿದೆ ಎಂದು ಹೇಳಲು ಸಾಧ್ಯವಿಲ್ಲ. ಅಮೇರಿಕಾದವರು ಜಗತ್ತಿನಲ್ಲಿ ತಮ್ಮ ಪ್ರಾಬಲ್ಯ ಉಳಿಸಿಕೊಳ್ಳಲು ನಿರಂತರ ತಾನು ಏನು ಮಾಡಬೇಕು ಅದನ್ನು ಮಾಡುತ್ತಾ ಬಂದಿದ್ದಾರೆ. ವಿಶ್ವ ವಾಣಿಜ್ಯ ಸಂಸ್ಥೆಯ ಪಾತ್ರವೂ ಒಂದು ಭ್ರಮೆಯಾಗಿ ಕಾಣುವುದು. ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಸಂಪರ್ಕ ಇಲ್ಲದೆ ಯಾವುದೋ ಒಂದು ಕಂಪನಿ ತಾನೇ ಎರಡು ದೇಶಗಳಲ್ಲಿ ಉತ್ಪಾದನೆ ನಡೆಸುತ್ತಾ, ತಾನೇ ತನ್ನ ಒಂದು ದೇಶದ ಘಟಕದಿಂದ ಮತ್ತೊಂದು ದೇಶದ ತನ್ನದೇ ಘಟಕಕ್ಕೆ ರಫ್ತು ಮಾಡುವಂತಹ ಪರಿಸ್ಥಿತಿ ಬಂದಿದೆ. ಇದು ಸಹ ಅಮೆರಿಕದ ಮೌಲ್ಯವರ್ಧನೆ ಹಿಡಿತದ ಒಂದು ಭಾಗ. ಟ್ರಂಪ್ ತಾನು ನಿರಂತರ ಜನಮನದಲ್ಲಿ ಉಳಿಯಲು ದುಡಿಯುವ ವರ್ಗದ ಪ್ರತಿನಿಧಿ ಎಂದು ಬಿಂಬಿಸಿಕೊಳ್ಳುತ್ತ ತನ್ನ 'ಉಗ್ರ ರಾಷ್ಟವಾದ'ವನ್ನು ಮುಂದಿಡುತ್ತಾ ಅಧಿಕಾರಗಳನ್ನು ಗಟ್ಟಿಗೊಳಿಸುತ್ತಾ ತನ್ನ ಅಧಿಕಾರ ಉಳಿಸಿಕೊಳ್ಳಲು ಪ್ರಯತ್ನ ಪಡುತ್ತಾ ಇದ್ದಾರೆ. ಈ ಧೋರಣೆಗಳನ್ನು ಹಿಂದಕ್ಕಟ್ಟುವುದಕ್ಕಾಗಿ ಸ್ಥಳೀಯ ಹೋರಾಟಗಳನ್ನು ಸ್ಥಳೀಯ ಸ್ವರೂಪವಾಗಿ ಮತ್ತು ರಾಷ್ಟ್ರೀಯ ಸ್ವರೂಪವಾಗಿ ಬಲ ಪಡಿಸುತ್ತಾ ಹೋಗಬೇಕು. ಭಾರತದಲ್ಲಿ ಹೊರದೇಶದ ಕೆಲಸ ಮಾಡುತ್ತ ಅದರ ಸಿದ್ಧಾಂತ ತತ್ವಗಳ ವಿರುದ್ಧ ಮಾತನಾಡುವುದು ಸಾಮ್ರಾಜ್ಯಶಾಹಿ ಶಕ್ತಿಯ ಮೇಲೆ ನಡೆಸುವ ಪ್ರತಿರೋಧದ ದಾಳಿಯಾಗುತ್ತದೆ.

ಪುಟ 11 ಕ್ಕೆ

ಚುನಾವಣಾ ಸಮಗ್ರತೆಯನ್ನು ಕಾಪಾಡುವಿಕೆ: ಬಿಹಾರ ಮತದಾರರ ಪಟ್ಟಿ ಪರಿಷ್ಕರಣೆಯ ಬಗ್ಗೆ ಆತಂಕಗಳು

ನಿಲೋತ್ಪಲ ಬಸು

ಸಂಸದೀಯ ಪ್ರಜಾಪ್ರಭುತ್ವದ ಹೃದಯ ಮತ್ತು ಆತ್ಮವು ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳನ್ನು ನಡೆಸುವ ಅಗತ್ಯ ಪ್ರಕ್ರಿಯೆಯಲ್ಲಿದೆ – ಈ ಪ್ರಕ್ರಿಯೆಯು ಎಲ್ಲಾ ರಾಜಕೀಯ ಪಕ್ಷಗಳಿಗೆ ಸಮಾನ ಆಟದ ಮೈದಾನವನ್ನು ಖಚಿತಪಡಿಸಬೇಕು. ಈ ವೈಶಿಷ್ಟ್ಯದಿಂದಾಗಿ, ಸಂಸದೀಯ ಪ್ರಜಾಪ್ರಭುತ್ವವನ್ನು ಹೆಚ್ಚಾಗಿ ಚುನಾವಣಾ ಪ್ರಜಾಪ್ರಭುತ್ವ ಎಂದು ಪರಿಗಣಿಸಲಾಗುತ್ತದೆ. ಜನವರಿ 26, 1950 ರಂದು ಸಂವಿಧಾನವನ್ನು ಅಂಗೀಕರಿಸುವ ಮೊದಲು ಎರಡು ವರ್ಷಗಳ ಕಾಲ ಚರ್ಚಿಸಿದ ಸಂವಿಧಾನ ಸಭೆಯು, ಶಾಸಕಾಂಗ ಸಭೆಗಳು ಮತ್ತು ಸಂಸತ್ತಿಗೆ ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳನ್ನು ಖಚಿತಪಡಿಸಿಕೊಳ್ಳುವ ವಿವಿಧ ಅಂಶಗಳನ್ನು ಅತ್ಯಂತ ವಿಸ್ತಾರವಾದ ರೀತಿಯಲ್ಲಿ ಚರ್ಚಿಸಿದ್ದು ಸುಮ್ಮನೆ ಅಲ್ಲ.

ಸ್ವಾಭಾವಿಕವಾಗಿ, ಚುನಾವಣೆಗಳನ್ನು ನಡೆಸುವ ಈ ವಿವರವಾದ ನೀಲನಕ್ಷೆಯು ಭಾರತದ ಚುನಾವಣಾ ಆಯೋಗದ (ECI) ಮೇಲೆ ಸ್ವತಂತ್ರ ಮತ್ತು ದ್ವಿಪಕ್ಷೀಯ ಕಾರ್ಯನಿರ್ವಹಣೆಯ ಪ್ರಮುಖ ಜವಾಬ್ದಾರಿಯನ್ನು ನೀಡಿತು. ಭಾರತದ ಚುನಾವಣಾ ಆಯೋಗ ಪಕ್ಷಪಾತದ ರಾಜಕೀಯ ಪ್ರಭಾವದಿಂದ ಮುಕ್ತವಾಗಿರಲು ಮತ್ತು ಅದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಸ್ವತಂತ್ರವಾಗಿ ಕಾರ್ಯನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳಲು, ಮತ್ತು ಅದನ್ನು ಸಂಪೂರ್ಣ (ಸ್ವಾಯತ್ತ) ಅಧಿಕಾರದ ಸ್ಥಾನದಲ್ಲಿ ಇರಿಸಲು ಅದಕ್ಕೆ ವಿಶಾಲ ಮತ್ತು ಅವಶ್ಯ ಅಧಿಕಾರಗಳನ್ನು ನೀಡಲಾಯಿತು.

ಈ ಆದೇಶವನ್ನು ಭಾರತೀಯ ಸಂವಿಧಾನದ 324ನೇ ವಿಧಿಯಲ್ಲಿ ಪ್ರತಿಪಾದಿಸಲಾಗಿದೆ. ಇದು ಚುನಾವಣಾ ಆಯೋಗವು ಸಂಸತ್ತು, ರಾಜ್ಯ ಶಾಸಕಾಂಗಗಳು ಮತ್ತು ರಾಷ್ಟ್ರಪತಿ ಮತ್ತು ಉಪಾಧ್ಯಕ್ಷರ ಕಚೇರಿಗಳಿಗೆ ನಡೆಯುವ ಚುನಾವಣೆಗಳ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣವನ್ನು ಹೊಂದಿರುತ್ತದೆ ಎಂದು ಹೇಳುತ್ತದೆ. ಮತದಾರರ ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ಈ ಚುನಾವಣೆಗಳನ್ನು ನಡೆಸುವುದು ಚುನಾವಣಾ ಆಯೋಗದ ಜವಾಬ್ದಾರಿಯಾಗಿದೆ.

ಕಳೆದ 75 ವರ್ಷಗಳಲ್ಲಿ, ಚುನಾವಣಾ ವ್ಯವಸ್ಥೆಯು ನ್ಯಾಯಯುತವಾದ ಸಮಗ್ರತೆ, ಪಾರದರ್ಶಕತೆ ಮತ್ತು ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಿದೆ. ಸಣ್ಣಪುಟ್ಟ ವಿಚಲನಗಳ ಹೊರತಾಗಿಯೂ, ಚುನಾವಣಾ ಆಯೋಗವು ಭಾರತದಲ್ಲಿ ಅಷ್ಟೇ ಅಲ್ಲ, ಪ್ರಪಂಚದಾದ್ಯಂತ ಗೌರವವನ್ನು ಗಳಿಸಿದೆ.

ಬದಲಾದ ಸನ್ನಿವೇಶ

ಆದರೆ, ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರ ವಹಿಸಿಕೊಂಡ ನಂತರ ಈ ಸನ್ನಿವೇಶ ಬದಲಾಗಿದೆ. ಆಯೋಗದ ಸಂಯೋಜನೆಯು ವಿವಾದದ ಮೂಲವಾಗಿದೆ. ವಿಶೇಷವಾಗಿ ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಆಯುಕ್ತರ ನೇಮಕಕ್ಕೆ ಕಾರಣವಾಗಿರುವ ಶೋಧನಾ ಸಮಿತಿಯ ರಚನೆಯ ಕುರಿತು ಸುಪ್ರೀಂ ಕೋರ್ಟ್‌ನ ಶಿಫಾರಸುಗಳನ್ನು ದುರ್ಬಲಗೊಳಿಸಲಾಗಿದೆ. ಈ ಪ್ರಕ್ರಿಯೆಯನ್ನು ಕಾರ್ಯಾಂಗದ ಸಂಪೂರ್ಣ ನಿಯಂತ್ರಣ ಮತ್ತು ಹಿಡಿತಕ್ಕೆ ತರಲಾಗಿದೆ. ಪ್ರಮುಖವಾಗಿ, ಮೊದಲ ಮೋದಿ ಸರ್ಕಾರವು ಅನಾಮಧೇಯ ಮತ್ತು ಅನಿಯಮಿತ ಕಾರ್ಪೊರೇಟ್ ದೇಣಿಗೆಗಳನ್ನು ಅನುಮತಿಸುವ ಮೂಲಕ ಚುನಾವಣೆಗಳ ರಾಜಕೀಯ ನಿಧಿಗೆ (ಚುನಾವಣಾ ಬಾಂಡ್‌ಗಳನ್ನು ಪರಿಚಯಿಸಿ) ಅತ್ಯಂತ ಅತಿರೇಕದ ತಿದ್ದುಪಡಿಗಳನ್ನು ಪರಿಚಯಿಸಿತು. ಇದು ಚುನಾವಣಾ ಹಣಕಾಸಿನ ಸ್ಥಿತಿಯನ್ನು ಮೂಲಭೂತವಾಗಿ ಬದಲಾಯಿಸಿದೆ. ಕಾರ್ಪೊರೇಟ್ ಹಿತಾಸಕ್ತಿಗಳು ಮತ್ತು ಚುನಾಯಿತ ಸರ್ಕಾರಗಳ ನಡುವೆ ಅಪಾಯಕಾರಿ "ಲಾಭಕ್ಕೆ–ಪ್ರತಿಲಾಭ" (ಅಥವಾ ಪರ್ಯಾಯ ಲಾಭ) ವಿನಿಮಯವನ್ನು ತಂದಿರಿಸಿ ಚುನಾವಣಾ ನೈತಿಕತೆಯನ್ನು ಇದು ಕುಲಗೆಡಿಸಿದೆ.

ಸುಪ್ರೀಂ ಕೋರ್ಟ್ ಚುನಾವಣಾ ಬಾಂಡ್‌ಗಳನ್ನು ಅನುಮತಿಸುವ ನಿಬಂಧನೆಗಳನ್ನು ರದ್ದುಗೊಳಿಸಿ ಅದನ್ನು ಅಸಂವಿಧಾನಿಕ ಎಂದು ಕರೆದಾಗ – ಈ ಯೋಜನೆಯನ್ನು – ಅದು ರಾಜಕೀಯ ನಿಧಿಯ ಮಾದರಿಯನ್ನು ಸಾರ್ವಜನಿಕ ಪರಿಶೀಲನೆಗೆ ಒಡ್ಡಿತು. ಇತರ ರಾಜಕೀಯ ಪಕ್ಷಗಳಿಗೆ ಹೋಲಿಸಿದರೆ ಬಿಜೆಪಿಗೆ ಅಸಮಾನ ಲಾಭದ ಸ್ಪಷ್ಟ ಪುರಾವೆಗಳು ಕಂಡು ಬಂದವು. ಜೊತೆಗೆ ಈ ಬಾಂಡ್‌ಗಳನ್ನು ಸಂಗ್ರಹಿಸಿದ ವಿಧಾನವು ಪ್ರಮುಖ ಹಣಕಾಸಿನ ಅಕ್ರಮಗಳನ್ನು ಹೊರಗೆಳೆಯಿತು ಮತ್ತು ಕ್ವಿಡ್ ಪ್ರೊ ಕ್ವೋ ವ್ಯವಸ್ಥೆಗಳ ("ಲಾಭಕ್ಕೆ ಪ್ರತಿಲಾಭ") ಸ್ಪಷ್ಟ ಪುರಾವೆಗಳನ್ನು ಒದಗಿಸಿತು.

ಇವಿಎಂಗಳ ಬಗ್ಗೆ ಇರುವ ಅನುಮಾನಗಳು

ಸಂಯೋಜಿತ ಎಲೆಕ್ಟ್ರಾನಿಕ್ ಮತ ಯಂತ್ರಗಳು (ಇವಿಎಂಗಳು) ಮತ್ತು ಮತದಾರರ ಪರಿಶೀಲನೆಗೊಂಡ ಪೇಪರ್ ಆಡಿಟ್ ಟ್ರಯಲ್ (ವಿವಿಪಿಎಟಿ) ವ್ಯವಸ್ಥೆಯ ಸಮಗ್ರತೆಗೆ ಸಂಬಂಧಿಸಿದ ಕಳವಳಗಳಂತಹ ಇತರ ಸಮಸ್ಯೆಗಳು ಸಾರ್ವಜನಿಕ ವಲಯದಲ್ಲಿ ಈಗ ಹೊರಹೊಮ್ಮಿವೆ. ಪಾರದರ್ಶಕತೆ ಮತ್ತು ಸಂಪೂರ್ಣ ಸಮಗ್ರತೆಯನ್ನು ಖಚಿತಪಡಿಸಿಕೊಳ್ಳಲು ನಿರ್ಣಾಯಕವಾದ ಯಂತ್ರಗಳ ಮೂಲ ಕೋಡ್ ಮತ್ತು ನೈರ್ಮಲ್ಯೀಕರಣ (ಸ್ಯಾನಿಟೈಸೇಶನ್ ಪ್ರೋಟೋಕಾಲ್‌ಗಳಂತಹ) ಶಿಷ್ಟಾಚಾರದ ತಾಂತ್ರಿಕ ವಿವರಗಳ ಬಗ್ಗೆ ಹಲವಾರು ಪ್ರಶ್ನೆಗಳು ಉಳಿದಿವೆ. ಈ ಕಾಳಜಿಗಳ ಸುತ್ತಲಿನ ಚರ್ಚೆ ಇನ್ನೂ ಬಗೆಹರಿಯದೆ ಉಳಿದಿದೆ.

ಇತ್ತೀಚಿನ ವರ್ಷಗಳಲ್ಲಿ, ವಿಶೇಷವಾಗಿ 2019ರ ಲೋಕಸಭಾ ಚುನಾವಣೆಗಳಿಗೆ ಮುಂಚಿತವಾಗಿ, ಭಾರತೀಯ ಚುನಾವಣಾ ಆಯೋಗದ ಪಕ್ಷಪಾತದ ನಿಲುವುಗಳು ಹೆಚ್ಚು ಗೋಚರಿಸುತ್ತಿದೆ. ಪ್ರಧಾನಿ ಮತ್ತು ಗೃಹ ಸಚಿವರನ್ನು ರಕ್ಷಿಸಲು ಬಿಜೆಪಿ ಮಾಡಿದ ಲಜ್ಜೆಗೆಟ್ಟ ಪ್ರಯತ್ನಗಳ ಮುಂದೆ ECI ನಿಷ್ಕ್ರಿಯತೆ, ಮತ್ತು ಚುನಾವಣಾ ಪ್ರಚಾರದ ಸಮಯದಲ್ಲಿ ದೇಶ ಸುರಕ್ಷತಾ ಕೇಂದ್ರಿತ, ಬಲವಂತದ ರಾಷ್ಟ್ರೀಯತೆಯ ನಿರೂಪಣೆಯನ್ನು ನಿರ್ಮಿಸಲು ಪುಲ್ವಾಮಾ–ಬಾಲಕೋಟ್ ಘಟನೆಗಳನ್ನು ರಾಜಕೀಯಗೊಳಿಸಿದ್ದು ಮಾದರಿ ನೀತಿ ಸಂಹಿತೆಯ (MCC) ಗಂಭೀರ ಉಲ್ಲಂಘನೆಗೆ ಕಾರಣವಾಯಿತು.

ಇದು ನಮ್ಮನ್ನು ಒಂದು ನಿರ್ಣಾಯಕ ವಿಷಯಕ್ಕೆ ತರುತ್ತದೆ: ಚುನಾವಣೆಗಳನ್ನು ನಡೆಸುವ ರೀತಿ–ನೀತಿ ರೂಪಿಸುವಲ್ಲಿ ರಾಜಕೀಯ ಪಕ್ಷಗಳ ಪಾತ್ರದ ಸಾಂಸ್ಥಿಕೀಕರಣ. ಸಾಂಪ್ರದಾಯಿಕವಾಗಿ, ECI ತನ್ನ ಪ್ರಮುಖ ನಿರ್ಧಾರಗಳು ಮತ್ತು ಕ್ರಮಗಳನ್ನು ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚನೆ ಮತ್ತು ಸಲಹೆಗಳ ಮೇಲೆ ಆಧರಿಸಿ ಸಮನ್ವಯಗೊಳಿಸಿ ಜಾರಿಗೊಳಿಸಬೇಕು. ಮಾದರಿ ನೀತಿ ಸಂಹಿತೆಯು ಸ್ವತಃ ಶಾಸನಬದ್ಧ ನಿಬಂಧನೆಯಲ್ಲ, ಬದಲಿಗೆ ರಾಜಕೀಯ ಒಮ್ಮತದ ಅಭಿವ್ಯಕ್ತಿಯಾಗಿ ಮೂಡಿಬರಬೇಕಾದ ಸಂಹಿತೆ.

ಬಿಹಾರದ ಕಠಿಣ ಪ್ರಕ್ರಿಯೆ

ಬಿಹಾರ ವಿಧಾನಸಭಾ ಚುನಾವಣೆಗೆ ಮುನ್ನ ನಡೆಯಲಿರುವ ಮತದಾರರ ಪಟ್ಟಿಯ ವಿಶೇಷ ಮತ್ತು ತೀವ್ರ ಪರಿಷ್ಕರಣೆಗೆ ಇಂದಿನ ಕಾಳಜಿ ಇದೆ. ಬಿಹಾರ ವಿಧಾನಸಭೆಯ ಪ್ರಸ್ತುತ ಅವಧಿ ನವೆಂಬರ್ 22, 2025ರಂದು ಕೊನೆಗೊಳ್ಳುತ್ತದೆ ಮತ್ತು ಆ ದಿನಾಂಕಕ್ಕೂ ಮೊದಲು ಚುನಾವಣೆಗಳು ಸ್ವಾಭಾವಿಕವಾಗಿ ನಡೆಯಬೇಕು. ಜೂನ್ 24, 2025ರಂದು, ಚುನಾವಣಾ ಆಯೋಗ ಪರಿಷ್ಕರಣಾ ಪ್ರಕ್ರಿಯೆಯನ್ನು ಪ್ರಾರಂಭಿಸಲು ದಾಖಲೆಗಳ ಪಟ್ಟಿಯನ್ನು ಬಿಡುಗಡೆ ಮಾಡಿತು: ಅವುಗಳೆಂದರೆ ನಾಲ್ಕು ಪುಟಗಳ ಪತ್ರಿಕಾ ಟಿಪ್ಪಣಿ, ಬಿಹಾರದ ಮುಖ್ಯ ಚುನಾವಣಾ ಅಧಿಕಾರಿಗೆ ಹತ್ತೊಂಬತ್ತು ಪುಟಗಳ ಪತ್ರ, ಮೂರು ಪುಟಗಳ ಆದೇಶ, ವಿವರವಾದ ಮಾರ್ಗಸೂಚಿಗಳ ಒಂಬತ್ತು ಪುಟಗಳು, ಘೋಷಣೆಯ ಸ್ವರೂಪ ಸೇರಿದಂತೆ ಎರಡು ಪುಟಗಳ ಎಣಿಕೆಯ ನಮೂನೆ ಮತ್ತು ಘೋಷಣೆಗೆ ಬೆಂಬಲವಾಗಿ ಸಲ್ಲಿಸಬೇಕಾದ ದಾಖಲೆಗಳ ಸೂಚಕ ಪಟ್ಟಿಯನ್ನು ಹೊಂದಿರುವ ಎರಡು ಪುಟಗಳ ಘೋಷಣೆ ನಮೂನೆ.

ಈ ವಿವರವಾದ ದಾಖಲೆಗಳು ಹಲವಾರು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ. ಮೊದಲನೆಯದು ಕಾಲಾನುಕ್ರಮಕ್ಕೆ ಸಂಬಂಧಿಸಿದೆ. ಪತ್ರಿಕಾ ಪ್ರಕಟಣೆಯನ್ನು ಜೂನ್ 24, 2025 ರಂದು ಬಿಡುಗಡೆ ಮಾಡಲಾಯಿತು ಮತ್ತು ವಿಶೇಷ ತೀವ್ರ ಪರಿಷ್ಕರಣೆಯನ್ನು ಮುಕ್ತಾಯಗೊಳಿಸಲು ಕೊನೆ ದಿನಾಂಕವನ್ನು ಜುಲೈ 1, 2025 ಕ್ಕೆ ನಿಗದಿಪಡಿಸಲಾಗಿದೆ. ಮಧ್ಯಂತರದಲ್ಲಿ, ಚುನಾವಣಾ ನೋಂದಣಿ ಅಧಿಕಾರಿಗಳು ಅಸ್ತಿತ್ವದಲ್ಲಿರುವ ಎಲ್ಲಾ ಮತದಾರರಿಗೆ ಮೊದಲೇ ಭರ್ತಿ ಮಾಡಿದ ಎಣಿಕೆ ನಮೂನೆಗಳನ್ನು (ನಕಲಿನಲ್ಲಿ) ಮುದ್ರಿಸಬೇಕು, ಅವುಗಳನ್ನು ಆಯಾ ಬೂತ್ ಮಟ್ಟದ ಅಧಿಕಾರಿಗಳಿಗೆ (BLO ಗಳು) ವಿತರಿಸಬೇಕು ಮತ್ತು BLO ಗಳಿಗೆ ತರಬೇತಿ ನೀಡಬೇಕು, BLO ಗಳು, ಪ್ರತಿಯಾಗಿ, ನಮೂನೆಗಳನ್ನು ಮನೆ–ಮನೆಗೆ ವಿತರಿಸಬೇಕು, ಭರ್ತಿ ಮಾಡಿದ ನಮೂನೆಗಳನ್ನು ಸಂಗ್ರಹಿಸಬೇಕು ಮತ್ತು ಅವುಗಳನ್ನು ಪರಿಶೀಲಿಸಬೇಕು. ಇದರ ಜೊತೆಗೆ, ಉನ್ನತ ಅಧಿಕಾರಿಗಳು ತರ್ಕಬದ್ಧಗೊಳಿಸುವಿಕೆ ಮತ್ತು ವ್ರ್ಜ್ೋಡ್ಣ್ಂ್ನ್ ಕೈಗೊಳ್ಳಬೇಕು, ಮತದಾನ ಕೇಂದ್ರಗಳ ಪ್ರಸ್ತಾವಿತ ಪುನರ್ರಚನೆಯನ್ನು ಅಂತಿಮಗೊಳಿಸಬೇಕು, ಮತದಾನ ಕೇಂದ್ರಗಳ ಪಟ್ಟಿಯನ್ನು ಅನುಮೋದಿಸಬೇಕು. ಆಗಸ್ಟ್ 1, 2025 ರೊಳಗೆ ಕರಡು ಮತದಾರರ ಪಟ್ಟಿಯನ್ನು ಮತ್ತು ಸೆಪ್ಟೆಂಬರ್ 30, 2025 ರೊಳಗೆ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಬೇಕು, ಇತ್ಯಾದಿ. ಮಧ್ಯಂತರ ಎರಡು ತಿಂಗಳ ಅವಧಿಯು ಹಕ್ಕುಗಳ ಸಾಧಿಸುವಿಕೆ ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ನಿಗದಿಯಾಗಿದೆ.



ಜ್ಞಾನದ ವಿಶ್ವಕೋಶದಂತೆ ಕಾಣವ ಬೃಹತ್ ಮತದಾರರ ಪಟ್ಟಿ

ಈ ವಿಶ್ವಕೋಶದ ಗಾತ್ರದ ದಾಖಲೆಗಳನ್ನು ಮೇಲ್ನೋಟಕ್ಕೆ ಓದಿದರೂ ಅವುಗಳ ವಿಲಕ್ಷಣ ಸ್ವರೂಪ ಬಹಿರಂಗಗೊಳ್ಳುತ್ತದೆ. ಈ ತೀವ್ರವಾದ ಪರಿಷ್ಕರಣೆಗೆ ನೀಡಲಾದ ಸಮರ್ಥನೆಯೂ ಅಷ್ಟೇ ಪ್ರಶ್ನಾರ್ಹವಾಗಿದೆ: ತ್ವರಿತ ನಗರೀಕರಣ, ಆಗಾಗ್ಗೆ ವಲಸೆ, ಹೊಸ ಮತದಾರರ ಅರ್ಹತೆ, ಸಾವುಗಳನ್ನು ವರದಿ ಮಾಡದಿರುವುದು ಮತ್ತು ವಿದೇಶಿ ಅಕ್ರಮ ವಲಸಿಗರ ಹೆಸರುಗಳನ್ನು ಸೇರಿಸುವುದು. ಜನವರಿ 1, 2003 ಅನ್ನು ಮೂಲ ಉಲ್ಲೇಖ ದಿನಾಂಕವಾಗಿಟ್ಟುಕೊಂಡು ಪಟ್ಟಿಗಳನ್ನು ನವೀಕರಿಸುವ ಗುರಿಯನ್ನು ಪರಿಷ್ಕರಣೆ ಹೊಂದಿದೆ. ಈ ಸಮಸ್ಯೆಗಳು ಎರಡು ದಶಕಗಳಿಗೂ ಹೆಚ್ಚು ಕಾಲ ಮುಂದುವರೆದಿವೆ. ಈ ತರ್ಕದ ಮೂಲಕ, ಕಳೆದ 22 ವರ್ಷಗಳಿಂದ ಬಿಹಾರದಲ್ಲಿ ನಡೆದ ಚುನಾವಣೆಗಳು ರಾಜಿಯಾಗಿವೆ ಎಂದು ಚುನಾವಣಾ ಆಯೋಗ ಸೂಚಿಸುತ್ತಿದೆ – ಇದು ಹಿಂದಿನ ಸರ್ಕಾರಗಳ ನ್ಯಾಯಸಮ್ಮತತೆಯ ಬಗ್ಗೆ ತೊಂದರೆದಾಯಕ ಪ್ರಶ್ನೆಗಳನ್ನು ಹುಟ್ಟುಹಾಕುವ ಆರೋಪವಾಗಿದೆ.

ದಾಖಲೆಗಳು ರಾಜಕೀಯ ಪಕ್ಷಗಳ ಸಹಕಾರವನ್ನು ಸಂಕ್ಷಿಪ್ತವಾಗಿ ಉಲ್ಲೇಖಿಸುತ್ತವೆಯಾದರೂ, ಪ್ರಾಯೋಗಿಕವಾಗಿ, ಚುನಾವಣಾ ಆಯೋಗ ಅವರೊಂದಿಗೆ ಯಾವುದೇ ಸಮಾಲೋಚನೆ ನಡೆಸದೆ ಈ 'ಭವ್ಯವಾದ ಕಸರತ್ತು'ನ್ನು ಕೈಗೊಂಡಿದೆ. ಅಕ್ರಮ ವಲಸಿಗರ ಆಹ್ವಾನ ಮತ್ತು ಕಟ್ಟುನಿಟ್ಟಾದ ದಾಖಲಾತಿ ಅವಶ್ಯಕತೆಗಳು NRC ಯ ಹಿಂಬಾಗಿಲಿನ ಪರಿಚಯವನ್ನು ಬಲವಾಗಿ ಸೂಚಿಸುತ್ತವೆ. ಈ ಸಂಪೂರ್ಣ ಕಸರತ್ತಿನಲ್ಲಿ ಸಣ್ಣ ಮತ್ತು ದೊಡ್ಡ ಎರಡೂ ಇತರ ಹಲವಾರು ದೋಷಗಳಿವೆ. ವಿಶೇಷ ತೀವ್ರ ಪರಿಷ್ಕರಣೆಯ ನೆಪದಲ್ಲಿ, ಮತದಾರರ ಪಟ್ಟಿಯನ್ನು "ಶುದ್ಧೀಕರಿಸುವ" ಹೆಸರಿನಲ್ಲಿ ಗಮನಾರ್ಹ ಸಂಖ್ಯೆಯ ಮತದಾರರ ಹೆಸರುಗಳ ಅಳಿಸುವಿಕೆಗಳನ್ನು ಕೈಗೊಳ್ಳಲಾಗುತ್ತದೆ ಎಂಬುದು ಸ್ಪಷ್ಟವಾಗಿದೆ. ಇದು ವಿಶೇಷವಾಗಿ ಬಿಹಾರದ ಬಡ ಮತ್ತು ಕಾರ್ಮಿಕ ವರ್ಗದ ಜನಸಂಖ್ಯೆಯ ಮೇಲೆ ಪರಿಣಾಮ ಬೀರುತ್ತದೆ. ಅವರಲ್ಲಿ ಅನೇಕರು ವಲಸೆ ಸ್ಥಿತಿಗಳಿಂದಾಗಿ ಡಿಜಿಟಲ್ ಮತ್ತು ಭೌತಿಕ ಲಭ್ಯತೆಯನ್ನು ಹೊಂದಿರುವುದಿಲ್ಲ.

ಮಹಾರಾಷ್ಟ್ರಕ್ಕೆ ವಿರುದ್ಧವಾದ ಪ್ರಯೋಗ


ಇದಕ್ಕೆ ತದ್ವಿರುದ್ಧವಾಗಿ ಮಹಾರಾಷ್ಟ್ರದ ಪರಿಸ್ಥಿತಿ ಇದೆ, ಅಲ್ಲಿ ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಗಳ ನಡುವೆ, ಕೇವಲ ಐದು ತಿಂಗಳಲ್ಲಿ 39 ಲಕ್ಷ ಹೊಸ ಮತದಾರರನ್ನು ಪಟ್ಟಿಗೆ ಸೇರಿಸಲಾಗಿದೆ, ಇದು ಜನಸಂಖ್ಯಾಶಾಸ್ತ್ರದ ತರ್ಕವನ್ನು ಧಿಕ್ಕರಿಸುತ್ತದೆ.

ಅಂತಿಮ ಸಂದೇಶವು ಸ್ಫಟಿಕದಷ್ಟು ಸ್ಪಷ್ಟವಾಗಿದೆ: ಈ ಪ್ರಕ್ರಿಯೆಯು ಒಳನುಸುಳುವಿಕೆಯ ನೆಪದಲ್ಲಿ ಧ್ರುವೀಕರಣದ ಹೊಸ ಗೊಂದಲವನ್ನು ಸೃಷ್ಟಿಸುವ ಉದ್ದೇಶವನ್ನು ಹೊಂದಿದೆ. ವಿಶೇಷ ತೀವ್ರ ಪರಿಷ್ಕರಣೆಯು ಅದರ ಪ್ರಸ್ತುತ ರೂಪದಲ್ಲಿ ಮುಂದುವರಿಯಲು ಸಾಧ್ಯವಿಲ್ಲ. ವಿರೋಧ ಪಕ್ಷಗಳು ತಮ್ಮ ಧ್ವನಿಯನ್ನು ಎತ್ತಿವೆ. ಚೆಂಡು ಈಗ ಸಂಪೂರ್ಣವಾಗಿ ಭಾರತೀಯ ಚುನಾವಣಾ ಆಯೋಗದ (ECI) ಅಂಗಳದಲ್ಲಿದೆ – ಮತ್ತು ಸಾಂವಿಧಾನಿಕ ಮನೋಭಾವವನ್ನು ಕೈಬಿಡಲಾಗದು.

ಅನು:ಜಿ.ಎಸ್.ಮಣಿ

ಪುಟ 6 ರಿಂದ

ಆರ್‌ಎಸ್‌ಎಸ್‌ನ ಕೋರೆ ಹಲ್ಲುಗಳು ಬಹಿರಂಗಗೊಂಡಿವೆ – ಎಂ.ಎ.ಬೇಬಿ


ಭಾರತದ ಸಂವಿಧಾನ

ಪೀಠಿಕೆ

ಭಾರತದ ಪ್ರಜೆಗಳಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅಂಗೀಕರಿಸಿಕೊಂಡು,
ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ.

ಇದು ಭಾರತದ ಸಂವಿಧಾನ ಪೀಠಿಕೆಯ ಸ್ವರೂಪಾತ್ಮಕ ರೂಪ

ಭಾರತೀಯ ಸಂವಿಧಾನದ ಪೀಠಿಕೆಯಿಂದ ಸಮಾಜವಾದ ಮತ್ತು ಜಾತ್ಯತೀತತೆ ಎಂಬ ಪದಗಳನ್ನು ತೆಗೆದುಹಾಕಲು ಆರ್‌ಎಸ್‌ಎಸ್ ನಾಯಕತ್ವದ ಇತ್ತೀಚಿನ ಕರೆಗಳು ಕೇವಲ ಶಬ್ದಾರ್ಥದ ಮೇಲಿನ ದಾಳಿಯಲ್ಲ–ಅವು ಭಾರತೀಯ ಗಣರಾಜ್ಯ ಅಡಿಪಾಯದ ದೃಷ್ಟಿಕೋನದ ಮೇಲಿನ ನೇರ ದಾಳಿಯನ್ನು ಪ್ರತಿನಿಧಿಸುತ್ತದೆ. ಭಾರತದ ಅದ್ಭುತ ವಸಾಹತುಶಾಹಿ ವಿರೋಧಿ ಸ್ವಾತಂತ್ರ್ಯ ಹೋರಾಟದ ಆದರ್ಶಗಳು ಮತ್ತು ಆಕಾಂಕ್ಷೆಗಳನ್ನು ಸಂವಿದಾನವು ಸಾಕಾರಗೊಳಿಸುತ್ತದೆ. ಇದು ನಮ್ಮ ಸ್ವಾತಂತ್ರ್ಯವನ್ನು ಭದ್ರಪಡಿಸಿಕೊಳ್ಳಲು ಒಗ್ಗೂಡಿದ ವಿವಿಧ ಚಳುವಳಿಗಳು ಪ್ರತಿಪಾದಿಸಿದ ಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆ. ಸಮಾಜವಾದ ಮತ್ತು ಜಾತ್ಯತೀತತೆಯು ಅದರ ಮೂಲಭೂತ ತತ್ವಗಳಲ್ಲಿ ಸೇರಿವೆ, ಇದು ಸಂವಿಧಾನದಾದ್ಯಂತ ಹೆಣೆಯಲ್ಪಟ್ಟಿದೆ, ಇದು ಪೀಠಿಕೆಯಲ್ಲಿ ಮಾತ್ರವಲ್ಲದೆ, ರಾಜ್ಯ ನೀತಿಯ ನಿರ್ದೇಶನ ತತ್ವಗಳು, ಮೂಲಭೂತ ಹಕ್ಕುಗಳು, ಮೂಲಭೂತ ಕರ್ತವ್ಯಗಳು ಮತ್ತು ಅದಕ್ಕೂ ಮೀರಿ ಪ್ರತಿಫಲಿಸುತ್ತದೆ.

ಐವತ್ತು ವರ್ಷಗಳ ಹಿಂದೆ ಘೋಷಿಸಲಾದ ತುರ್ತು ಪರಿಸ್ಥಿತಿಯ ಟೀಕೆಯಲ್ಲಿ ಆರ್‌ಎಸ್‌ಎಸ್ ಪ್ರಧಾನ ಕಾರ್ಯದರ್ಶಿಯವರ ಕರೆಯನ್ನು ಮರೆಮಾಡಲಾಗಿತ್ತು. 1976ರಲ್ಲಿ 42ನೇ ತಿದ್ದುಪಡಿಯ ಮೂಲಕ ಈ ಪದಗಳನ್ನು ಪೀಠಿಕೆಗೆ ಸೇರಿಸಲಾಗಿದೆ ಎಂದು ಅವರು ಎತ್ತಿ ತೋರಿಸಿದರು. ತುರ್ತು ಪರಿಸ್ಥಿತಿಯನ್ನು ಈ ಮೂಲ ತತ್ವಗಳನ್ನು ಅಮಾನ್ಯಗೊಳಿಸಲು ನೆಪವಾಗಿ ಬಳಸುವ ವಂಚನೆಯ ಪ್ರಯತ್ನ ಇದಾಗಿತ್ತು. ವಿಶೇಷವಾಗಿ ಆ ಅವಧಿಯಲ್ಲಿ ಇಂದಿರಾ ಗಾಂಧಿ ಸರ್ಕಾರದೊಂದಿಗೆ ಆರ್‌ಎಸ್‌ಎಸ್‌ನ ಸ್ವಂತ ಸಹಯೋಗವನ್ನು ಗಮನಿಸಿದರೆ ಬೂಟಾಟಿಕೆ ಎನ್ನಬಹುದು. ಸಾಂವಿಧಾನಿಕ ತತ್ವಗಳನ್ನು ದುರ್ಬಲಗೊಳಿಸಲು ಈಗ ತುರ್ತು ಪರಿಸ್ಥಿತಿಯನ್ನು ಅನ್ವಯಿಸುವುದು ಐತಿಹಾಸಿಕ ಸ್ಮೃತಿಭ್ರಂಶ ಮತ್ತು ರಾಜಕೀಯ ಅವಕಾಶವಾದ ಎರಡನ್ನೂ ಪ್ರತಿಬಿಂಬಿಸುತ್ತದೆ.

ಸಮಾಜವಾದ ಮತ್ತು ಜಾತ್ಯತೀತತೆ ಕೇವಲ ಪದಗಳಲ್ಲ; ಅವು ಭಾರತವನ್ನು ಆಧುನಿಕ ಪ್ರಜಾಪ್ರಭುತ್ವ ಎಂದು ವ್ಯಾಖ್ಯಾನಿಸುವ ಮೂಲಭೂತ ವಿಚಾರಗಳಲ್ಲಿ ಸೇರಿಕೊಂಡಿವೆ.

ಸಾಮಾಜಿಕ ಮತ್ತು ಆರ್ಥಿಕ ನ್ಯಾಯಕ್ಕೆ ಬದ್ಧತೆ

ಭಾರತೀಯ ಸಂವಿಧಾನದಲ್ಲಿ ಸಮಾಜವಾದವು ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನು ಎತ್ತಿಹಿಡಿಯುವುದು, ಅಸಮಾನತೆಯ ನಿರ್ಮೂಲನೆ ಮತ್ತು ಕಲ್ಯಾಣ ರಾಜ್ಯದ ರಚನೆಗೆ ಬದ್ಧತೆಯನ್ನು ಪ್ರತಿನಿಧಿಸುತ್ತದೆ. ಇದು ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ಮಾತ್ರವಲ್ಲದೆ ಎಲ್ಲಾ ರೀತಿಯ ಶೋಷಣೆ ಮತ್ತು ದಮನದ ವಿರುದ್ಧವೂ ಹೋರಾಡಿದ ಭಾರತೀಯ ಸ್ವಾತಂತ್ರ್ಯ ಚಳವಳಿಯೊಳಗಿನ ಬಲವಾದ ಪ್ರವಾಹವನ್ನು ಪ್ರತಿಬಿಂಬಿಸುತ್ತದೆ. ಕಮ್ಯುನಿಸ್ಟರಲ್ಲದೆ, ಭಗತ್ ಸಿಂಗ್ ಮತ್ತು ಅವರ ದೇಶವಾಸಿಗಳಂತಹ ಜನರು ಸ್ವಾತಂತ್ರ್ಯ ಹೋರಾಟದೊಳಗಿನ ಈ ಸಮಾಜವಾದಿ ಪ್ರವೃತ್ತಿಯನ್ನು ಉದಾಹರಿಸುತ್ತಾರೆ.

ಸಿಪಿಐ(ಎಂ) ಆಶಿಸುವಂತೆ – ಉತ್ಪಾದನಾ ಸಾಧನಗಳ ಸಾಮಾಜಿಕ ಮಾಲೀಕತ್ವ ಮತ್ತು ಆರ್ಥಿಕ ಮತ್ತು ಸಾಮಾಜಿಕ ದಬ್ಬಾಳಿಕೆಯ ಸಂಪೂರ್ಣ ನಿರ್ಮೂಲನೆ ಎಂಬ ಅರ್ಥದಲ್ಲಿ ಭಾರತೀಯ ಸಂವಿಧಾನವು ಸಮಾಜವಾದಿ ಸಮಾಜವನ್ನು ಕಲ್ಪಿಸಿಕೊಂಡಿಲ್ಲ. ಸಿಪಿಐ(ಎಂ) ಮತ್ತು ಸಮಾನ ನಾಗರಿಕರ ಸಮಾಜಕ್ಕಾಗಿ ಹೋರಾಡುತ್ತಲೇ ಇದೆ. ಈ ಗುರಿಯನ್ನು ಇನ್ನೂ ಸಂಪೂರ್ಣವಾಗಿ ಸಾಧಿಸಬೇಕಾಗಿದೆ. ಆದಾಗ್ಯೂ, ಸಂವಿಧಾನವು ಐತಿಹಾಸಿಕವಾಗಿ ಆಳವಾಗಿ ಬೇರೂರಿರುವ ಆರ್ಥಿಕ ಶೋಷಣೆ ಮತ್ತು ಸಾಮಾಜಿಕ ದಮನದಿಂದ ಗುರುತಿಸಲ್ಪಟ್ಟ ಸಮಾಜದಲ್ಲಿ ಸ್ವಾತಂತ್ರ್ಯವನ್ನು ಎಲ್ಲರಿಗೂ ಹೆಚ್ಚಿಸಲು ಮತ್ತು ಅಸಮಾನತೆಗಳನ್ನು ಕಡಿಮೆ ಮಾಡಲು ಅಡಿಪಾಯ ಹಾಕಿತು.

42ನೇ ತಿದ್ದುಪಡಿಯಲ್ಲಿ "ಸಮಾಜವಾದಿ" ಎಂಬ ಪದವನ್ನು ಸ್ಪಷ್ಟವಾಗಿ ಸೇರಿಸುವ ಮೊದಲೇ, ಸಂವಿಧಾನದ ಪೀಠಿಕೆಯು ಈಗಾಗಲೇ "ನ್ಯಾಯ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ" ಎಂಬ ಪದವನ್ನು ಭರವಸೆ ನೀಡಿತ್ತು ಮತ್ತು ಎಲ್ಲಾ ನಾಗರಿಕರಿಗೆ "ಅಭಿವ್ಯಕ್ತಿ ಸ್ಥಾನಮಾನ ಮತ್ತು ಅವಕಾಶದ ಸಮಾನತೆ"ಯನ್ನು ಬಯಸಿತ್ತು. ಸಮಾಜವಾದದ ಚೈತನ್ಯವು ಸಂವಿಧಾನದ ನಿಬಂಧನೆಗಳಲ್ಲಿ ಈಗಾಗಲೇ ಹುದುಗಿದೆ ಎಂಬ ಅಂಶವನ್ನು ಇದು ಒತ್ತಿಹೇಳುತ್ತದೆ.

ಸಂವಿಧಾನದಲ್ಲಿ ಪ್ರತಿಪಾದಿಸಲಾದ ಮೂಲಭೂತ ಹಕ್ಕುಗಳು ಆ ದೃಷ್ಟಿಕೋನದತ್ತ ಪ್ರಮುಖ ಹೆಜ್ಜೆಗಳನ್ನು ಗುರುತಿಸಿವೆ. 14ನೇ ಪರಿಚ್ಛೇದವು ಕಾನೂನಿನಲ್ಲಿ ಸಮಾನತೆ ಮತ್ತು ಕಾನೂನುಗಳ ಸಮಾನ ರಕ್ಷಣೆಯನ್ನು ಖಾತರಿಪಡಿಸುತ್ತದೆ. ಧರ್ಮ, ಜನಾಂಗ, ಜಾತಿ, ಲಿಂಗ ಅಥವಾ ಜನ್ಮಸ್ಥಳದ ಆಧಾರದ ಮೇಲೆ ತಾರತಮ್ಯವನ್ನು ನಿಷೇಧಿಸುವ ಪರಿಚ್ಛೇದ 15, ಸಾರ್ವಜನಿಕ ಉದ್ಯೋಗದ ವಿಷಯಗಳಲ್ಲಿ ಸಮಾನ ಅವಕಾಶವನ್ನು ಪರಿಚ್ಛೇದ 16 ಖಚಿತಪಡಿಸುತ್ತದೆ. ಪ್ರಸ್ತಾವನೆ ಮತ್ತು ರಾಜ್ಯ ನೀತಿಯ ನಿರ್ದೇಶನ ತತ್ವಗಳೊಂದಿಗೆ ಓದಿದಾಗ, ಈ ಹಕ್ಕುಗಳು ಶೋಷಣೆಯಿಂದ ಮುಕ್ತವಾದ, ಪ್ರತಿಯೊಬ್ಬ ವ್ಯಕ್ತಿಯ ಘನತೆಯನ್ನು ಗೌರವಿಸುವ ಮತ್ತು ಎತ್ತಿಹಿಡಿಯುವ ನ್ಯಾಯಯುತ ಸಮಾಜದ ದೃಷ್ಟಿಕೋನವನ್ನು ಪ್ರತಿಪಾದಿಸುತ್ತವೆ.

ರಾಜ್ಯ ನೀತಿಯ ನಿರ್ದೇಶನ ತತ್ವಗಳು – ಭಾಗ IV, ಪರಿಚ್ಛೇದ 36 ರಿಂದ 51 ರವರೆಗೆ, ಸಂವಿಧಾನದಲ್ಲಿನ ಸಮಾಜವಾದಿ ದೃಷ್ಟಿಕೋನದ ಸ್ಪಷ್ಟ ಅಭಿವ್ಯಕ್ತಿಯನ್ನು ಒಳಗೊಂಡಿದೆ. ಪರಿಚ್ಛೇದ 38 ಹೇಳುತ್ತದೆ, "ರಾಜ್ಯವು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವು ಎಲ್ಲಾ ಸಂಸ್ಥೆಗಳಿಗೆ ರಾಷ್ಟ್ರೀಯ ಜೀವನದ ಬಗ್ಗೆ ತಿಳಿಸುವ ಸಾಮಾಜಿಕ ವ್ಯವಸ್ಥೆ'ಯನ್ನು ಸಾಧ್ಯವಾದಷ್ಟು ಪರಿಣಾಮಕಾರಿಯಾಗಿ ಭದ್ರಪಡಿಸುವ ಮತ್ತು ರಕ್ಷಿಸುವ ಮೂಲಕ ಜನರ ಕಲ್ಯಾಣವನ್ನು ಉತ್ತೇಜಿಸಲು ಶ್ರಮಿಸಬೇಕು." 39ನೇ ಪರಿಚ್ಛೇದವು "ರಾಜ್ಯವು ನಿರ್ದಿಷ್ಟವಾಗಿ ತನ್ನ ನೀತಿಯನ್ನು – (ಎ) ನಾಗರಿಕರು, ಪುರುಷರು ಮತ್ತು ಮಹಿಳೆಯರು ಸಮಾನವಾಗಿ, ಸಾಕಷ್ಟು ಜೀವನೋಪಾಯದ ಹಕ್ಕನ್ನು ಹೊಂದಿರುವಂತೆ; (ಬಿ) ಸಮುದಾಯದ ಭೌತಿಕ ಸಂಪನ್ಮೂಲಗಳ ಮಾಲೀಕತ್ವ ಮತ್ತು ನಿಯಂತ್ರಣವನ್ನು ಸಾಮಾನ್ಯ ಒಳಿತಿಗಾಗಿ ಸಾಧ್ಯವಾದಷ್ಟು ವಿತರಿಸುವಂತೆ; (ಸಿ) ಆರ್ಥಿಕ ವ್ಯವಸ್ಥೆಯ ಕಾರ್ಯಾಚರಣೆಯು ಸಂಪತ್ತು ಮತ್ತು ಉತ್ಪಾದನಾ ಸಾಧನಗಳ ಕೇಂದ್ರೀಕರಣಕ್ಕೆ ಸಾಮಾನ್ಯ ಹಾನಿಯಾಗಿ ಕಾರಣವಾಗುವುದಿಲ್ಲ; (ಡಿ) ಪುರುಷರು ಮತ್ತು ಮಹಿಳೆಯರಿಬ್ಬರಿಗೂ ಸಮಾನ ಕೆಲಸಕ್ಕೆ ಸಮಾನ ವೇತನವಿರುತ್ತದೆ..." ಎಂದು ಖಚಿತಪಡಿಸಿಕೊಳ್ಳುವ ಕಡೆಗೆ ನಿರ್ದೇಶಿಸುತ್ತದೆ.

ಇದಲ್ಲದೆ, 41ನೇ ಪರಿಚ್ಛೇದವು ಕೆಲಸ ಮಾಡುವ, ಶಿಕ್ಷಣ ಪಡೆಯುವ ಮತ್ತು ಸಾರ್ವಜನಿಕ ಸಹಾಯದ ಹಕ್ಕಿನ ಬಗ್ಗೆ ಹೇಳುತ್ತದೆ; 42ನೇ ಪರಿಚ್ಛೇದವು ನ್ಯಾಯಯುತ ಮತ್ತು ಮಾನವೀಯ ಕೆಲಸದ ಪರಿಸ್ಥಿತಿಗಳಿಗೆ ಕರೆ ನೀಡುತ್ತದೆ ಮತ್ತು 43ನೇ ಪರಿಚ್ಛೇದ ಜೀವನ ವೇತನ ಮತ್ತು ಯೋಗ್ಯವಾದ ಜೀವನ ಮಟ್ಟವನ್ನು ಕಲ್ಪಿಸುತ್ತದೆ.

ಈ ನಿಬಂಧನೆಗಳು ಕೇವಲ ಮಹತ್ವಾಕಾಂಕ್ಷೆಯ ಹೇಳಿಕೆಗಳಲ್ಲ. ಅವುಗಳು ಭಾರತದಲ್ಲಿ ಭೂ ಸುಧಾರಣೆಗಳು ಮತ್ತು ಸಾರ್ವಜನಿಕ ವಲಯದ ಉದ್ಯಮಗಳ ಸ್ಥಾಪನೆಯಿಂದ ಹಿಡಿದು ಸಾಮಾಜಿಕ ಕಲ್ಯಾಣ ಯೋಜನೆಗಳ ರಚನೆಯವರೆಗೆ ಹೆಗ್ಗುರುತು ಶಾಸನ ಮತ್ತು ನ್ಯಾಯಾಂಗ ವ್ಯಾಖ್ಯಾನಗಳಿಗೆ ಸ್ಫೂರ್ತಿ ನೀಡಿವೆ.

ನಿರ್ದೇಶನ ತತ್ವಗಳನ್ನು ಕಾನೂನುಬದ್ಧವಾಗಿ ಜಾರಿಗೊಳಿಸಲು ಸಾಧ್ಯವಾಗದಿದ್ದರೂ, ಅವುಗಳನ್ನು ಸೇರ್ಪಡೆಗೊಳಿಸುವುದು ಸಂವಿಧಾನ ಸಭೆಯಲ್ಲಿ ನಡೆದ ತೀವ್ರ ಚರ್ಚೆಗಳ ಫಲಿತಾಂಶವಾಗಿದೆ. ಅವುಗಳನ್ನು ಜಾರಿಗೊಳಿಸದಿರುವ ನಿರ್ಧಾರವು ಭಾರತೀಯ ರಾಜ್ಯದ ವರ್ಗ ಸ್ವರೂಪವನ್ನು ಪ್ರತಿಬಿಂಬಿಸುತ್ತದೆ. ಸಮಾಜವಾದಿ ದೃಷ್ಟಿಕೋನವು ವ್ಯಾಪಕವಾದ ಜನಪ್ರಿಯ ಬೆಂಬಲವನ್ನು ಹೊಂದಿದ್ದರಿಂದ ಆಡಳಿತ ವರ್ಗಗಳು ಅದನ್ನು ಸಂಪೂರ್ಣವಾಗಿ ತಿರಸ್ಕರಿಸಲು ಸಾಧ್ಯವಾಗಲಿಲ್ಲ. ಆದರೂ, ಅವುಗಳನ್ನು ನ್ಯಾಯಸಮ್ಮತವಲ್ಲದಂತೆ ಇರಿಸುವ ಮೂಲಕ, ಅವುಗಳ ಅನುಷ್ಠಾನದ ವೇಗ ಮತ್ತು ದಿಕ್ಕಿನ ಮೇಲೆ ಅವರು ನಿಯಂತ್ರಣವನ್ನು ಉಳಿಸಿಕೊಂಡರು.

ಜಾತ್ಯತೀತತೆ: ಒಂದು ಮೂಲಭೂತ ತತ್ವ

ಭಾರತೀಯ ಸಂವಿಧಾನದಲ್ಲಿ ಜಾತ್ಯತೀತತೆಯು ಕೇವಲ ಧಾರ್ಮಿಕ ತಟಸ್ಥತೆಯಲ್ಲ; ಎಲ್ಲಾ ಧರ್ಮಗಳನ್ನು ಸಮಾನವಾಗಿ ಪರಿಗಣಿಸುತ್ತದೆ. ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುತ್ತದೆ ಮತ್ತು ಯಾವುದೇ ನಾಗರಿಕನು ನಂಬಿಕೆಯ ಆಧಾರದ ಮೇಲೆ ತಾರತಮ್ಯವನ್ನು ಅನುಭವಿಸುವುದಿಲ್ಲ ಎಂದು ಖಚಿತಪಡಿಸುತ್ತದೆ ಎಂಬ ಸಕಾರಾತ್ಮಕ ಭರವಸೆಯಾಗಿದೆ. 1976ರಲ್ಲಿ "ಜಾತ್ಯತೀತ" ಎಂಬ ಪದವನ್ನು ಪೀಠಿಕೆಗೆ ಸ್ಪಷ್ಟವಾಗಿ ಸೇರಿಸುವ ಮೊದಲೇ, ಮೂಲ ಪಠ್ಯವು ಈಗಾಗಲೇ "ಚಿಂತನೆ, ಅಭಿವ್ಯಕ್ತಿ, ನಂಬಿಕೆ ಮತ್ತು ಆರಾಧನೆಯ ಸ್ವಾತಂತ್ರ್ಯ" ಮತ್ತು "ವ್ಯಕ್ತಿಯ ಘನತೆಯನ್ನು ಖಾತರಿಪಡಿಸುವ ಭ್ರಾತೃತ್ವ..." –ಈ ಎಲ್ಲವೂ ಜಾತ್ಯತೀತತೆಯ ಚೈತನ್ಯವನ್ನು ಪ್ರತಿಬಿಂಬಿಸುವ ತತ್ವಗಳನ್ನು ದೃಢಪಡಿಸಿತ್ತು.

ಭಾಗ III – ಮೂಲಭೂತ ಹಕ್ಕುಗಳಲ್ಲಿ, 25 ರಿಂದ 28 ರವರೆಗಿನ ಪರಿಚ್ಛೇದಗಳು ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಪ್ರತಿಪಾದಿಸುತ್ತವೆ. ಇದು ಭಾರತೀಯ ಗಣರಾಜ್ಯದ ಜಾತ್ಯತೀತ ಸ್ವರೂಪವನ್ನು ಮತ್ತಷ್ಟು ಒತ್ತಿಹೇಳುತ್ತದೆ. 25ನೇ ಪರಿಚ್ಛೇದವು ಎಲ್ಲಾ ವ್ಯಕ್ತಿಗಳಿಗೆ ಆತ್ಮಸಾಕ್ಷಿಯ ಸ್ವಾತಂತ್ರ್ಯ ಮತ್ತು ಧರ್ಮವನ್ನು ಮುಕ್ತವಾಗಿ ಪ್ರತಿಪಾದಿಸುವ, ಆಚರಿಸುವ ಮತ್ತು ಪ್ರಚಾರ ಮಾಡುವ ಹಕ್ಕನ್ನು ಖಾತರಿಪಡಿಸುತ್ತದೆ. 26ನೇ ಪರಿಚ್ಛೇದವು ಪ್ರತಿಯೊಂದು ಧಾರ್ಮಿಕ ಪಂಗಡಕ್ಕೂ ತಮ್ಮದೇ ಆದ ಧಾರ್ಮಿಕ ವ್ಯವಹಾರಗಳನ್ನು ನಿರ್ವಹಿಸುವ ಹಕ್ಕನ್ನು ನೀಡುತ್ತದೆ. 27ನೇ ಪರಿಚ್ಛೇದವು ನಿರ್ದಿಷ್ಟ ಧರ್ಮದ ಪ್ರಚಾರಕ್ಕಾಗಿ ಯಾವುದೇ ವ್ಯಕ್ತಿಯನ್ನು ತೆರಿಗೆ ಪಾವತಿಸಲು ಒತ್ತಾಯಿಸುವುದನ್ನು ನಿಷೇಧಿಸುತ್ತದೆ. 28ನೇ ಪರಿಚ್ಛೇದವು ರಾಜ್ಯದಿಂದ ಸಂಪೂರ್ಣವಾಗಿ ಧನಸಹಾಯ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ಬೋಧನೆಯನ್ನು ನಿಷೇಧಿಸುತ್ತದೆ.

ಇದಲ್ಲದೆ, 29 ಮತ್ತು 30ನೇ ಪರಿಚ್ಛೇದಗಳು ಅಲ್ಪಸಂಖ್ಯಾತರ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳನ್ನು ರಕ್ಷಿಸುತ್ತವೆ. ಅಲ್ಪಸಂಖ್ಯಾತರು ತಮ್ಮ ಭಾಷೆ, ಲಿಪಿ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಬಹುದು ಎಂದು ಅವು ಖಚಿತಪಡಿಸುತ್ತವೆ. ಧರ್ಮದ ಆಧಾರದ ಮೇಲೆ ರಾಜ್ಯವು ನಿರ್ವಹಿಸುವ ಅಥವಾ ಸಹಾಯ ಮಾಡುವ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ನಿರಾಕರಿಸುವುದನ್ನು ಅವು ನಿಷೇಧಿಸುತ್ತವೆ. ಅಲ್ಪಸಂಖ್ಯಾತರು ತಮ್ಮ ಆಯ್ಕೆಯ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು ಅವು ಅವಕಾಶ ನೀಡುತ್ತವೆ.

ಈ ಪರಿಚ್ಛೇದಗಳು ಸಾಮೂಹಿಕವಾಗಿ ರಾಜ್ಯವು ಯಾವುದೇ ಧರ್ಮದೊಂದಿಗೆ ಗುರುತಿಸುವುದಿಲ್ಲ ಅಥವಾ ಸವಲತ್ತು ನೀಡುವುದಿಲ್ಲ ಮತ್ತು ಪ್ರತಿಯೊಬ್ಬ ನಾಗರಿಕನು (ನಂಬಿಕೆಯನ್ನು ಲೆಕ್ಕಿಸದೆ) ಸಮಾನ ಹಕ್ಕುಗಳು ಮತ್ತು ರಕ್ಷಣೆಗಳನ್ನು ಅನುಭವಿಸುತ್ತಾನೆ ಎಂದು ಖಚಿತಪಡಿಸುತ್ತದೆ.

ಹೆಚ್ಚುವರಿಯಾಗಿ, ರಾಜ್ಯ ನೀತಿಯ ನಿರ್ದೇಶನ ತತ್ವಗಳು ದುರ್ಬಲ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ಉತ್ತೇಜಿಸಲು ಮತ್ತು 46ನೇ ಪರಿಚ್ಛೇದದಲ್ಲಿ ನಿರ್ದಿಷ್ಟಪಡಿಸಿದಂತೆ ಸಾಮಾಜಿಕ ಅನ್ಯಾಯ ಮತ್ತು ಎಲ್ಲಾ ರೀತಿಯ ಶೋಷಣೆಯಿಂದ ಅವರನ್ನು ರಕ್ಷಿಸಲು ನಿರ್ದೇಶಿಸುತ್ತವೆ. ಸಾಚಾರ್ ಸಮಿತಿ ಮತ್ತು ರಂಗನಾಥ ಮಿಶ್ರಾ ಆಯೋಗ ಸೇರಿದಂತೆ ಹಲವಾರು ಅಧಿಕೃತ ಅಧ್ಯಯನಗಳು, ಭಾರತದ ಧಾರ್ಮಿಕ ಅಲ್ಪಸಂಖ್ಯಾತರ ವಿವಿಧ ವರ್ಗಗಳು ಸಮಾಜದ ಉಳಿದ ಭಾಗಗಳಿಗೆ ಪುಟ 10 ಕ್ಕೆ





ದೇವನಹಳ್ಳಿ ರೈತರ ಹೋರಾಟದ ಹೊಸ ಘಟ್ಟ

ಜುಲೈ 15ಕ್ಕೆ ಸರಕಾರ ಏನೇ ತೀರ್ಮಾನ ಮಾಡಲಿ, ಒಂದಿಂಚೂ ಭೂಮಿ ಬಿಟ್ಟುಕೊಡುವುದಿಲ್ಲ..

ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣದ 13 ಹಳ್ಳಿಗಳ 1,777 ಎಕರೆ ಭೂಮಿಯ ಬಲವಂತದ ಭೂಸ್ವಾಧೀನವನ್ನು ಸಂಪೂರ್ಣವಾಗಿ ಕೈಬಿಡಬೇಕು ಎಂದು ಒತ್ತಾಯಿಸಿ, ಜೂನ್ 25, 2025ರಂದು ದೇವನಹಳ್ಳಿಯಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ರೈತರನ್ನು, ಅವರ ಬೆಂಬಲಕ್ಕೆ ನಿಂತಿದ್ದ 'ಸಂಯುಕ್ತ ಹೋರಾಟ ಸಮಿತಿ'ಯ ಹೋರಾಟಗಾರರನ್ನು ಬಂಧಿಸಿ ನಡುರಾತ್ರಿ ಅವರನ್ನು ಬಿಡುಗಡೆ ಮಾಡಿದ್ದು ಹೋರಾಟದ ವರದಿಯಾದ ಹಿಂದಿನ ಹಂತ. ತದನಂತರ ಹೋರಾಟದ ಮತ್ತೊಂದು ಘಟ್ಟ, ನಿರ್ಣಾಯಕ ಘಟ್ಟ ಆರಂಭವಾಗಿದೆ.

ರೈತರ ಬಂಧನ ಖಂಡಿಸಿ ಜೂನ್ 26ರಂದು ಬೆಂಗಳೂರಿನಲ್ಲಿ ಹಾಗೂ ರಾಜ್ಯದಾದ್ಯಂತ ಪ್ರತಿಭಟನೆಗಳು ವ್ಯಕ್ತವಾದವು. ದೇವನಹಳ್ಳಿಯಲ್ಲಿ ನೆಲೆಗೊಂಡಿದ್ದ ಹೋರಾಟದ ಕೇಂದ್ರ ಜೂನ್ 27ರಿಂದ ಫ್ರೀಡಮ್ ಪಾರ್ಕ್ ಎಂಬ 'ಭೂಮಿ ಬಿಡಾರ'ಕ್ಕೆ ವರ್ಗಾವಣೆಗೊಂಡಿತು. ಹೋರಾಟದ 'ಭೂಮಿ'ಯಲ್ಲೇ ಅಡುಗೆ. ಪ್ರತಿದಿನ ಸೊಪ್ಪು, ತರಕಾರಿಯನ್ನು ರೈತರೇ ತರುವರು. ಒಂದು ದಿನ ಚನ್ನರಾಯಪಟ್ಟಣದ ರೈತ ಕುಟುಂಬಗಳ ಮಕ್ಕಳೂ ಹೋರಾಟದಲ್ಲಿ ಭಾಗಿಯಾಗಿ ರೈತ ಚಳುವಳಿಗೆ ಹೊಸ ಹುರುಪು ನೀಡಿದರು.

'ನಾಡ ಉಳಿಸಿ ಸಮಾವೇಶ'

ಚಳುವಳಿಯ ಒತ್ತಡಕ್ಕೆ ಸಿಲುಕಿದ ಸರಕಾರ ಜೂನ್ 4ರಂದು ರೈತರೊಂದಿಗೆ ಮಾತುಕತೆ ನಿಗದಿ ಮಾಡಿತ್ತಲ್ಲ!! ಈ ಮಾತುಕತೆಯ ದಿನದಂದು, 'ನಾಡ ಉಳಿಸಿ ಸಮಾವೇಶ'ವಾಗಿ ಸ್ವಾತಂತ್ರ್ಯ ಉದ್ಯಾನವನದ 'ಭೂಮಿ ಸತ್ಯಾಗ್ರಹ'ದಲ್ಲಿ ಎಲ್ಲರೂ ನೆರೆಯಬೇಕೆಂದು ಹೋರಾಟ ಸಮಿತಿ ಕರೆ ನೀಡಿತು. ಅಂದು ರೈತರು, ರೈತ ಚಳುವಳಿಯ ಬೆಂಬಲಿಗರು ಸಾವಿರ ಸಾವಿರ ಸಂಖ್ಯೆಯಲ್ಲಿ ನೆರೆದರು. ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ)ದ ಅಖಿಲ ಭಾರತ ಮುಖಂಡರು ಸಮಾವೇಶವನ್ನು ಉದ್ಘಾಟನೆ ಮಾಡಿದರು. ಹಸಿರು, ನೀಲಿ, ಕೆಂಪು ಶಾಲುಗಳನ್ನು ಗಾಳಿಯಲ್ಲಿ ತೂರಿ ರೈತ ಚಳುವಳಿಗಾರರು ಬಿರುಗಾಳಿ ಎಬ್ಬಿಸಿದರು. ಡಾ. ವಿಜು ಕೃಷ್ಣನ್, ರಾಕೇಶ್ ಟಿಕಾಯತ್, ಡಾ. ಸುನೀಲಂ, ದರ್ಶನ್ ಪಾಲ್, ಮುಂತಾದ ದೇಶದ ರೈತ ಚಳುವಳಿಯ ಹಿರಿಯ ಮುಖಂಡರು ಭೂಸ್ವಾಧೀನದ ವಿರುದ್ಧ ಗುಡುಗಿದರು. ವಿಜು ಕೃಷ್ಣನ್ ಮಾತನಾಡುತ್ತಾ, 'ದೇಶದಲ್ಲಿ ನೂರಾರು ಕಡೆಗಳಲ್ಲಿ ಬಲವಂತದ ಭೂಸ್ವಾಧೀನ ವಿರೋಧಿ ಹೋರಾಟ ನಡೆಯುತ್ತಿದೆ. ಭೂಮಿಗೆ ಕೊಡಲಾಗುವ ಪರಿಹಾರ ಹೆಚ್ಚಳಕ್ಕಾಗಿ ನಡೆಯುವ ಹೋರಾಟಗಳಿಗಿಂತ ಭೂಮಿಯನ್ನು ಉಳಿಸಿಕೊಳ್ಳಲು ನಡೆಯುತ್ತಿರುವ ದೇವನಹಳ್ಳಿಯ ರೈತರ ಹೋರಾಟ ದೇಶಕ್ಕೆ ಒಂದು ಮಾದರಿ ಹೋರಾಟ' ಎಂದರು. 'ಜನರಿಗೆ ಅಕ್ಕಿ ಕೊಟ್ಟು ಅನ್ನರಾಮಯ್ಯ ಅನಿಸಿಕೊಂಡಿರುವ ಸಿದ್ದರಾಮಯ್ಯ ಅವರೇ, ನಮ್ಮ ಭೂಮಿಯನ್ನು ನಮಗೆ ಬಿಟ್ಟು ಕೊಡಿ, ನಾವು ಸಾವಿರಾರು ಜನರ ಹಸಿವು ನೀಗಿಸುತ್ತೇವೆ' ಎಂದು ಮಟ್ಟಬಾರಲು ಗ್ರಾಮದ ರೈತ ಮಹಿಳೆ ಲಕ್ಷ್ಮಮ್ಮ ಘೋಷಿಸಿದರು.

ಕಾನೂನು ಸಲಹೆ ಬರೆದು ಕೊಡುವೆ

"ಭೂಸ್ವಾಧೀನ ಕೈಬಿಡಲು ಕಾನೂನು ತೊಡಕು ತೋರಿಸುತ್ತಿರುವ ಸರಕಾರಕ್ಕೆ ಯಾವುದೇ ಕಾನೂನು ತೊಡಕು ಬರದಂತೆ ಭೂಸ್ವಾಧೀನ ಆದೇಶ ರದ್ದುಮಾಡಲು ನಾನು ಉಚಿತವಾಗಿ ಕಾನೂನು ಸಲಹೆ ಬರೆದುಕೊಡುತ್ತೇನೆ, ನನ್ನ ಬಳಿ ಬನ್ನಿ" ಎಂದು ಸುಪ್ರಿಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡರು ಸರಕಾರಕ್ಕೆ ಆಹ್ವಾನ ನೀಡಿದರು.

ಹೋರಾಟದ ಸಾಗರಕ್ಕೆ...

ಈ ಹೋರಾಟವನ್ನು ಬೆಂಬಲಿಸಿ ಜುಲೈ 4ರವರೆಗೂ ಸಮಾಜದ ನಾನಾ ವಿಭಾಗದ ಗಣ್ಯರು, ಸಾಂಸ್ಕೃತಿಕ ಸಂಘಟನೆ 'ಸಮುದಾಯ' ಸೇರಿದಂತೆ ಹಲವು ಸಾಂಸ್ಕೃತಿಕ ಸಂಘಟನೆಗಳ ಜನರು ಪಾಲ್ಗೊಂಡಿದ್ದರು. ಸಾಹಿತಿಗಳಾದ ರಹಮತ್ ತರಿಕೆರೆ, ಟಿ.ಎನ್. ಸೀತಾರಾಮ್, ಬಿ.ಟಿ. ಲಲಿತಾನಾಯಕ್, ಚಲನಚಿತ್ರ ಕಲಾವಿದರುಗಳಾದ ನಟ ಪ್ರಕಾಶ್ ರೈ, ಕಿಶೋರ್, ಅಕ್ಷತಾ ಪಾಂಡವಪುರ, ನಿರ್ದೇಶಕರುಗಳಾದ ಗಿರೀಶ್ ಕಾಸರವಳ್ಳಿ, ರಾಜೇಂದ್ರ ಸಿಂಗ್ ಬಾಬು, ನಾಗತಿಹಳ್ಳಿ ಚಂದ್ರಶೇಖರ್, ಚಿತ್ರ ಸಾಹಿತಿ ಕವಿರಾಜ್ ರೈತರ ದನಿಗೆ ದನಿಗೂಡಿಸಿದರು. ಪ್ರಕಾಶ್ ಕಮ್ಮರಡಿ ಸೇರಿದಂತೆ ಹಲವು ಕೃಷಿ ವಿಜ್ಞಾನಿಗಳು, ತಂತ್ರಜ್ಞರು, ಕೃಷಿ ತಜ್ಞ ಕೆ.ಪಿ.ಸುರೇಶ್ ಮುಂತಾದವರು ಹೋರಾಟಕ್ಕೆ ಇಂಬು ನೀಡಿದರು. ವಿದ್ಯಾರ್ಥಿ ಸಂಘಟನೆ ಎಸ್‌ಎಫ್‌ಐನ ಟಿ.ಎಸ್.ವಿಜಯ್ ಕುಮಾರ್, ಕೆವಿಎಸ್‌ನ ಸರೋವರ್ ಬೆಂಕಿಕೆರೆ ಮುಂತಾದವರ ನೇತೃತ್ವದಲ್ಲಿ ವಿದ್ಯಾರ್ಥಿಗಳು, ಲವಿತ್ರ ವಸ್ತ್ರದ್ ಮತ್ತು ಬಸವರಾಜ ಪೂಜಾರ್ ನೇತೃತ್ವದಲ್ಲಿ ಯುವಜನ ಸಂಘಟನೆ ಡಿವೈಎಫ್‌ಐ ಕಾರ್ಯಕರ್ತರು, ದೇವಿ, ಗೌರಮ್ಮ, ಕೆ.ಎಸ್.ವಿಮಲ ನೇತೃತ್ವದ ಜನವಾದಿ ಸಂಘಟನೆಯ ಕಾರ್ಯಕರ್ತರು, ದಲಿತ ಹಕ್ಕುಗಳ ಸಮಿತಿಯ ಗೋಪಾಲಕೃಷ್ಣ ಅರಳಹಳ್ಳಿ, ರಾಜಣ್ಣ, ಕೆಪಿಆರ್‌ಎಸ್, ಸಿಐಟಿಯು ಸಂಘಟನೆಗಳ ಮುಖಂಡರು, ಕಾರ್ಯಕರ್ತರು, ಹೋರಾಟವನ್ನು ಬೆಂಬಲಿಸಿ ಪಾಲ್ಗೊಂಡಿದ್ದರು. ಎಐಎಲ್‌ಯುನ ಹೆಚ್.ವಿ.ರಾಮಚಂದ್ರಾರೆಡ್ಡಿ, ಕೆ.ಆರ್. ವೆಂಕಟೇಶಗೌಡ, ಟಿ.ಎನ್.ಶಿವಾರೆಡ್ಡಿಯವರೊಂದಿಗೆ ವಕೀಲರು ಹೋರಾಟದ ಕಣವೆಂಬ ಜನತಾ ನ್ಯಾಯಾಲಯದಲ್ಲಿ ರೈತರ ಪರವಾಗಿ ವಾದಮಂಡಿಸಿದರು.

ರೈತರ ಕುರಿತು 'ಮಾಧ್ಯಮ ಮಮತೆ'

ಈ ನಡುವೆ ರೈತ ಹೋರಾಟದ 1184ನೇ ದಿನ, ಚನ್ನರಾಯಪಟ್ಟಣದ ಹಳ್ಳಿಗಳ ರೈತರ ಭಾವನೆ-ನೈಜ ಪರಿಸ್ಥಿತಿಯನ್ನು ಅರಿಯಲು ಪತ್ರಕರ್ತರ ಒಂದು ದೊಡ್ಡ ತಂಡವು ಹಲವು ಹಳ್ಳಿಗಳಿಗೆ ಭೇಟಿ ನೀಡಿತು. ಚನ್ನರಾಯಪಟ್ಟಣದ ಪ್ರತಿಭಟನಾ ಸ್ಥಳಕ್ಕೂ ಭೇಟಿ ನೀಡಿದ ತಂಡವು ಮಾಧ್ಯಮಗಳಲ್ಲಿ ರೈತರ ಸಂಕಟಕ್ಕೆ ದನಿ ನೀಡಿತು.

ಸರಕಾರದೊಂದಿಗೆ ಮಾತುಕತೆ

ಜುಲೈ 4ರ ಮಾತುಕತೆ ವಿಧಾನಸೌಧದಲ್ಲಿ. ಸ್ವಾತಂತ್ರ್ಯ ಉದ್ಯಾನದ ಹೋರಾಟದ ಕಣದಿಂದ ಚನ್ನರಾಯಪಟ್ಟಣದ ರೈತರು ತಾವು ಬೆಳೆದು ತಂದ ಹೂವು, ಹಣ್ಣು, ತರಕಾರಿಗಳನ್ನು ಹೊತ್ತುಕೊಂಡು ಹೋಗಿ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಕಾಣಿಕೆಯಾಗಿ ಸಲ್ಲಿಸಿದ್ದು ರೈತರ ಒಂದು ಪ್ರಬಲವಾದ ಸಂಕೇತ ಮತ್ತು ಸಂದೇಶವಾಗಿತ್ತು.

ಮಾತುಕತೆಯಲ್ಲಿ ಮುಖ್ಯಮಂತ್ರಿಗಳು, ದೇವನಹಳ್ಳಿ ಶಾಸಕರು-ಆಹಾರ ಸಚಿವರೂ ಆದ ಕೆ.ಎಚ್.ಮುನಿಯಪ್ಪ, ಶಾಸಕ ಬಿ.ಆರ್.ಪಾಟೀಲ, ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್, ರಾಜ್ಯದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಕಾನೂನು ಸಲಹೆಗಾರರಾದ ಎ.ಎಸ್.ಪೊನ್ನಣ್ಣ ಮುಂತಾದವರು ಒಂದು ಕಡೆ. ಮತ್ತೊಂದು ಕಡೆ ಚನ್ನರಾಯಪಟ್ಟಣ ಹೋಬಳಿ ಭೂಸ್ವಾದೀನ ವಿರೋಧಿ ಹೋರಾಟ ಸಮಿತಿಯ ಮುಖಂಡರಾದ ಕಾರಳ್ಳಿ ಶ್ರೀನಿವಾಸ್, ನಂಜಪ್ಪ ನಲ್ಲಪ್ಪನಹಳ್ಳಿ, ಮಾರೇಗೌಡ, ಗೋಪಿನಾಥ್, ರಮೇಶ್ ಚೀಚಮಾರನಹಳ್ಳಿ, ಅಶ್ವಥಪ್ಪ ಚನ್ನರಾಯಪಟ್ಟಣ, ಎನ್.ಪ್ರಭಾ ಬೆಳವಂಗಲ. ಇವರ ಬೆಂಬಲಕ್ಕೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ ಹೆಚ್.ಆರ್.ಬಸವರಾಜಪ್ಪ, ಬಡಗಲಪುರ ನಾಗೇಂದ್ರ, ಚುಕ್ಕಿ ನಂಜುಂಡಸ್ವಾಮಿ, ಗುರುಪ್ರಸಾದ್ ಕೆರೆಗೋಡು, ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಹೋರಾಟಗಾರರಾದ ಡಾ. ಸಿದ್ಧನಗೌಡ ಪಾಟೀಲ, ಕರ್ನಾಟಕ ಜನಶಕ್ತಿ ಸಂಘಟನೆಯ ರಾಜ್ಯಾಧ್ಯಕ್ಷ ನೂರ್ ಶ್ರೀಧರ್, ಸಿಐಟಿಯು ರಾಜ್ಯಾಧ್ಯಕ್ಷೆ ಎಸ್. ವರಲಕ್ಷ್ಮಿ, ಪ್ರಧಾನ ಕಾರ್ಯದರ್ಶಿ ಎಸ್.ಮೀನಾಕ್ಷಿ ಸುಂದರಂ, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷ ಯು.ಬಸವರಾಜ, ಎಐಯುಟಿಯುಸಿ ಮುಖಂಡರಾದ ಕೆ.ವಿ.ಭಟ್, ವಿ.ನಾಗರಾಜ್, ಪಿ.ಪಿ.ಅಪ್ಪಣ್ಣ, ಡಿ.ಹೆಚ್.ಪೂಜಾರ್. ಇದರ ಜೊತೆಗೆ ಕಲಾವಿದ ಪ್ರಕಾಶ್ ರಾಜ್, ಪತ್ರಕರ್ತ ಇಂದೂಧರ ಹೊನ್ನಾಪುರ, ಹೋರಾಟಗಾರ ಎಸ್.ಆರ್.ಹಿರೇಮಠ್ ಇವರ ಅತಿಥಿ ಉಪಸ್ಥಿತಿ.

'ಪ್ರಾಣವನ್ನಾದರೂ ಕೊಡುತ್ತೇವೆ, ಆದರೆ..

'ಪ್ರಾಣವನ್ನಾದರೂ ಕೊಡುತ್ತೇವೆ, ಆದರೆ ಭೂಮಿ ಬಿಡುವುದಿಲ್ಲ" ಎಂಬ ರೈತರ ದೃಢ ನಿರ್ಧಾರವನ್ನು ರೈತರೂ, ರೈತ ಪ್ರತಿನಿಧಿಗಳು ಎಲ್ಲರೂ ಸ್ಪಷ್ಟವಾಗಿ ಸರಕಾರಕ್ಕೆ ತಿಳಿಸಿದ್ದಾರೆ. ಚೆಂಡು ಈಗ ಸರಕಾರದ ಅಂಗಳದಲ್ಲಿದೆ. ಸರಕಾರದ ಮನಸ್ಸು ಅದು ಯಾವ ಕಾರ್ಪೋರೇಟ್ ಕುಳಗಳ ಅಂಗಳದಲ್ಲಿದೆ? ಸರಕಾರದ 'ಆತ್ಮ' ಯಾವ ಬಂಡವಾಳಗಾರನ ಪಂಜರದ ಒಳಗೆ ಬಂಧಿಯಾಗಿದೆ? ಎಂಬುದು ಮುಂದೆ ತಿಳಿಯಲಿದೆ.

ಸರಕಾರದ ಧೋರಣೆ – ಪ್ರಕಟಣೆ

ಮಾತುಕತೆಯ ನಂತರ ಸರಕಾರದ ಪರವಾಗಿ ಮುಖ್ಯಮಂತ್ರಿಗಳು ತಮ್ಮ ಅಧಿಕೃತ ಫೇಸ್‌ಬುಕ್ ಪೇಜ್‌ನಲ್ಲಿ ಈ ಬಗೆಗೆ ಬರೆದುಕೊಂಡಿದ್ದಾರೆ. ಅದನ್ನೇ ಮಾತುಕತೆಯಲ್ಲೂ ಹೇಳಿದ್ದಾರೆ. "..ಭೂಸ್ವಾಧೀನ ಪ್ರಕ್ರಿಯೆ ಕೈಬಿಡುವುದಕ್ಕೆ ಸಂಬಂಧಿಸಿದಂತೆ ಕೆಲವು ಕಾನೂನು ತೊಡಕುಗಳಿವೆ... ಈಗಾಗಲೇ ಎಪ್ರಿಲ್ ತಿಂಗಳಲ್ಲಿ ಅಂತಿಮ ನೋಟಿಫಿಕೇಶನ್ ಅಗಿರುವ ಕಾರಣ ಅದರ ಸಾಧಕ ಬಾಧಕಗಳ ಕುರಿತು ಚರ್ಚೆ ನಡೆಸುವ ಅಗತ್ಯವಿದೆ.. ಈ ಹಿನ್ನಲೆಯಲ್ಲಿ 10 ದಿನಗಳ ಕಾಲಾವಕಾಶ ಅಗತ್ಯವಿದೆ." ಎಂದಿರುವ ಬರಹ, "ಕಾನೂನು – ಕಾಯ್ದೆಗೆ ವಿರುದ್ಧವಾಗಿ ಸರ್ಕಾರ ಯಾವುದೇ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಿಲ್ಲ. ನಿಯಮಾನುಸಾರ ಅಂತಿಮ ನೋಟಿಫಿಕೇಷನ್ ಆಗಿರುವ ಕಾರಣ, ಅದರ ಕಾನೂನು ಅಂಶಗಳನ್ನು ಪರಿಶೀಲಿಸುವ ಅಗತ್ಯವಿದೆ." ಪುಟ 10 ಕ್ಕೆ





ಆರ್‌ಎಸ್‌ಎಸ್‌ನ ಕೋರೆ ಹಲ್ಲುಗಳು ಬಹಿರಂಗಗೊಂಡಿವೆ...... ಪುಟ 8 ರಿಂದ

ಹೋಲಿಸಿದರೆ ವಾಸ್ತವವಾಗಿ ಸಾಮಾಜಿಕ–ಆರ್ಥಿಕವಾಗಿ ಅನನುಕೂಲಕರವಾಗಿವೆ ಎಂದು ತೋರಿಸಿವೆ.

ಜಾತ್ಯತೀತತೆಯು ಸಂವಿಧಾನದ ಮೂಲ ರಚನೆಯ ಭಾಗವಾಗಿದೆ ಎಂದು ಸುಪ್ರೀಂ ಕೋರ್ಟ್ ಪದೇ ಪದೇ ದೃಢಪಡಿಸಿದೆ. ಜಾತ್ಯತೀತತೆಯು ರಾಜ್ಯವು ಎಲ್ಲಾ ಧರ್ಮಗಳನ್ನು ಸಮಾನವಾಗಿ ಪರಿಗಣಿಸುವುದು ಮತ್ತು ಯಾವುದೇ ರಾಜ್ಯ ಧರ್ಮದ ಅನುಪಸ್ಥಿತಿ ಎಂದು ಅದು ಸ್ಥಿರವಾಗಿ ಹೇಳುತ್ತದೆ.

ಮೂಲಭೂತ ರಚನೆ ಸಿದ್ಧಾಂತವನ್ನು 1973ರಲ್ಲಿ ಕೇಶವಾನಂದ ಭಾರತಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ಹೆಗ್ಗುರುತು ತೀರ್ಪಿನಲ್ಲಿ ಪರಿಚಯಿಸಲಾಯಿತು ಎಂಬುದನ್ನು ಗಮನಿಸುವುದು ಮುಖ್ಯ. ಸಂವಿಧಾನವನ್ನು ತಿದ್ದುಪಡಿ ಮಾಡಲು ಭಾರತೀಯ ಸಂಸತ್ತು ವಿಶಾಲ ಅಧಿಕಾರವನ್ನು ಹೊಂದಿದ್ದರೂ, ಅದು ಅದರ ಮೂಲಭೂತ ಅಥವಾ "ಮೂಲ" ರಚನೆಯನ್ನು ಬದಲಾಯಿಸಲು ಅಥವಾ ಸಾಧ್ಯವಿಲ್ಲ. ಅಂದರೆ, ಸಂವಿಧಾನದ ಮೂಲ ರಚನೆಯನ್ನು ಉಲ್ಲಂಘಿಸಲಾಗುವುದಿಲ್ಲ ಎಂದು ಈ ಸಿದ್ಧಾಂತವು ಪ್ರತಿಪಾದಿಸುತ್ತದೆ.

ಈ ತೀರ್ಪಿನ ಮೂರು ವರ್ಷಗಳ ನಂತರ, 1976ರಲ್ಲಿ 42ನೇ ತಿದ್ದುಪಡಿಯು "ಸಮಾಜವಾದಿ" ಮತ್ತು "ಜಾತ್ಯತೀತ" ಪದಗಳನ್ನು ಪೀಠಿಕೆಯಲ್ಲಿ ಸೇರಿಸಿದಾಗ, ಅದನ್ನು ಮೂಲ ರಚನೆಯ ಸಿದ್ಧಾಂತದ ಪೂರ್ಣ ಮಾನ್ಯತೆಯಾಗಿ ಮಾಡಲಾಯಿತು. ಈ ತತ್ವಗಳು ಈಗಾಗಲೇ ಸಂವಿಧಾನದಲ್ಲಿ ಅಂತರ್ಗತವಾಗಿರುವುದರಿಂದ ಮತ್ತು ಅದರ ಮೂಲ ರಚನೆಯನ್ನು ಯಾವುದೇ ರೀತಿಯಲ್ಲಿ ಉಲ್ಲಂಘಿಸದ ಕಾರಣ ತಿದ್ದುಪಡಿಯನ್ನು ಅನುಮತಿಸಲಾಗಿದೆ.

ಭಾರತದ ಪರಿಕಲ್ಪನೆಯಿಂದ ಬೇರ್ಪಡಿಸಲಾಗದು

ಸಂವಿಧಾನದ ಪೀಠಿಕೆಯಲ್ಲಿರುವ ಸಮಾಜವಾದ ಮತ್ತು ಜಾತ್ಯತೀತ ಪದಗಳು 1970ರ ದಶಕದ ಕೇವಲ "ಸೇರ್ಪಡೆಗಳು" ಅಥವಾ "ಹೇರಿಕೆಗಳು" ಎಂದು ಹೇಳುವುದು ತಪ್ಪು. ಉದ್ದೇಶ, ನಿರ್ಣಯ, ಸಂವಿಧಾನ ಸಭೆಯ ಚರ್ಚೆಗಳು ಮತ್ತು ಭಾರತದ ವಸಾಹತುಶಾಹಿ ವಿರೋಧಿ ಸ್ವಾತಂತ್ರ್ಯ ಹೋರಾಟದ ಜೀವಂತ ಅನುಭವ, ಇವೆಲ್ಲವೂ ಈ ಆದರ್ಶಗಳು ಗಣರಾಜ್ಯದ ಸ್ಥಾಪಕ ದೃಷ್ಟಿಕೋನಕ್ಕೆ ಕೇಂದ್ರವಾಗಿವೆ ಎಂದು ದೃಢಪಡಿಸುತ್ತವೆ. ಸಾಮಾಜಿಕ ಮತ್ತು ಆರ್ಥಿಕ ನ್ಯಾಯ, ಸಮಾನತೆ ಮತ್ತು ಭ್ರಾತೃತ್ವಕ್ಕೆ ಸಂವಿಧಾನದ ಬದ್ಧತೆಯು ಅಂತರ್ಗತವಾಗಿ ಸಮಾಜವಾದಿಯಾಗಿದ್ದರೆ, ಧಾರ್ಮಿಕ ಸ್ವಾತಂತ್ರ್ಯ, ತಾರತಮ್ಯ ರಹಿತ ಮತ್ತು ಅಲ್ಪಸಂಖ್ಯಾತ ಹಕ್ಕುಗಳ ಖಾತರಿಯು ಅಂತರ್ಗತವಾಗಿ ಜಾತ್ಯತೀತವಾಗಿದೆ. ಪೀಠಿಕೆಯಿಂದ ಸಮಾಜವಾದಿ ಮತ್ತು ಜಾತ್ಯತೀತ ಪದಗಳನ್ನು ತೆಗೆದುಹಾಕಿದರೂ ಸಹ, ಸಂವಿಧಾನದ ಮೂಲ ತತ್ವಶಾಸ್ತ್ರ, ರಚನೆ ಮತ್ತು ನಿಬಂಧನೆಗಳು ಮತ್ತು ಅವುಗಳ ಸಾರದಲ್ಲಿ ಬದಲಾಗದೆ ಉಳಿಯುತ್ತವೆ.

ಕರಡು ಸಮಿತಿಯ ಅಧ್ಯಕ್ಷರಾದ ಡಾ.ಬಿ.ಆರ್. ಅಂಬೇಡ್ಕರ್ ಅವರು ನವೆಂಬರ್ 25, 1949ರಂದು ಸಂವಿಧಾನ ಸಭೆಯನ್ನುದ್ದೇಶಿಸಿ ಮಾಡಿದ ತಮ್ಮ ಅಂತಿಮ ಭಾಷಣದಲ್ಲಿ ಈ ಮನೋಭಾವವನ್ನು ಸೆರೆಹಿಡಿದರು. ಅವರು ಹೇಳಿದರು, "ನಾವು ಕೇವಲ ರಾಜಕೀಯ ಪ್ರಜಾಪ್ರಭುತ್ವದಿಂದ ತೃಪ್ತರಾಗಬಾರದು. ನಮ್ಮ ರಾಜಕೀಯ ಪ್ರಜಾಪ್ರಭುತ್ವವನ್ನು ಸಾಮಾಜಿಕ ಪ್ರಜಾಪ್ರಭುತ್ವವನ್ನಾಗಿ ಮಾಡಬೇಕು. ಸಾಮಾಜಿಕ ಪ್ರಜಾಪ್ರಭುತ್ವದ ತಳಹದಿಯಲ್ಲಿ ಸಾಮಾಜಿಕ ಪ್ರಜಾಪ್ರಭುತ್ವ ಇಲ್ಲದಿದ್ದರೆ ರಾಜಕೀಯ ಪ್ರಜಾಪ್ರಭುತ್ವ ಉಳಿಯಲು ಸಾಧ್ಯವಿಲ್ಲ. ಸಾಮಾಜಿಕ ಪ್ರಜಾಪ್ರಭುತ್ವ ಎಂದರೆ ಏನು? ಇದರ ಅರ್ಥ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಜೀವನದ ತತ್ವಗಳಾಗಿ ಗುರುತಿಸುವ ಜೀವನ ವಿಧಾನ... ಸ್ವಾತಂತ್ರ್ಯವನ್ನು ಸಮಾನತೆಯಿಂದ ಬೇರ್ಪಡಿಸಲು ಸಾಧ್ಯವಿಲ್ಲ, ಸಮಾನತೆಯನ್ನು ಸ್ವಾತಂತ್ರ್ಯದಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಹಾಗೆಯೇ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಭ್ರಾತೃತ್ವದಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಸಮಾನತೆ ಇಲ್ಲದೆ, ಸ್ವಾತಂತ್ರ್ಯವು ಹಲವರ ಮೇಲೆ ಕೆಲವರ ಪ್ರಾಬಲ್ಯವನ್ನು ಉತ್ಪಾದಿಸುತ್ತದೆ. ಭ್ರಾತೃತ್ವವಿಲ್ಲದೆ, ಸ್ವಾತಂತ್ರ್ಯವು ಅನೇಕರ ಮೇಲೆ ಕೆಲವರ ಪ್ರಾಬಲ್ಯವನ್ನು ಉತ್ಪಾದಿಸುತ್ತದೆ. ಭ್ರಾತೃತ್ವವಿಲ್ಲದೆ, ಸ್ವಾತಂತ್ರ್ಯ ಮತ್ತು ಸಮಾನತೆಯು ವಸ್ತುಗಳ ನೈಸರ್ಗಿಕ ಹಾದಿಯಾಗಲು ಸಾಧ್ಯವಿಲ್ಲ."

ಅವರು ಮುಂದುವರೆದು, "ಸಾಮಾಜಿಕ ಮಟ್ಟದಲ್ಲಿ, ಭಾರತದಲ್ಲಿ ಶ್ರೇಣೀಕೃತ ಅಸಮಾನತೆಯ ತತ್ವವನ್ನು ಆಧರಿಸಿದ ಸಮಾಜವಿದೆ. ಅಂದರೆ ಕೆಲವರಿಗೆ ಉನ್ನತಿ ಮತ್ತು ಇತರರಿಗೆ ಅವನತಿ ಎಂದರ್ಥ. ಆರ್ಥಿಕ ಮಟ್ಟದಲ್ಲಿ, ನಮ್ಮಲ್ಲಿ ಕೆಲವರು ಅಪಾರ ಸಂಪತ್ತನ್ನು ಹೊಂದಿರುವ ಸಮಾಜವಿದೆ. ಅನೇಕರು ಕಡುಬಡತನದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಜನವರಿ 26, 1950 ರಂದು, ನಾವು ವಿರೋಧಾಭಾಸಗಳ ಜೀವನವನ್ನು ಪ್ರವೇಶಿಸಲಿದ್ದೇವೆ. ರಾಜಕೀಯದಲ್ಲಿ ನಮಗೆ ಸಮಾನತೆ ಇರುತ್ತದೆ ಮತ್ತು ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ನಮಗೆ ಅಸಮಾನತೆ ಇರುತ್ತದೆ. ರಾಜಕೀಯದಲ್ಲಿ ನಾವು ಒಬ್ಬ ವ್ಯಕ್ತಿಗೆ ಒಂದು ಮತ ಮತ್ತು ಒಂದು ಮತಕ್ಕೆ ಒಂದು ಮೌಲ್ಯ ಎಂಬ ತತ್ವವನ್ನು ಗುರುತಿಸುತ್ತೇವೆ. ನಮ್ಮ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ, ನಮ್ಮ ಸಾಮಾಜಿಕ ಮತ್ತು ಆರ್ಥಿಕ ರಚನೆಯ ಕಾರಣದಿಂದಾಗಿ, ನಾವು ಒಬ್ಬ ವ್ಯಕ್ತಿಗೆ ಒಂದು ಮೌಲ್ಯ ಎಂಬ ತತ್ವವನ್ನು ನಿರಾಕರಿಸುತ್ತಲೇ ಇರುತ್ತೇವೆ. ವಿರೋಧಾಭಾಸಗಳ ಇಂತಹ ಜೀವನದಲ್ಲಿ ನಾವು ಎಷ್ಟು ಕಾಲ ಬದುಕುತ್ತೇವೆ? ನಮ್ಮ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಸಮಾನತೆಯನ್ನು ನಾವು ಎಷ್ಟು ಕಾಲ ನಿರಾಕರಿಸುತ್ತಲೇ ಇರುತ್ತೇವೆ? ನಾವು ಅದನ್ನು ದೀರ್ಘಕಾಲದವರೆಗೆ ನಿರಾಕರಿಸುತ್ತಲೇ ಇದ್ದರೆ, ನಮ್ಮ ರಾಜಕೀಯ ಪ್ರಜಾಪ್ರಭುತ್ವವನ್ನು ಅಪಾಯಕ್ಕೆ ಸಿಲುಕಿಸುವ ಮೂಲಕ ಮಾತ್ರ ನಾವು ಹಾಗೆ ಮಾಡುತ್ತೇವೆ. ನಾವು ಈ ವಿರೋಧಾಭಾಸವನ್ನು ಸಾಧ್ಯವಾದಷ್ಟು ಬೇಗ ತೆಗೆದುಹಾಕಬೇಕು. ಇಲ್ಲದಿದ್ದರೆ, ಈ ನಮ್ಮ ರಚನಾ ಸಭೆಯು ತುಂಬಾ ಶ್ರಮವಹಿಸಿ ನಿರ್ಮಿಸಲ್ಪಟ್ಟ, ರಾಜಕೀಯ ಪ್ರಜಾಪ್ರಭುತ್ವದ ರಚನೆಯನ್ನು ಅಸಮಾನತೆಯಿಂದ ಬಳಲುತ್ತಿರುವವರು ಸ್ಫೋಟಿಸುತ್ತಾರೆ." ಎಂಬ ಎಚ್ಚರಿಕೆಯನ್ನು ಅಂಬೇಡ್ಕರ್‌ರವರು ನೀಡಿದರು.

ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನು –ಸಮಾಜವಾದ ಮತ್ತು ಜಾತ್ಯತೀತತೆಯ ಮೂಲತತ್ವವನ್ನು– ಭದ್ರಪಡಿಸಿಕೊಳ್ಳಲು ಸಂವಿಧಾನವನ್ನು ರಚಿಸಲಾಗಿದೆ ಎಂದು ಅಂಬೇಡ್ಕರ್ ಅವರ ಮಾತುಗಳು ಪ್ರಬಲವಾಗಿ ದೃಢಪಡಿಸುತ್ತವೆ. ಈ ಮೂಲಭೂತ ಮೌಲ್ಯಗಳನ್ನು ದುರ್ಬಲಗೊಳಿಸುವ ಯಾವುದೇ ಪ್ರಯತ್ನದ ವಿರುದ್ಧ ಅವು ಮಾರ್ಗದರ್ಶಕ ಬೆಳಕಾಗಿ ಉಳಿದಿವೆ.

ಆರ್‌ಎಸ್‌ಎಸ್ ನಿಲುವುಗಳು ಬಹಿರಂಗಗೊಂಡಿವೆ

ಭಾರತೀಯ ಸಂವಿಧಾನದ ಪೀಠಿಕೆಯಿಂದ ಸಮಾಜವಾದ ಮತ್ತು ಜಾತ್ಯತೀತತೆಯನ್ನು ತೆಗೆದುಹಾಕಬೇಕೆಂಬ ಆರ್‌ಎಸ್‌ಎಸ್ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಅವರ ಕರೆಯು ಕೇವಲ "ಐತಿಹಾಸಿಕ ನಿಖರತೆ"ಯ ಮುಗ್ಧ ಕರೆಯಲ್ಲ; ಇದು ಭಾರತೀಯ ಗಣರಾಜ್ಯದ ಅಡಿಪಾಯವನ್ನೇ ಹಾಳುಮಾಡುವ ಒಂದು ಉದ್ದೇಶಪೂರ್ವಕ ಪ್ರಯತ್ನವಾಗಿದೆ. ಈ ಮಾತುಗಳು ಡಾ.ಬಿ.ಆರ್.ಅಂಬೇಡ್ಕರ್ ಅವರ ಮೂಲ ಕರಡಿನ ಭಾಗವಾಗಿಲ್ಲ ಎಂಬ ಅವರ ಹೇಳಿಕೆಯು ನಿರ್ಣಾಯಕ ಸಂಗತಿಯನ್ನು ನಿರ್ಲಕ್ಷಿಸುತ್ತದೆ. ಸಮಾಜವಾದ ಮತ್ತು ಜಾತ್ಯತೀತತೆಯ ತತ್ವಗಳು ಸಂವಿಧಾನವನ್ನು ವ್ಯಾಪಿಸಿವೆ. 42ನೇ ತಿದ್ದುಪಡಿಯು ಯಾವಾಗಲೂ ಸೂಚ್ಯವಾಗಿರುವುದನ್ನು ಸ್ಪಷ್ಟಪಡಿಸಿದೆ. ವಾಸ್ತವವಾಗಿ, 42ನೇ ತಿದ್ದುಪಡಿಗೂ ಮುಂಚೆಯೇ 25(2)(ಎ) ಪರಿಚ್ಛೇದದಲ್ಲಿ ಜಾತ್ಯತೀತ ಎಂಬ ಪದವಿದೆ. ಜನರ ಕಲ್ಯಾಣವನ್ನು ಉತ್ತೇಜಿಸಲು ಸಾಮಾಜಿಕ ಕ್ರಮವನ್ನು ಭದ್ರಪಡಿಸಿಕೊಳ್ಳಲು ರಾಜ್ಯವನ್ನು ನಿರ್ದೇಶಿಸುವ 38ನೇ ಪರಿಚ್ಛೇದದ ಬಗ್ಗೆ ಈಗಾಗಲೇ ಉಲ್ಲೇಖಿಸಲಾಗಿದೆ. ಇದು ಸಮಾಜವಾದದತ್ತ ಒಲವು ಪ್ರತಿಬಿಂಬಿಸುತ್ತದೆ.

ಐತಿಹಾಸಿಕವಾಗಿ, ಆರ್‌ಎಸ್‌ಎಸ್ ಭಾರತದ ರಾಷ್ಟ್ರೀಯ ಅಸ್ಮಿತೆಯನ್ನು ಧೈವಪ್ರಭುತ್ವ, ಬಹುಸಂಖ್ಯಾತ ಮಾರ್ಗಗಳಲ್ಲಿ ಮರುರೂಪಿಸುವ ಪ್ರಕ್ರಿಯೆಯ ಭಾಗವಾಗಿ, ಅಸಮಾನತೆ ಮತ್ತು ಪಿತೃಪ್ರಭುತ್ವವನ್ನು ಭದ್ರಪಡಿಸಲು ಪ್ರಯತ್ನಿಸುತ್ತದೆ. ಈ ನಿಟ್ಟಿನಲ್ಲಿ ಸಂವಿಧಾನದ ಪೀಠಿಕೆಯಿಂದ ಸಮಾಜವಾದ ಮತ್ತು ಜಾತ್ಯತೀತತೆಯನ್ನು ಹೊರತೆಗೆದು ಇತಿಹಾಸವನ್ನು ಪುನಃ ಬರೆಯುವ ದಿಸೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಹಾಗಾಗಿ, ನಮ್ಮ ವಸಾಹತುಶಾಹಿ ವಿರೋಧಿ ಸ್ವಾತಂತ್ರ್ಯ ಸಂಗ್ರಾಮದ ಪರಂಪರೆಯನ್ನು ಅಮಾನ್ಯಗೊಳಿಸುವ ಮತ್ತು ಧೈವಪ್ರಭುತ್ವ ರಾಜ್ಯಕ್ಕೆ ದಾರಿ ಮಾಡಿಕೊಡುವ ಪ್ರಯತ್ನದಲ್ಲಿಯೇ ತನ್ನ ಕಾರ್ಯಸೂಚಿಯ ಆಧಾರದಲ್ಲಿಯೇ ತನ್ನನ್ನು ತೊಡಗಿಸಿಕೊಂಡಿದೆ. ಇದು ಭಾರತದ ಬಹುತ್ವ, ಪ್ರಜಾಪ್ರಭುತ್ವ ನೀತಿಗೆ ನೇರ ಬೆದರಿಕೆಯಾಗಿದೆ.

ಸಂವಿಧಾನವು ಎಲ್ಲರಿಗೂ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಖಚಿತಪಡಿಸಿಕೊಳ್ಳಲು ಶ್ರಮಿಸುತ್ತದೆ. ಸಮಾಜವಾದ ಮತ್ತು ಜಾತ್ಯತೀತತೆಯು ಆ ದೃಷ್ಟಿಕೋನದಲ್ಲಿ ಅನಿವಾರ್ಯ ಸ್ತಂಭಗಳಾಗಿವೆ. ಆರ್‌ಎಸ್‌ಎಸ್ ಈ ಮೌಲ್ಯಗಳ ಮೇಲೆ ದಾಳಿ ಮಾಡುವ ಮೂಲಕ, ಸಂವಿಧಾನವು ಖಾತರಿಪಡಿಸಿರುವ ಸಮಾಜವಾದಿ, ಜಾತ್ಯತೀತ, ಪ್ರಜಾಸತ್ತಾತ್ಮಕ, ಗಣತಂತ್ರ ರಾಜ್ಯವನ್ನು ಕೆಡವುದರ ತನ್ನ ಉದ್ದೇಶವನ್ನು ಮತ್ತೆ ಮತ್ತೆ ಬಹಿರಂಗಪಡಿಸುತ್ತದೆ. ಸಾಂವಿಧಾನಿಕ ತತ್ವಗಳನ್ನು ಮನುಸ್ಮೃತಿಯೊಂದಿಗೆ ಬದಲಾಯಿಸುವುದು ಮತ್ತು ಹಿಂದೂ ರಾಷ್ಟ್ರವನ್ನು ಸ್ಥಾಪಿಸುವುದು ಅದರ ಕಾರ್ಯಸೂಚಿಯಾಗಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ರೂಪಿಸಲಾದ ಮೌಲ್ಯಗಳನ್ನು ಪಾಲಿಸುವ ಎಲ್ಲರೂ–ಆರೆಸ್ಸೆಸ್ ಈ ಹೋರಾಟದ ಭಾಗವಾಗಿರಲಿಲ್ಲ ಮತ್ತು ಭಾರತದ ಯುವ ಜನರು ಬ್ರಿಟಿಷ್ ಸಾಮ್ರಾಜ್ಯ ಶಾಹಿಗಳ ವಿರುದ್ಧದ ಅಂದರೆ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮನ್ನು ತೊಡಗಿಸಿಕೊಂಡು ತಮ್ಮ ಶಕ್ತಿಯನ್ನು ವ್ಯರ್ಥಮಾಡಿಕೊಳ್ಳಬೇಡಿ ಎಂದು ಪ್ರಚೋದಿಸಿದ್ದರು, ಎಂಬುದನ್ನು ಮರೆಯಬಾರದು. ಸಂವಿಧಾನದ ರಕ್ಷಣೆಗಾಗಿ ಒಂದಾಗಬೇಕು. ಹಾಗೆಯೇ, ಭಾರತವನ್ನು ಧೈವಪ್ರಭುತ್ವ, ಬಹುಸಂಖ್ಯಾತ ಜನರ ಪ್ರಾಬಲ್ಯದ, ಹಿಂದೂ ರಾಷ್ಟ್ರವನ್ನಾಗಿ ಪರಿವರ್ತಿಸುವ ಯಾವುದೇ ಪ್ರಯತ್ನವನ್ನು ದೃಢವಾಗಿ ವಿರೋಧಿಸಬೇಕು.

ಅನು:ನಾಗರಾಜ ನಂಜಂಡಯ್ಯ

ದೇವನಹಳ್ಳಿ ರೈತರ ಹೋರಾಟದ ಹೊಸ ಘಟ್ಟ..... ಪುಟ 9 ರಿಂದ

ಎಂದು ಮುಂದುವರೆದಿದೆ. ಹೀಗಾಗಿ ಸರಕಾರ ತನ್ನ ನಿರ್ಧಾರ ಏನಿರಬಹುದು ಎಂಬ ಸಣ್ಣ ಸೂಚನೆಯನ್ನು ಕೊನೆಯ ಸಾಲುಗಳಲ್ಲಿ ಕೊಡುತ್ತಿರುವಂತೆ ಕಾಣುತ್ತಿದೆ. ಮತ್ತೆ ಒಂದು ಕೊಸರು ಮಾತಿದೆ. ಅದೇನೆಂದರೆ,

"ನಾವು ಪ್ರಜಾಪ್ರಭುತ್ವ ಮತ್ತು ಸಂವಾದದಲ್ಲಿ ನಂಬಿಕೆಯಿಟ್ಟಿರುವವರು... ನಾನೂ ರೈತ ಸಂಘದಲ್ಲಿದ್ದವನು, ನಮ್ಮ ವಿರುದ್ಧ ಪ್ರತಿಭಟಿಸಿದರೂ ಅದನ್ನು ಹತ್ತಿಕ್ಕುವ ಕೆಲಸ ನಾವು ಮಾಡಿಲ್ಲ." ಅಂದರೆ ನೀವು ಮುಂದೆಯೂ ಪ್ರತಿಭಟನೆ ಮಾಡಿಕೊಂಡಿರಬಹುದು. ಆದರೆ ನಾವು ಭೂಸ್ವಾಧೀನ ಕೈಬಿಡುವುದಿಲ್ಲ.. ಎಂದಿರಬಹುದೇ ಇದರ ಅರ್ಥ??

ಈ ಮಧ್ಯೆ, ಮಧ್ಯಮ ಮತ್ತು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲರು, "ಪ್ರಕಾಶ್ ರಾಜ್ ಅವರು ಗುಜರಾತ್‌ನಲ್ಲಿಯೂ ಹೋಗಿ ಭೂ ಸ್ವಾಧೀನದ ವಿರುದ್ಧ ಪ್ರತಿಭಟಸಲಿ" ಎಂದು ಹೇಳಿರುವುದು ವರದಿಯಾಗಿದೆ. ಇದು ಸರಕಾರದ ಅಧಿಕೃತ ಧೋರಣೆಯಾ? ರಾಜ್ಯದ ಕಾಂಗ್ರೆಸ್ ಸರಕಾರವು ಗುಜರಾತ್‌ನ ಬಿಜೆಪಿ ಸರಕಾರದ 'ನಗ್ನ ಕಾರ್ಪೋರೇಟ್ ಪರ ಭೂಸ್ವಾಧೀನ'ದ ದಾರಿಯಲ್ಲಿ ಹೊರಟಿದೆಯಾ? ಎಂಬ ಪ್ರಶ್ನೆ ಈಗ ಎದುರಾಗಿದೆ.

ರಿಯಲ್ ಎಸ್ಟೇಟ್ ಮಾಪಿಯಾಕ್ಕೆ ಮಣಿಯದಿರಿ.

ಈ ಎಲ್ಲ ಬೆಳವಣಿಗೆಗಳ ನಂತರ ಹೋರಾಟ ಸಮಿತಿಯ ಪರವಾಗಿ ಜುಲೈ 6ರಂದು ಮಾಧ್ಯಮಗಳೊಂದಿಗೆ ಮಾತನಾಡಿರುವ ಟಿ.ಯಶವಂತ್ ಅವರು, ಕಾನೂನು ತೊಡಕುಗಳನ್ನು ಪರಿಶೀಲಿಸಿ ಸಮಸ್ಯೆ ಬಗೆಹರಿಸುವುದಾಗಿ ಸರಕಾರ 10 ದಿನಗಳ ಕಾಲಾವಕಾಶವನ್ನು ಪಡೆದುಕೊಂಡಿದೆ. ಒಂದೊಮ್ಮೆ ಸರಕಾರ ಹಠಮಾರಿ ಧೋರಣೆ ಬಿಡದಿದ್ದರೆ, ಸಂಯುಕ್ತ ಹೋರಾಟ ಕರ್ನಾಟಕ ಹಾಗೂ ಎಸ್‌ಕೆಎಂಗಳ ನೇತೃತ್ವದಲ್ಲಿ ರಾಜ್ಯವ್ಯಾಪಿ, ರಾಷ್ಟ್ರವ್ಯಾಪಿ ಚಳುವಳಿ ಸ್ಫೋಟಿಸಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ. ಹಾಗೆಯೇ ರಿಯಲ್ ಎಸ್ಟೇಟ್ ಮಾಪಿಯಾಗಳ ಬೆದರಿಕೆ ಒತ್ತಡಗಳಿಗೆ ರೈತರು ಮಣಿಯಬಾರದು ಎಂದಿದ್ದಾರೆ.

ಜನಾಂದೋಲನ ಒಂದೇ..

ರಾಜ್ಯದ ಅಧಿಕೃತ ವಿರೋಧ ಪಕ್ಷ ಬಿಜೆಪಿ ತಾನು ದೇಶಾದ್ಯಂತ ರೈತದ್ರೋಹಿ ನೀತಿಗಳನ್ನು ಜಾರಿಗೆ ತರುತ್ತಿರುವಾಗ, ರೈತಚಳುವಳಿಗೆ ಬೆಂಬಲ ನೀಡುವ ನೈತಿಕತೆಯನ್ನು ಕಳೆದುಕೊಂಡಿದೆ. ಇನ್ನು ತಮ್ಮದು 'ಮಣ್ಣಿನ ಮಕ್ಕಳ ಪಕ್ಷ' ಎಂದು ಮೆರೆಯುತ್ತಾ ಬಂದಿರುವ 'ಅಪ್ಪ–ಮಕ್ಕಳ–ಮೊಮ್ಮಕ್ಕಳ ಪಕ್ಷ' ಜೆಡಿ(ಎಸ್)ನ ನಾಯಕರು ಬಲವಂತದ ಭೂಸ್ವಾಧೀನದ ವಿರುದ್ಧ ತುಟಿ ಬಿಚ್ಚಿಲ್ಲ. ಬಿಚ್ಚುವುದೂ ಇಲ್ಲ. ಆ ಪಕ್ಷ ಬಿಜೆಪಿಯ ಎಲ್ಲ ದುಷ್ಟ ನೀತಿಗಳ ಪರವಾಗಿ ಬಾಲಬಡಿಯುತ್ತಾ ನಾಶದ ಹಾದಿಯಲ್ಲಿರುವುದು ಗೋಡೆ ಬರಹದಂತೆ ಕಾಣುತ್ತಿದೆ. ಉಳಿದದ್ದು ಜನಾಂದೋಲನ ಒಂದೇ.

ಇಲ್ಲಿಯವರೆಗೆ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿದ್ದ ಚಳುವಳಿಯ ಸ್ವರೂಪ ಬದಲಾಗಿದೆ. ಅದು ಈಗ ಚನ್ನರಾಯಪಟ್ಟಣದ ಹೋಬಳಿಯ ಹಳ್ಳಿ ಹಳ್ಳಿಗಳಿಗೆ ಹರಡಿಕೊಂಡಿದೆ. ಕಾದು ನೋಡೋಣ ಜುಲೈ 15 ಹತ್ತಿರವೇ ಇದೆ.

ವರದಿ: ಆರ್. ರಾಮಕೃಷ್ಣ

ಸಂಸ್ಕೃತ ಭಾಷೆಗೆ 2532 ಕೋಟಿ– ಕನ್ನಡಕ್ಕೆ 12 ಕೋಟಿ!!

ಭಾಷಾ ನಿಧಿಯಲ್ಲಿ ಸಂಸ್ಕೃತದ ಪ್ರಾಬಲ್ಯ-ನೀತಿ ಅಸಮಾನತೆಗಳನ್ನು ಬಹಿರಂಗಪಡಿಸಿದ ಆರ್‌ಟಿಐ ದತ್ತಾಂಶ



24,821 ಜನರು ಮಾತನಾಡುವ ಸಂಸ್ಕೃತ ಭಾಷೆಯ ಪ್ರಚಾರಕ್ಕಾಗಿ 2532 ಕೋಟಿ ರೂಪಾಯಿ ವೆಚ್ಚ ಮಾಡಿರುವ ಕೇಂದ್ರ ಸರ್ಕಾರ, 4.37 ಕೋಟಿ ಜನರು ಮಾತನಾಡುವ (2011ರ ಜನಗಣತಿಯಂತೆ) ಭಾಷೆ ಕನ್ನಡಕ್ಕೆ 12 ಕೋಟಿ (ಶೇ. 0.5ಕ್ಕಿಂತ ಕಡಿಮೆ) ಮಾತ್ರ ವೆಚ್ಚ ಮಾಡಿದೆ. ಸಂಸ್ಕೃತ ಭಾಷೆಗೆ ಮಾಡಿರುವ ವೆಚ್ಚವು ಇತರ ಐದು ಶಾಸ್ತ್ರೀಯ ಭಾರತೀಯ ಭಾಷೆಗಳಾದ ತಮಿಳು, ತೆಲುಗು, ಕನ್ನಡ, ಮಲಯಾಳಂ ಮತ್ತು ಒಡಿಯಾ ಭಾಷೆಗಳಿಗೆ ಒಟ್ಟು ರೂ. 147.56 ಕೋಟಿ ವೆಚ್ಚದ 17 ಪಟ್ಟು ಹೆಚ್ಚಾಗಿದೆ ಎಂದು ಮಾಹಿತಿ ಹಕ್ಕು (ಆರ್‌ಟಿಐ) ಅರ್ಜಿಯ ಮೂಲಕ ಮತ್ತು ಸಾರ್ವಜನಿಕ ದಾಖಲೆಗಳಿಂದ ಪಡೆದ ಮಾಹಿತಿಯ ಪ್ರಕಾರ ತಿಳಿದುಬಂದಿದೆ.

ಭಾರತ ಇತಿಹಾಸದಿಂದಲೂ ತನ್ನ ಭಾಷಾ ವೈವಿಧ್ಯತೆಯನ್ನು ಹೆಮ್ಮೆಯಿಂದ ಆಚರಿಸಿಕೊಂಡು ಬಂದಿದೆ. ಪ್ರತಿಯೊಂದು ಭಾಷೆಯೂ ಇತಿಹಾಸ, ಗುರುತು ಮತ್ತು ಸಂಸ್ಕೃತಿಯನ್ನು ಹೊಂದಿವೆ. ಆದರೂ, ಸರ್ಕಾರದ ಬೆಂಬಲದ ವಿಷಯಕ್ಕೆ ಬಂದಾಗ, ಎಲ್ಲಾ ಭಾಷೆಗಳನ್ನು ಸಮಾನವಾಗಿ ಪರಿಗಣಿಸಲಾಗುವುದಿಲ್ಲ ಎಂದು ಇತ್ತೀಚಿನ ವರದಿಯೊಂದು ತೋರಿಸುತ್ತದೆ. ಹಿಂದೂಸ್ತಾನ್ ಟೈಮ್ಸ್ ಮಾಹಿತಿ ಹಕ್ಕು (ಆರ್ ಟಿಐ) ಅರ್ಜಿಯ ಮೂಲಕ ಬಹಿರಂಗಪಡಿಸಿದ ದತ್ತಾಂಶವು ಆಶ್ಚರ್ಯಕರ ಕಥೆಯನ್ನು ಹೇಳುತ್ತದೆ. 2014–15 ಮತ್ತು 2024–25ರ ನಡುವೆ ಸಂಸ್ಕೃತದ ಪ್ರಚಾರಕ್ಕಾಗಿ ಸರ್ಕಾರ 2532.59 ಕೋಟಿ ರೂಪಾಯಿ ಖರ್ಚು ಮಾಡಿದೆ. ಇದು ಇತರ ಐದು ಶಾಸ್ತ್ರೀಯ ಭಾರತೀಯ ಭಾಷೆಗಳಾದ ತಮಿಳು, ತೆಲುಗು, ಕನ್ನಡ, ಮಲಯಾಳಂ ಮತ್ತು ಒಡಿಯಾ ಗಳಿಗೆ ಖರ್ಚು ಮಾಡಿದ ಒಟ್ಟು ಹಣದ 17 ಪಟ್ಟು ಹೆಚ್ಚು. ಈ ದೊಡ್ಡ ಅಂತರವು ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಕನ್ನಡಕ್ಕೆ ನೂರು ರೂಪಾಯಿಯಲ್ಲಿ 50 ಪೈಸೆ ಮಾತ್ರ!!

ಅದೇ ಅವಧಿಯಲ್ಲಿ ಇತರ ಐದು ಶಾಸ್ತ್ರೀಯ ಭಾಷೆಗಳಾದ– ತಮಿಳು, ತೆಲುಗು, ಕನ್ನಡ, ಮಲಯಾಳಂ ಮತ್ತು ಒಡಿಯಾ – ಒಟ್ಟಾಗಿ ರೂ. 147.56 ಕೋಟಿ ಮಾತ್ರ ಪಡೆದಿವೆ. ತಮಿಳು 113.48 ಕೋಟಿ ರೂ.ಗಳನ್ನು ಪಡೆದರೆ, ತೆಲುಗು 12.65 ಕೋಟಿ ರೂ.ಗಳನ್ನು ಪಡೆದಿದೆ. ಕನ್ನಡ 12.28 ಕೋಟಿ ರೂ.ಗಳನ್ನು ಪಡೆದಿದೆ. ಮಲಯಾಳಂ 4.52 ಕೋಟಿ ಮತ್ತು ಒಡಿಯಾ 4.63 ಕೋಟಿ ರೂ.ಗಳನ್ನು ಮಾತ್ರವೇ ಪಡೆದಿವೆ. ಸಂಸ್ಕೃತಕ್ಕೆ ಪ್ರತಿ ವರ್ಷ (ಸರಾಸರಿ) ರೂ. 230.24 ಕೋಟಿ ಮತ್ತು ಇತರ ಐದು ಭಾಷೆಗಳಿಗೆ ಪ್ರತಿ ವರ್ಷ ರೂ. 13.41 ಕೋಟಿ ಖರ್ಚು ಮಾಡಲಾಗಿದೆ.

ಐದು ಶಾಸ್ತ್ರೀಯ ಭಾರತೀಯ ಭಾಷೆಗಳಲ್ಲಿ ತಮಿಳು ಅತಿ ಹೆಚ್ಚು ಅನುದಾನ ಪಡೆದಿದೆಯಾದರೂ, ಅದು ಸಂಸ್ಕೃತ ಭಾಷೆಗೆ ನೀಡಿದ ಒಟ್ಟು ನಿಧಿಯ ಶೇ. 5 ರಷ್ಟೂ ಕೂಡ ಪಡೆದಿಲ್ಲ. ಕನ್ನಡ ಮತ್ತು ತೆಲುಗು ತಲಾ ಶೇ. 0.5 ಕ್ಕಿಂತ (ನೂರು ರೂಪಾಯಿಯಲ್ಲಿ 50 ಪೈಸೆ) ಕಡಿಮೆ ಮತ್ತು ಒಡಿಯಾ ಮತ್ತು ಮಲಯಾಳಂ ತಲಾ ಶೇ. 0.2 ಕ್ಕಿಂತ ಕಡಿಮೆ ಅನುದಾನ ಪಡೆದಿದೆ.

ಈ 5 ಶಾಸ್ತ್ರೀಯ ಭಾಷೆಗಳು ಹೆಚ್ಚಿನ ಸಂಖ್ಯೆಯ ಭಾಷಿಕರನ್ನು ಹೊಂದಿವೆಯಾದರೂ ಇವುಗಳಿಗೆ ಅತಿ ಕಡಿಮೆ ವೆಚ್ಚ ಮಾಡಿರುವುದು ಆಶ್ಚರ್ಯಕರವಾಗಿದೆ. 2011 ರ ಜನಗಣತಿಯ ಪ್ರಕಾರ, ಭಾರತದ 120 ಕೋಟಿ ಜನಸಂಖ್ಯೆಯಲ್ಲಿ ತಮಿಳು, ತೆಲುಗು, ಮಲಯಾಳಂ, ಒಡಿಯಾ ಮತ್ತು ಕನ್ನಡ ಭಾಷಿಕರು ಒಟ್ಟಾಗಿ ಶೇ. 21.99 ರಷ್ಟಿದ್ದಾರೆ. ತಮಿಳು 6.90 ಕೋಟಿ (ಶೇ. 5.70), ತೆಲುಗು 8.11 ಕೋಟಿ (ಶೇ. 6.7), ಕನ್ನಡ 4.37 ಕೋಟಿ (ಶೇ. 3.61), ಮಲಯಾಳಂ 3.40 ಕೋಟಿ (ಶೇ. 2.88) ಮತ್ತು ಒಡಿಯಾ 3.75 ಕೋಟಿ (ಶೇ. 3.10) ಭಾಷಿಕರಿದ್ದಾರೆ. ಸಂಸ್ಕೃತ ಮಾತನಾಡುವವರು ಶೇ. 0.01 ಕ್ಕಿಂತ ಕಡಿಮೆ (24,821 ಜನರು– ಶೇ. 0.00185). ಆದರೂ, ಇದು ಐದು ಶಾಸ್ತ್ರೀಯ ಭಾಷಾ ಒಟ್ಟಾರೆ ನಿಧಿಯ ಶೇ. 84 ರಷ್ಟು ಹಣವನ್ನು ಪಡೆದುಕೊಂಡಿದೆ.

ಉರ್ದುವಿಗೆ 837.94 ಕೋಟಿ, ಹಿಂದಿಗೆ 426.99 ಕೋಟಿ

2014–15 ಮತ್ತು 2024–25ರ ಅವಧಿಯಲ್ಲಿ ಹಿಂದಿ, ಉರ್ದು ಮತ್ತು ಸಿಂಧಿ ಭಾಷೆಗಳಿಗೆ ಒಟ್ಟು ರೂ. 1,317.96 ಕೋಟಿ ಹಣಕಾಸು ಲಭ್ಯವಿದ್ದು, ಇದು ಸಂಸ್ಕೃತಕ್ಕೆ ಖರ್ಚು ಮಾಡಿದ ಮೊತ್ತದ ಸರಿಸುಮಾರು ಶೇ. 52.04 ರಷ್ಟಿದೆ. ಈ ಅವಧಿಯಲ್ಲಿ, ಉರ್ದು ಪ್ರತ್ಯೇಕವಾಗಿ ರೂ. 837.94 ಕೋಟಿ, ಹಿಂದಿ ರೂ. 426.99 ಕೋಟಿ ಮತ್ತು ಸಿಂಧಿ ರೂ. 53.03 ಕೋಟಿ ಪಡೆದಿದೆ. ಹಿಂದಿ ಮಾತನಾಡುವವರು (ಭಾಷೆಯನ್ನು ತಮ್ಮ ಮಾತೃಭಾಷೆ ಎಂದು ಪಟ್ಟಿ ಮಾಡಿದವರು) ಶೇ. 43.63 ಮತ್ತು ಉರ್ದು ಮಾತನಾಡುವವರು ಶೇ. 4.19 ರಷ್ಟಿದ್ದಾರೆ.

ಭಾರತದಲ್ಲಿ 9 ಶಾಸ್ತ್ರೀಯ ಭಾಷೆಗಳು ಸೇರಿದಂತೆ 22 ನಿಗದಿತ ಭಾಷೆಗಳಿವೆ. ಪಾಲಿ ಮತ್ತು ಪ್ರಾಕೃತ ಮಾತ್ರ ನಿಗದಿತ ಭಾಷೆಗಳ ಪಟ್ಟಿಯಲ್ಲಿಲ್ಲದ ಎರಡು ಶಾಸ್ತ್ರೀಯ ಭಾಷೆಗಳು. ಈಗ ಶಾಸ್ತ್ರೀಯ ಭಾಷಾ ನಿಧಿಯನ್ನು ನಿರ್ವಹಿಸುತ್ತಿರುವ ಸಂಸ್ಕೃತಿ ಸಚಿವಾಲಯವು ಅಕ್ಟೋಬರ್ 2024 ರಲ್ಲಿ ಮರಾಠಿ, ಪಾಲಿ, ಪ್ರಾಕೃತ, ಅಸ್ಸಾಮಿ ಮತ್ತು ಬಂಗಾಳಿ ಎಂಬ ಐದು ಭಾಷೆಗಳನ್ನು ಗುರುತಿಸಿದೆ. ಆದರೆ ಈ ಹೊಸದಾಗಿ ಸೇರಿಸಲಾದ ಭಾಷೆಗಳಿಗೆ ಹಣಕಾಸಿನ ನೆರವು ನೀಡುವ ಬಗ್ಗೆ ವಿವರಗಳು ಇನ್ನೂ ಲಭ್ಯವಿಲ್ಲ. ಮಾನ್ಯತೆ ವಿಸ್ತರಿಸುತ್ತಿದ್ದರೂ, ನಿಧಿಯ ನ್ಯಾಯಯುತ ವಿತರಣೆ ಇನ್ನೂ ಸಮಸ್ಯೆಯಾಗಿದೆ ಎಂದು ಇದು ತೋರಿಸುತ್ತದೆ.

ಶಿಕ್ಷಣ ಸಚಿವಾಲಯ (MoE) ಶಿಕ್ಷಣ ಮತ್ತು ಸಂಶೋಧನೆಯ ಮೂಲಕ ಎಲ್ಲಾ ಭಾರತೀಯ ಭಾಷೆಗಳನ್ನು ಉತ್ತೇಜಿಸುತ್ತದೆ ಎಂದು ಹೇಳುತ್ತದೆ. ಆದಾಗ್ಯೂ, ಈ ಡೇಟಾವು ಕೆಲವು ಭಾಷೆಗಳು ಹೆಚ್ಚಿನ ಗಮನವನ್ನು ಪಡೆಯುತ್ತವೆ ಎಂಬುದನ್ನು ಸೂಚಿಸುತ್ತದೆ. ಮಾತನಾಡುವವರ ಸಂಖ್ಯೆ ಮತ್ತು ಪ್ರಾಯೋಗಿಕ ಅಗತ್ಯಗಳ ಮೇಲೆ ಗಮನ ಹರಿಸಬೇಕು ಎಂದು ಅನೇಕ ವಿದ್ವಾಂಸರು ವಾದಿಸುತ್ತಾರೆ. ಕೇಂದ್ರ ಸರ್ಕಾರದ ಈ ತಾರತಮ್ಯದ ವಿರುದ್ಧ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಧ್ವನಿ ಎತ್ತಿದ್ದಾರೆ. ಸಂಸ್ಕೃತದಂತೆಯೇ ಗಂಭೀರತೆಯಿಂದ ತಮಿಳನ್ನು ಕೇಂದ್ರ ಸರ್ಕಾರವು ಉತ್ತೇಜಿಸಬೇಕು ಎಂದಿರುವ ಎಂ.ಕೆ. ಸ್ಟಾಲಿನ್ ಅವರು, ತಮಿಳು ಮತ್ತು ಇತರ ಭಾಷೆಗಳನ್ನು ಅಧಿಕೃತ ರೂಪಗಳಲ್ಲಿ ಸ್ಥಾಪಿಸಬೇಕು ಮತ್ತು ಶಾಲೆಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಅವುಗಳ ಬಳಕೆಯನ್ನು ಉತ್ತೇಜಿಸಬೇಕು ಎಂದಿದ್ದಾರೆ.

ನಿಧಿ ನೆರವಿನ ಅಗತ್ಯವೇಕೇ?

ಏಕೆಂದರೆ ಭಾಷೆ ಸಂವಹನದ ಬಗ್ಗೆ ಮಾತ್ರವಲ್ಲ. ಅದು ಗುರುತು, ಇತಿಹಾಸ ಮತ್ತು ಜ್ಞಾನವನ್ನು ಸಂರಕ್ಷಿಸುವ ಕುರಿತದ್ದಾಗಿದೆ. ಪ್ರತಿಯೊಂದು ಭಾಷೆಯೂ ಪ್ರಪಂಚದ ಬಗ್ಗೆ ಒಂದು ಸಮುದಾಯದ ದೃಷ್ಟಿಕೋನವನ್ನು ಪ್ರತಿನಿಧಿಸುತ್ತದೆ. ಒಂದು ಭಾಷೆಗೆ ಹಣದ ಕೊರತೆ ಅಥವಾ ಅದು ನಿರ್ಲಕ್ಷಿಸಲ್ಪಟ್ಟಾಗ, ಅದರ ಹಿಂದಿನ ಸಂಸ್ಕೃತಿ ಕಡಿಮೆ ಮೌಲ್ಯಯುತವಾಗಿದೆ ಎಂಬ ಸಂದೇಶವನ್ನು ಅದು ರವಾನಿಸುತ್ತದೆ.

ಪಠ್ಯಪುಸ್ತಕಗಳು ಮತ್ತು ಸಂಪನ್ಮೂಲಗಳ ಸಮಸ್ಯೆಯೂ ಇದೆ. ಭಾರತೀಯ ಭಾಷಾ ಪುಸ್ತಕ ಯೋಜನೆಯಡಿಯಲ್ಲಿ, ಸರ್ಕಾರವು 22 ಭಾಷೆಗಳಲ್ಲಿ ಪಠ್ಯಪುಸ್ತಕಗಳನ್ನು ತಯಾರಿಸಲು ಯೋಜಿಸಿದೆ. ಆದರೆ ಹಣಕಾಸು ನ್ಯಾಯಯುತವಾಗಿಲ್ಲದಿದ್ದರೆ ಇದು ಹೇಗೆ ಯಶಸ್ವಿಯಾಗುತ್ತದೆ? ಸಮಾನ ಹೂಡಿಕೆ ಇಲ್ಲದೆ, ಪ್ರಾದೇಶಿಕ ಭಾಷೆಗಳನ್ನು ಮಾತನಾಡುವ ವಿದ್ಯಾರ್ಥಿಗಳು ಹಿಂದುಳಿದಿರಬಹುದು.

ಭಾರತವು ಯಾವಾಗಲೂ ತನ್ನ ಹಲವು ಭಾಷೆಗಳ ಬಗ್ಗೆ ಹೆಮ್ಮೆಪಡುತ್ತದೆ. ಆದರೆ ಹೆಮ್ಮೆಪಡುವುದು ಮಾತ್ರವೇ ಸಾಕಾಗುವುದಿಲ್ಲ. ನಾವು ನಿಜವಾಗಿಯೂ ನಮ್ಮ ಭಾಷಾ ಪರಂಪರೆಯನ್ನು ರಕ್ಷಿಸಲು ಮತ್ತು ಉತ್ತೇಜಿಸಲು ಬಯಸಿದರೆ, ನಾವು ಎಲ್ಲಾ ಭಾಷೆಗಳನ್ನು ನ್ಯಾಯಯುತವಾಗಿ ಬೆಂಬಲಿಸಬೇಕು – ಭಾಷಣದಲ್ಲಿ ಮಾತ್ರವಲ್ಲ, ಬಜೆಟ್ ಹಾಳೆಗಳಲ್ಲಿಯೂ ಸಹ. ಆಗ ಮಾತ್ರ ಭಾರತದ ಬಹುಭಾಷಾ ಭೂದೃಶ್ಯವು ನಿಜವಾಗಿಯೂ ಅಭಿವೃದ್ಧಿ ಹೊಂದಲು ಸಾಧ್ಯ.

–ಸಿಚಿ

ಇದು 'ಸುಂಕ ಸಮರ'ವಲ್ಲ, ವ್ಯಾಪಾರದ..... ಪುಟ 6 ರಿಂದ

ಹೋರಾಟವನ್ನುಗಟ್ಟಿಗೊಳಿಸುತ್ತಮುನ್ನಡೆಯಬೇಕು. ಒಟ್ಟಾರೆ ವಿಶ್ವ ವಾಣಿಜ್ಯ ಸಂಸ್ಥೆ ಅನ್ನುವುದು ನಮ್ಮ ಕಣ್ಣಿಗೆ ಕಾಣುವ ಪರದೆ ಮಾತ್ರ, ಇದರ ಹಿಂದೆ ಕೆಲಸ ಮಾಡುವಂತಹದ್ದು ಸಾಮ್ರಾಜ್ಯಶಾಹಿ ಶಕ್ತಿಗಳೇ ಎಂದು ಅರ್ಥ ಮಾಡಿಕೊಳ್ಳಬೇಕು ಎಂದು ಶ್ರೀಧರ್ ವಿವರಿಸಿದರು.

ಅಖಿಲ ಭಾರತ ವಿಮಾ ನೌಕರರ ಸಂಘಟನೆಯ ಮುಖಂಡರಾದ ಕಾಂ. ಎಸ್.ಕೆ.ಗೀತಾ ಅವರು ಉಪನ್ಯಾಸವನ್ನು ಕನ್ನಡಕ್ಕೆ ಅನುವಾದ ಮಾಡಿದರು. ನಂತರ ಸಂವಾದ ಹಾಗೂ ಪ್ರಶ್ನೋತ್ತರ ನಡೆಯಿತು. ಉಪನ್ಯಾಸದ ವಿಚಾರಗಳ ಸಮಾರೋಪವಾಗಿ ಕೊನೆಯಲ್ಲಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ

ಡಾ.ಕೆ. ಪ್ರಕಾಶ್ ಅವರು ಸಂವಾದದಲ್ಲಿ ಬಂದ ಪ್ರಶ್ನೆಗೆ ಉತ್ತರಿಸಿದರು.

ಚೀನಾದ ತಂತ್ರಜ್ಞಾನ ವರ್ಗಾವಣೆ ಷರತ್ತು

ಚೀನಾ ದೇಶವು ಸಾಮ್ರಾಜ್ಯಶಾಹಿ ಅಮೇರಿಕದ ಜಾಗತಿಕ ಪ್ರಾಬಲ್ಯವನ್ನು ಎದುರಿಸಿ ಬೆಳೆದ ಬಗೆಯನ್ನು ಪ್ರಕಾಶ್ ವಿವರಿಸುತ್ತಾ, ಭಾರತದಲ್ಲಿ ಯಾವುದೇ ವಿದೇಶಿ ಕಂಪನಿಯು ಬಂಡವಾಳ ಹೂಡಿಕೆ ಮಾಡಿದಲ್ಲಿ, ಭಾರತವು ಕಾಲಾನಂತರದಲ್ಲಿಯಾದರೂ ಕಂಪನಿಯು ಆಧುನಿಕ ತಂತ್ರಜ್ಞಾನವನ್ನು ವರ್ಗಾವಣೆ ಮಾಡಬೇಕೆಂಬ ಷರತ್ತು ಹಾಕುವುದಿಲ್ಲ. ಆದರೆ ಚೀನಾ ದೇಶವು ತನ್ನಲ್ಲಿ ಬಂಡವಾಳ ಹೂಡುವ ಯಾವುದೇ ಕಂಪನಿಯು ತಂತ್ರಜ್ಞಾನವನ್ನು ವರ್ಗಾಯಿಸಬೇಕೆಂಬ ಷರತ್ತು ವಿಧಿಸುತ್ತದೆ. ಇಂತಹ ಜನಪರ ಧೋರಣೆಯಿಂದ ಚೀನಾವು ಇಂದು ಅಗಾಧ ಪ್ರಗತಿಯನ್ನು ಸಾಧಿಸಿದೆ. ಅಮೇರಿಕವು ಚೀನಾದ ವಸ್ತುಗಳ ರಫ್ತಿನ ಮೇಲೆ ನಿಷೇಧ ಹೇರಿದರೂ, ಅದನ್ನು ಸಮರ್ಥವಾಗಿ ಎದುರಿಸುತ್ತಿದೆ. ಯಾಕೆಂದರೆ ಚೀನಾ ಇಂದು ಅಮೇರಿಕದ ಹೊರತಾಗಿಯೂ ಜಾಗತಿಕವಾಗಿ ಮಾರುಕಟ್ಟೆಯನ್ನು ಕಂಡುಕೊಂಡಿದೆ ಎಂದರು.

ವರದಿ:ಅರ್ಪಿತಾ

ಸುಪ್ರೀಂ ಕೋರ್ಟಿನ ಸಿಬ್ಬಂದಿ ನೇಮಕಾತಿಯಲಿ ಒಬಿಸಿ ಮೀಸಲಾತಿಯ ಮಹತ್ವದ ನಡೆ

ಸುಪ್ರೀಂ ಕೋರ್ಟ್ ತನ್ನ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆಯಲ್ಲಿ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಮೀಸಲಾತಿಯನ್ನು ಆರಂಭಿಸಲು ನಿರ್ಧರಿಸಿದೆ ಎಂದು ವರದಿಯಾಗಿದೆ. ಇದನ್ನು ಸಿಪಿಐ(ಎಂ) ಸ್ವಾಗತಿಸಿದೆ. ನ್ಯಾಯಾಲಯವು ಮೀಸಲಾತಿಯನ್ನು ಅಂಗವಿಕಲತೆ ಇರುವ ವ್ಯಕ್ತಿಗಳು, ಮಾಜಿ ಸೈನಿಕರು ಮತ್ತು ಸ್ವಾತಂತ್ರ್ಯ ಹೋರಾಟಗಾರರ ಅವಲಂಬಿತರಿಗೂ ವಿಸ್ತರಿಸಿದೆ.

ಸುಪ್ರೀಂ ಕೋರ್ಟ್‌ನ ನ್ಯಾಯಾಂಗೇತರ ಸಿಬ್ಬಂದಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನೇಮಕಾತಿಗಾಗಿ ರೋಸ್ಟರ್ ವ್ಯವಸ್ಥೆಯನ್ನು ಜಾರಿಗೆ ತರುವ ಒಂದು ಮಹತ್ವದ ನಡೆಯನ್ನು ಮುಖ್ಯ ನ್ಯಾಯಾಧೀಶರು ಪ್ರಾರಂಭಿಸಿದ್ದಾರೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ನ್ಯಾಯಾಲಯದ ನ್ಯಾಯಾಂಗೇತರ ಸಿಬ್ಬಂದಿಯ ನೇಮಕಾತಿಯಲ್ಲಿ ದೀರ್ಘಕಾಲದಿಂದ ನಿರೀಕ್ಷಿಸುತ್ತಿದ್ದ ಮತ್ತು ಮಹತ್ವಪೂರ್ಣ ಸುಧಾರಣೆಗೆ ಅನುಕೂಲವಾಗುವಂತೆ ಈ ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡಲು ಗೌರವಾನ್ವಿತ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ತೆಗೆದುಕೊಂಡ ಉಪಕ್ರಮವನ್ನು ಪಕ್ಷವು ಶ್ಲಾಘಿಸುವುದಾಗಿ ಹೇಳಿದೆ.

ಈ ನಿರ್ಧಾರವು ಇದುವರೆಗೆ ದೃಢೀಕರಣ ಕ್ರಮದ ವ್ಯಾಪ್ತಿಯಿಂದ ಹೊರಗಿರುವ ವಲಯಗಳಿಗೆ ಮೀಸಲಾತಿಯನ್ನು ವಿಸ್ತರಿಸಬೇಕು ಎಂಬ ಸಾಮಾಜಿಕ ನ್ಯಾಯ ಚಳವಳಿಯ ದೀರ್ಘಕಾಲದ ಬೇಡಿಕೆಯ ಭಾಗಶಃ ಈಡೇರಿಕೆಯತ್ತ ಒಂದು ಸ್ವಾಗತಾರ್ಹ ಹೆಜ್ಜೆಯಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಇಎಲ್‌ಐ-ಸಾರ್ವಜನಿಕ ನಿಧಿಯಿಂದ ಉದ್ಯಮಿಗಳಿಗೆ ಸಬ್ಸಿಡಿ ಒದಗಿಸುವ ಮತ್ತೊಂದು ವಂಚಕ ಯೋಜನೆ

ಮೋಸದ ಯೋಜನೆಗಳು ಮತ್ತು ವಂಚಕ ನೀತಿಗಳನ್ನು ತಿರಸ್ಕರಿಸಿ- ಸಿಐಟಿಯು

ಜುಲೈ 1ರಂದು ಕೇಂದ್ರ ಮಂತ್ರಿ ಮಂಡಲ 99,446 ಕೋಟಿ ರೂ.ಗಳನ್ನು 'ಇಎಲ್‌ಐ', ಅಂದರೆ ಉದ್ಯೋಗಕ್ಕೆ ತಳುಕು ಹಾಕಿದ ಪ್ರೋತ್ಸಾಹನೆ ಎಂದು ಹೆಸರಿಸಿದ ಯೋಜನೆಗೆ ಮಂಜೂರು ಮಾಡಿದೆ ಎಂದು ವರದಿಯಾಗಿದೆ. ಇದು ಉದ್ದಿಮೆ ಮಾಲೀಕರಿಗೆ ಸಾರ್ವಜನಿಕ ನಿಧಿಯನ್ನು ವರ್ಗಾಯಿಸುವ ಮೋದಿ ನೇತೃತ್ವದ ಸರ್ಕಾರದ ಮತ್ತೊಂದು ವಂಚಕ ಯೋಜನೆ ಎಂದು ಸಿಐಟಿಯು ಟೀಕಿಸಿದೆ.

ಇದು ಈ ಮೊದಲು ಉದ್ಯೋಗ ಸೃಷ್ಟಿಸುವ ಹೆಸರಿನಲ್ಲಿ ಕೇಂದ್ರ ಸರ್ಕಾರವು ಜಾರಿಗೆ ತಂದ ರೂ. 1.97 ಲಕ್ಷ ಕೋಟಿ ಪಿಎಲ್‌ಐ, ಅಂದರೆ ಉತ್ಪಾದನೆಗೆ ತಳುಕು ಹಾಕಿದ ಪ್ರೋತ್ಸಾಹಕ ಯೋಜನೆ ಮತ್ತು ರೂ. 76,000 ಕೋಟಿಗಳ ಕೇಪೆಕ್ಸ್, ಅಂದರೆ ಬಂಡವಾಳ ವೆಚ್ಚ ಪ್ರೋತ್ಸಾಹಕ ಯೋಜನೆಯ ಸಾಲಿಗೆ ಸೇರಿರುವ ಯೋಜನೆ.

ಇಎಲ್‌ಐ ಯೋಜನೆಯನ್ನು 2020 ರಲ್ಲಿ ಉತ್ಪಾದನಾ ವಲಯದ 14 ಉದ್ದಿಮೆಗಳಿಗೆ ಪ್ರಾರಂಭಿಸಲಾಯಿತು ಮತ್ತು ನಂತರ 60 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಲಾಗುವುದು ಮತ್ತು ದೇಶದ ಜಿಡಿಪಿಯಲ್ಲಿ ಉತ್ಪಾದನಾ ವಲಯದ ಪಾಲನ್ನು ಶೇ. 15.4ರಿಂದ ಶೇ. 25ಕ್ಕೆ ಹೆಚ್ಚಿಸಲಾಗುವುದು ಎಂಬ ದಾವೆಯೊಂದಿಗೆ ಒಟ್ಟು 17 ಕೈಗಾರಿಕೆಗಳಿಗೆ ವಿಸ್ತರಿಸಲಾಯಿತು. ಆದರೆ ಸೃಷ್ಟಿಯಾದ ಉದ್ಯೋಗಗಳ ಸಂಖ್ಯೆ 7 ಲಕ್ಷವನ್ನು ಸಹ ದಾಟಿಲ್ಲ. 2025ರಲ್ಲಿ ಜಿಡಿಪಿಯಲ್ಲಿ ಉತ್ಪಾದನಾ ವಲಯದ ಕೊಡುಗೆಯ ಪ್ರಮಾಣ ಏರುವ ಬದಲು ಶೇ. 14.2ಕ್ಕೆ ಇಳಿದಿದೆ. ಇದಲ್ಲದೆ, ಯೋಜನೆಯ ಕುರಿತು ಸಂಸತ್ತಿಗೆ ಸರ್ಕಾರ ನೀಡಿದ ಉತ್ತರದ ಪ್ರಕಾರವೇ, ಈ ಯೋಜನೆಯ ಹೆಸರಲ್ಲಿ ಮೋದಿ ಸರಕಾರ ರೂ. 1.97 ಲಕ್ಷ ಕೋಟಿಗಳನ್ನು ವೆಚ್ಚ ಮಾಡಿದ್ದರೂ, ಈ ಯೋಜನೆಯ ಪ್ರಯೋಜನ ಪಡೆದ ಉದ್ಯಮಿಗಳು ಮಾಡಿರುವ ಹೆಚ್ಚುವರಿ ಹೂಡಿಕೆ ರೂ. 1.76 ಲಕ್ಷ ಕೋಟಿಗಳಷ್ಟು ಮಾತ್ರ!

ಅದೇ ರೀತಿ, ಕೆಪೆಕ್ಸ್ ಪ್ರೋತ್ಸಾಹಕದ ಅಡಿಯಲ್ಲಿ ಗುಜರಾತ್‌ನ ಸಾನಂದ್ ಎಂಬಲ್ಲಿ ಪ್ರತಿಯೊಂದು ಉದ್ಯೋಗ ಸೃಷ್ಟಿಗೆ ಸುಮಾರು ರೂ. 3.25 ಕೋಟಿಯಂತೆ ಸಬ್ಸಿಡಿಯನ್ನು ಅಮೆರಿಕನ್ ಮೈಕ್ರಾನ್, ಟಾಟಾ ಸಮೂಹ, ಮುರ್ಗೆಪ್ಪ ಸಮೂಹ ಮತ್ತು ಜಪಾನೀ ಹಾಗೂ ಮತ್ತು ತೈವಾನೀ ಕಂಪನಿಗಳಿಗೆ ಸೆಮಿಕಂಡಕ್ಟರ್ ಸ್ಥಾವರಗಳನ್ನು ಸ್ಥಾಪಿಸಲು ಸರಕಾರ ಒದಗಿಸಿದೆ.

ಈ ಪ್ರೋತ್ಸಾಹಕ ಯೋಜನೆಗಳು ಸಾಮಾನ್ಯ ಜನರ ಮೇಲೆ ವಿಧಿಸುತ್ತಿರುವ ಜಿಎಸ್‌ಟಿ ಹೆಸರಲ್ಲಿ ಸಂಗ್ರಹಿಸಲಾದ ಸಾರ್ವಜನಿಕ ನಿಧಿಯನ್ನು ದೇಶೀ ಮತ್ತು ವಿದೇಶಿ ಕಾರ್ಪೊರೇಟ್‌ಗಳ ಹೂಡಿಕೆ ವೆಚ್ಚ, ಉತ್ಪಾದನಾ ವೆಚ್ಚಗಳಿಗೆ ಸಬ್ಸಿಡಿ ಒದಗಿಸುವ ಯೋಜನೆಗಳಾಗಿ ಮಾರ್ಪಟ್ಟಿವೆ ಎಂದು ಸಿಐಟಿಯು ಹೇಳಿದೆ. ಈಗ ಉದ್ಯೋಗ ಸೃಷ್ಟಿಸುವ ಹೆಸರಿನಲ್ಲಿ ಅಂಗೀಕರಿಸಲ್ಪಟ್ಟ ಇತ್ತೀಚಿನ ಇಎಲ್‌ಐ ಯೋಜನೆಯು, ಸಾರ್ವಜನಿಕ ನಿಧಿಯಿಂದ ಶ್ರಮ ವೆಚ್ಚ ಮತ್ತು ಭವಿಷ್ಯ ನಿಧಿ ಮತ್ತು ಇತರೆ ಕಾಯ್ದೆಯಡಿ ಮಾಲೀಕರ ಶಾಸನಬದ್ಧ ಹೊಣೆಗಾರಿಕೆಗಳನ್ನು ನಿಭಾಯಿಸಲು ಸಬ್ಸಿಡಿಗಳನ್ನು ಒದಗಿಸುತ್ತದೆ. ಗ್ರಾಮೀಣ ಬಡವರಿಗೆ ಉದ್ಯೋಗ ಕಲ್ಪಿಸಲೆಂದು ತಂದಿರುವ ಮನರೇಗ ಮತ್ತು ಇತರ ಯೋಜನೆಗಳಿಗೆ ಬಜೆಟ್ ಹಂಚಿಕೆಯನ್ನು ವರ್ಷದಿಂದ ವರ್ಷಕ್ಕೆ ತೀವ್ರವಾಗಿ ಕಡಿತಗೊಳಿಸಲಾಗುತ್ತಿದ್ದರೂ, ಉದ್ದಿಮೆಗಳ ಮಾಲೀಕರಿಗೆ ಧಾರಾಳವಾಗಿ ಇಂತಹ ಕೋಟ್ಯಂತರ ರೂಪಾಯಿಗಳ ಸಬ್ಸಿಡಿಗಳನ್ನು ಒದಗಿಸಲಾಗುತ್ತಿದೆ ಎಂದು ಸಿಐಟಿಯು ಖೇದ ವ್ಯಕ್ತಪಡಿಸಿದೆ.

ಕೇಂದ್ರ ಸಚಿವ ಸಂಪುಟವು ಮಂಜೂರು ಮಾಡಿರುವ 99,446 ಕೋಟಿ ರೂ. 2024-25ರ ಕೇಂದ್ರ ಬಜೆಟ್‌ನಲ್ಲಿ ಘೋಷಿಸಲಾದ ರೂ. 2 ಲಕ್ಷ ಕೋಟಿ ಇಎಲ್‌ಐ ಯೋಜನೆಯ ಭಾಗವಾಗಿದೆ. ಶ್ರಮ ವೆಚ್ಚಗಳು ಮತ್ತು ಭವಿಷ್ಯನಿಧಿ ಮುಂತಾದ ಮಾಲೀಕರ ಬಾಧ್ಯತೆಗಳನ್ನು ಪೂರೈಸಲು ನೀಡುವ ಈ ಸಬ್ಸಿಡಿ ಸೃಷ್ಟಿಸುವ ಉದ್ಯೋಗಗಳು ಶಿಥಿಲ ಮತ್ತು ಅನಿಶ್ಚಿತ ಸ್ವರೂಪದವುಗಳು. ಇದನ್ನು ಆಗಲೇ ಕಾರ್ಮಿಕ ಸಂಘಗಳ ಜಂಟಿ ವೇದಿಕೆ ವಿರೋಧಿಸಿತ್ತು. ಆ ವೇಳೆಗೆ ಈ ಹಿಂದಿನ ಪಿಎಲ್‌ಐ ಮತ್ತು ಕೆಪೆಕ್ಸ್ ಪ್ರೋತ್ಸಾಹಕಗಳಿಂದ ಸೃಷ್ಟಿಯಾದ ಉದ್ಯೋಗಗಳು ಮತ್ತು ಈಡೇರಿದ ಗುರಿಗಳ ವಿವರಗಳನ್ನು ದೇಶದ ಮುಂದಿಡಿ ಎಂದು ಕೇಂದ್ರೀಯ ಕಾರ್ಮಿಕ ಸಂಘಗಳು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವರಿಗೆ ಪತ್ರ ಬರೆದಿದ್ದವು. ಆದರೆ ಆ ಬಗ್ಗೆ ಸುಮ್ಮನಿರುವುದೇ ವಾಸಿ ಎಂದು ಬಗೆದಂತಿರುವ ಮೋದಿ ನೇತೃತ್ವದ ಸರ್ಕಾರ ಈಗ ಉದ್ಯೋಗ ಸೃಷ್ಟಿಸುವ ಹೆಸರಿನಲ್ಲಿ ಈ ಯೋಜನೆಯನ್ನು ಮಂಜೂರು ಮಾಡಿದೆ.

ಅದ್ದರಿಂದ ಇದು ಕೂಡ ಸಾರ್ವಜನಿಕ ಹಣವನ್ನು ಉದ್ಯಮಿಗಳ ವರ್ಗಕ್ಕೆ ಮತ್ತು ಆಳುವವರ ಬಂಟರಿಗೆ ವರ್ಗಾಯಿಸುವ ಮತ್ತೊಂದು ಮೋಸದ ಮಾರ್ಗದ ಎಂಬುದು ಸ್ಪಷ್ಟ ಎಂದು ಸಿಐಟಿಯು ತೀವ್ರವಾಗಿ ಟೀಕಿಸಿದೆ.

ಇಂತಹ ಮೋಸದ ಯೋಜನೆಗಳನ್ನು ತಿರಸ್ಕರಿಸಲು ಮತ್ತು ಇಂತಹ ವಂಚಕ ನೀತಿಗಳ ವಿರುದ್ಧ ಹಾಗೂ ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸಲು ಆಗ್ರಹಿಸಿರುವ ಕೇಂದ್ರ ಕಾರ್ಮಿಕ ಸಂಘಗಳ ಜಂಟಿ ವೇದಿಕೆಯ 2025ರ ಜುಲೈ 9ರ ಸಾರ್ವತ್ರಿಕ ಮುಷ್ಕರ ಕರೆಯನ್ನು ಯಶಸ್ವಿಗೊಳಿಸಬೇಕು ಎಂದು ಸಿಐಟಿಯು ಸಮಸ್ತ ದುಡಿಯುವ ಜನತೆಗೆ ಕರೆ ನೀಡಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತೀ ರಾಜ್ಯ ಸ್ಥಾಯೀ ಸಮಿತಿಯ ಸಭೆಗೆ ಆಳುವ ಬಣದ ಸದಸ್ಯರಿಂದ ಅಡ್ಡಿ

ಜುಲೈ 1ರಂದು, ಭೂಸ್ವಾಧೀನ, ಮರುವಸತಿ ಮತ್ತು ಮರು ವ್ಯವಸ್ಥೆಯಲ್ಲಿ ನ್ಯಾಯಯುತ ಪರಿಹಾರದ ಹಕ್ಕು ಮತ್ತು ಪಾರದರ್ಶಕತೆ ಕಾಯ್ದೆ, 2013ರ ಜಾರಿ ಮತ್ತು ಅದು ಎಷ್ಟು ಪರಿಣಾಮಕಾರಿಯಾಗಿದೆ ಎಂದು ಪರಾಮರ್ಶೆ ನಡೆಸಲು, ಸಂಸತ್ತಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತೀರಾಜ್ ಸ್ಥಾಯೀ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಇದನ್ನು ಬಲವಂತದಿಂದ ನಿಲ್ಲಿಸಲಾಯಿತು ಮತ್ತು ನಂತರ ರದ್ದು ಮಾಡಲಾಯಿತು. ಇದು ಸಂಸದೀಯ ಮೇಲುಸ್ತುವಾರಿ ಮತ್ತು ಪ್ರಜಾಸತ್ತಾತ್ಮಕ ಸಮಾಲೋಚನೆಯ ಭಾವವನ್ನು ಬುಡಮೇಲು ಮಾಡುವ ಘಟನೆ ಎಂದು ಸಿಪಿಐ(ಎಂ) ಲೋಕಸಭಾ ಸದಸ್ಯ ಕೆ.ರಾಧಾಕೃಷ್ಣನ್ ಹೇಳಿಕೆಯೊಂದರಲ್ಲಿ ಖಂಡಿಸಿದ್ದಾರೆ.

ಈ ಸಭೆಯ ಆರಂಭದಲ್ಲಿ 17 ಸಂಸತ್ ಸದಸ್ಯರು ಭಾಗವಹಿಸಿದ್ದರು. ಅಲ್ಲದೆ ಸಾಮಾಜಿಕ ಸೇವಾ ರಂಗದಲ್ಲಿ ಕೆಲಸ ಮಾಡಿರುವ ಮೇಧಾ ಪಾಟ್ಕರ್ ಮತ್ತು ಚಿತ್ರನಟ ಪ್ರಕಾಶ್ ರಾಜ್‌ರಂತಹ ಪ್ರತಿಷ್ಠಿತ ವ್ಯಕ್ತಿಗಳನ್ನು, ಸರಕಾರೇತರ ಸಂಸ್ಥೆಗಳ ಪ್ರತಿನಿಧಿಗಳನ್ನು ಅವರ ಅಭಿಪ್ರಾಯಗಳನ್ನು ಕೇಳಲು ಆಹ್ವಾನಿಸಲಾಗಿತ್ತು. ಸಭೆ ಔಪಚಾರಿಕವಾಗಿ ಆರಂಭವಾಗುವ ಮೊದಲು ಎನ್‌ಡಿಎ ಬಣದ ಸದಸ್ಯರು ಆಹ್ವಾನಿತ ಸದಸ್ಯರ ಹಾಜರಾತಿಯನ್ನು ವಿರೋಧಿಸಿದರು. ಅವರ ಆತಂಕಗಳನ್ನು ಗಮನಕ್ಕೆ ತಗೊಳ್ಳಲಾಗುವುದು ಎಂದು ಸ್ಥಾಯೀ ಸಮಿತಿಯ ಅಧ್ಯಕ್ಷರು ಹೇಳಿದರೂ, ಆಹ್ವಾನಿತ ಪ್ರತಿನಿಧಿಗಳು ಪ್ರವೇಶಿಸುತ್ತಿದ್ದಂತೆಯೇ 5 ಮಂದಿ ಎನ್‌ಡಿಎ ಸದಸ್ಯರು ಸಭೆಯಿಂದ ಹೊರ ನಡೆದರು.

ಆದರೂ, ಉಳಿದ ಸದಸ್ಯರು ಚರ್ಚೆಯನ್ನು ಮುಂದುವರೆಸಿದರು. ಸ್ವಲ್ಪವೇ ಸಮಯದ ನಂತರ ಲೋಕಸಭಾಧ್ಯಕ್ಷರ ಕಚೇರಿಯಿಂದ, ಕೋರಂ ಕೊರತೆ ಇರುವುದರಿಂದಾಗಿ ಸಭೆಯನ್ನು ಮುಂದುವರೆಸಬಾರದು, ಅದನ್ನು ರದ್ದು ಮಾಡಲಾಗಿದೆ ಎಂಬ ಅಧಿಕೃತ ಪತ್ರ ಬಂತು. ಆದ್ದರಿಂದ ಸಭೆಯನ್ನು ಕೊನೆಗೊಳಿಸಬೇಕಾಗಿ ಬಂತು.

ನಂತರ ಆಹ್ವಾನಿತ ಪ್ರತಿನಿಧಿಗಳು ಸ್ಥಾಯೀ ಸಮಿತಿಯ ಅಧ್ಯಕ್ಷರ ಕೊಠಡಿಯಲ್ಲಿ ಸೇರಿ ಈ ಕಾಯ್ದೆಯ ಜಾರಿಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು, ಆತಂಕಗಳನ್ನು ವ್ಯಕ್ತಪಡಿಸಿದರು.

ಈ ಘಟನೆ ಒಂದು ಗಂಭೀರ ಪ್ರಶ್ನೆಯನ್ನು ಎತ್ತಿದೆ, ಇದನ್ನು ಪರೀಕ್ಷಿಸಬೇಕಾಗಿದೆ ಎಂದು ಸಿಪಿಐ(ಎಂ) ಸಂಸದ್ ಸದಸ್ಯ ರಾಧಾಕೃಷ್ಣನ್ ಹೇಳಿದ್ದಾರೆ. ಒಂದು ಸ್ಥಾಯೀ ಸಮಿತಿಯ ಸಭೆಯನ್ನು, ಅದರಲ್ಲೂ ಆಹ್ವಾನಿತ ತಜ್ಞರು ಮತ್ತು ಕಾಳಜಿಯಿರುವ ನಾಗರಿಕರ ಸಮ್ಮುಖದಲ್ಲಿ ರಾಜಕೀಯ ವಾಕೌಟ್‌ನಿಂದಾಗಿ ರದ್ದು ಮಾಡಿರುವುದು ಭಾರತದ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಇದೇ ಮೊದಲು ಎನ್ನುವ ಅವರು, ಇಂತಹ ಉದಾಹರಣೆ ಸಂಸದೀಯ ಮೇಲುಸ್ತುವಾರಿ ಮತ್ತು ಪ್ರಜಾಸತ್ತಾತ್ಮಕ ಸಮಾಲೋಚನೆಯ ಭಾವನೆಗೆ ಕುಂದು ತಂದಿದೆ ಎಂದು ಹೇಳಿದ್ದಾರೆ.

ಕಾರ್ಖಾನೆ ಕಾಯ್ದೆ ತಿದ್ದುಪಡಿ ಮಾಡುವ ಗುಜರಾತ್ ಸುಗ್ರೀವಾಜ್ಞೆ

-ಬಿಜೆಪಿ ಸರ್ವಾಧಿಕಾರಶಾಹಿಯ ಮತ್ತೊಂದು ಉದಾಹರಣೆ

1948 ರ ಕಾರ್ಖಾನೆ ಕಾಯ್ದೆಯ ಕೆಲವು ಪ್ರಮುಖ ನಿಬಂಧನೆಗಳಿಗೆ ಗುಜರಾತ್ ಸರ್ಕಾರ ಮಾಡಿದ ತಿದ್ದುಪಡಿಗಳನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ.

ಗುಜರಾತಿನ ಬಿಜೆಪಿ ಸರ್ಕಾರ ಸುಗ್ರೀವಾಜ್ಞೆಯ ಮಾರ್ಗವನ್ನು ಆಶ್ರಯಿಸಿ ಜುಲೈ 1 ರಂದು ಕಾರ್ಖಾನೆಗಳ (ಗುಜರಾತ್ ತಿದ್ದುಪಡಿ) ಸುಗ್ರೀವಾಜ್ಞೆ, 2025ನ್ನು ಪ್ರಕಟಿಸಿದೆ. ಈ ತಿದ್ದುಪಡಿಯ ಮೂಲಕ ಕಾರ್ಖಾನೆ ಕಾರ್ಮಿಕರ ಕೆಲಸದ ದಿನವನ್ನು ಈಗಿರುವ 9ರಿಂದ 12 ಗಂಟೆಗಳಿಗೆ ಹೆಚ್ಚಿಸಲಾಗುತ್ತಿದೆ. ಅಲ್ಲದೆ ಇದು ರಾತ್ರಿ ಪಾಳಿಯಲ್ಲಿ ಮಹಿಳಾ ಕಾರ್ಮಿಕರನ್ನು ನಿಯೋಜಿಸುವುದಕ್ಕೆ ಕೂಡ ಸುರಕ್ಷತೆ ಮತ್ತು ಭದ್ರತೆ ಸೇರಿದಂತೆ ಅವರ ಆತಂಕಗಳಿಗೆ ಸಾಕಷ್ಟು ನಿಬಂಧನೆಗಳನ್ನು ಮಾಡದೆಯೇ ಅನುಕೂಲ ಕಲ್ಪಿಸುತ್ತದೆ.

ಹತ್ತು ಕೇಂದ್ರ ಕಾರ್ಮಿಕ ಸಂಘಗಳು ಕರೆ ನೀಡಿದ ಸಾರ್ವತ್ರಿಕ ಮುಷ್ಕರದ ಮುನ್ನಾದಿನದಂದು ಈ ಸುಗ್ರೀವಾಜ್ಞೆಯನ್ನು ಜಾರಿಗೊಳಿಸಿರುವುದು ಕಾರ್ಮಿಕ ವರ್ಗ ಮತ್ತು ಅವರ ಹಕ್ಕೊತ್ತಾಯಗಳ ಬಗ್ಗೆ ಬಿಜೆಪಿಯ ತಿರಸ್ಕಾರವನ್ನು ಬಿಂಬಿಸುತ್ತದೆ ಎಂದಿರುವ ಸಿಪಿಐ(ಎಂ) ಇದು ಅದರ ಸರ್ವಾಧಿಕಾರಶಾಹಿಯ ಮತ್ತೊಂದು ಉದಾಹರಣೆಯಾಗಿದೆ ಎಂದು ಹೇಳಿದೆ.

ಬಿಜೆಪಿ ಸರ್ಕಾರ 'ಸುಗಮ ವ್ಯಾಪಾರ'ದ ಹೆಸರಿನಲ್ಲಿಗುಜರಾತಿನಕಾರ್ಮಿಕರಿಗೆನೀಡಲಾಗಿರುವ ಕೆಲವು ಸಂರಕ್ಷಣೆಗಳನ್ನು ತೆಗೆದುಹಾಕುವಲ್ಲಿ ಮಾತ್ರವಲ್ಲದೆ, ಕಾರ್ಮಿಕರಿಗೆ ಸದ್ಯ ಇರುವ ಸುರಕ್ಷತಾ ಕ್ರಮಗಳನ್ನು ಸಹ ಜಾರಿಗೊಳಿಸುವಲ್ಲಿ ವಿಫಲವಾಗಿದೆ ಎಂಬ ಕುಖ್ಯಾತಿಯನ್ನು ಹೊಂದಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಜುಲೈ 9ರ ಸಾರ್ವತ್ರಿಕ ಮುಷ್ಕರಕ್ಕೆ ಸಿಪಿಐ(ಎಂ)ನ ಬೆಂಬಲವನ್ನು ಪುನರುಚ್ಚರಿಸಿದೆ ಮತ್ತು ತಕ್ಷಣವೇ ಸುಗ್ರೀವಾಜ್ಞೆಯನ್ನು ಹಿಂಪಡೆಯುವಂತೆ ಗುಜರಾತ್ ಸರ್ಕಾರವನ್ನು ಒತ್ತಾಯಿಸಿದೆ. ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸುವ ಮೂಲಕ ಸರ್ಕಾರಕ್ಕೆ ಸೂಕ್ತ ಉತ್ತರವನ್ನು ನೀಡುವಂತೆ ಗುಜರಾತ್ ಸೇರಿದಂತೆ ದೇಶದ ಕಾರ್ಮಿಕರಿಗೆ ಅದು ಕರೆ ನೀಡಿದೆ.

ಇಸ್ರೇಲ್ ವಿರುದ್ಧ ಡಿಜಿಟಲ್ ಪ್ರತಿಭಟನೆ – 'ಗಾಝಾಕ್ಕಾಗಿ ಮೌನ'

ಒಂದು ಸೌಹಾರ್ದದ ಸಂಕೇತವಾಗಿ, ಪ್ರತಿದಿನ ಅರ್ಧ ಗಂಟೆ – ಸ್ಥಳೀಯ ಸಮಯ 21:00 ರಿಂದ 21:30 ರವರೆಗೆ – ತಮ್ಮ ಮೊಬೈಲ್ ಫೋನ್‌ಗಳನ್ನು ಆಫ್ ಮಾಡಬೇಕು ಎಂದು ಆಗ್ರಹಿಸುವ 'ಸೈಲೆನ್ಸ್ ಫಾರ್ ಗಾಝಾ' (ಗಾಝಾಕ್ಕಾಗಿ ಮೌನ) ಎಂಬ ಜಾಗತಿಕ ಕರೆಯನ್ನು ನಮ್ಮ ಪಕ್ಷ ಅನುಮೋದಿಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.


ಇತ್ತೀಚೆಗೆ ಬಿಡುಗಡೆಯಾದ ವಿಶ್ವಸಂಸ್ಥೆಯ ವರದಿ, 'ಆಕ್ರಮಣದ ಆರ್ಥಿಕತೆಯಿಂದ ನರಮೇಧದ ಆರ್ಥಿಕತೆಗೆ'(ಫ್ರಮ್ ಎಕಾನಮಿ ಆಫ್ ಆಕ್ಯುಪೇಶನ್ ಟು ಎಕಾನಮಿ ಆಫ್ ಜೆನೊಸೈಡ್), ಗಾಜಾದ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ವಿವಿಧ ಬಹುರಾಷ್ಟ್ರೀಯ ಕಾರ್ಪೊರೇಟ್‌ಗಳು ಹೇಗೆ ಶಾಮೀಲಾಇವೆ ಎಂಬುದನ್ನು ವಿವರಿಸುತ್ತದೆ. ಈ ಕಾರ್ಪೊರೇಟ್‌ಗಳ ದುಷ್ಟ ಪಾತ್ರವನ್ನು ಬಯಲಿಗೆಳೆಯಬೇಕು ಮತ್ತು ಅವುಗಳನ್ನು ಜನರಿಗೆ ಜವಾಬುದಾರರನ್ನಾಗಿ ಮಾಡಬೇಕು.

ಈ ಕಾರ್ಪೊರೇಟ್‌ಗಳು ನರಮೇಧಕ್ಕೆ ಅನುಕೂಲ ಮಾಡಿಕೊಡುವಾಗ, ನಮ್ಮ ಡಿಜಿಟಲ್ ಹೆಜ್ಜೆಗುರುತುಗಳಿಂದ ಪೋಷಣೆಯನ್ನು ಪಡೆಯುತ್ತವೆ. ಆದ್ದರಿಂದ ಪ್ರತಿದಿನ ನಿಗದಿತ ಸಮಯದಲ್ಲಿ ಅರ್ಧ ಗಂಟೆ ನಮ್ಮ ಮೊಬೈಲ್ ಫೋನ್‌ಗಳನ್ನು ಆಫ್ ಮಾಡುವುದು ಡಿಜಿಟಲ್ ಅಡ್ಡಿ ಒಡ್ಡುವ ಒಂದು ಸಣ್ಣದಾದರೂ ಶಕ್ತಿಯುತವಾದ ಕ್ರಿಯೆಯಾಗುತ್ತದೆ, ಇಸ್ರೇಲ್‌ನ ನರಮೇಧ ಮತ್ತು ಜನಾಂಗಭೇದ ನೀತಿಗೆ ಹಣಕಾಸು ಒದಗಿಸುವ ನಿಗಾವಣೆ ಬಂಡವಾಳಶಾಹಿಯ ವಿರುದ್ಧದ ಒಂದು ಪ್ರಹಾರವಾಗುತ್ತದೆ.

ದೇಶಾದ್ಯಂತ ಜನರು, 'ನಿಮ್ಮ ಮೊಬೈಲ್ ಫೋನ್‌ಗಳನ್ನು ಆಫ್ ಮಾಡಿ ಮತ್ತು ಪ್ರತಿಭಟನಾ ಅವಧಿಯಲ್ಲಿ ಯಾವುದೇ ಸಾಮಾಜಿಕ ಮಾಧ್ಯಮ ವೇದಿಕೆಯಲ್ಲಿ ಪೋಸ್ಟ್ ಮಾಡುವುದು, ಇಷ್ಟಪಡುವುದು ಅಥವಾ ಕಾಮೆಂಟ್ ಮಾಡುವುದನ್ನು ತಪ್ಪಿಸಿ' ಎಂಬ ಮಾತನ್ನು ಪಸರಿಸುವ ಮೂಲಕ, ಈ ಡಿಜಿಟಲ್ ಪ್ರತಿರೋಧದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಜಾಗತಿಕ 'ಸೈಲೆನ್ಸ್ ಫಾರ್ ಗಾಜಾ' ಅಭಿಯಾನಕ್ಕೆ ಸೇರುವ ಮೂಲಕ, ಸಿಪಿಐ(ಎಂ) ಪ್ಯಾಲೆಸ್ಟೀನಿಯನ್ ಜನರೊಂದಿಗೆ ಮತ್ತು ಇಸ್ರೇಲ್ ಹರಿಯ ಬಿಟ್ಟಿರುವ ಕ್ರೂರ, ನರಮೇಧದ ದಾಳಿಯ ವಿರುದ್ಧ ನಿಲ್ಲುತ್ತದೆ ಎನ್ನುತ್ತ, ಈ ಸಾಮೂಹಿಕ ಮೌನವು ಶಾಮೀಲಿನಲ್ಲಿ ಭಾಗಿಯಾಗಲು ಧಿಕ್ಕಾರಪೂರ್ಣ ನಿರಾಕರಣೆಯಾಗಲಿ ಮತ್ತು ಯುದ್ಧ ಅಪರಾಧಗಳ ವಿರುದ್ಧದ ಧ್ವನಿಯನ್ನು ಮೌನಗೊಳಿಸಲಾಗುವುದಿಲ್ಲ ಎಂಬುದರ ಪ್ರಬಲ ಪ್ರತಿಪಾದನೆಯಾಗಲಿ ಎಂದು ಪೊಲಿಟ್‌ಬ್ಯುರೊ ಹಾರೈಸಿದೆ.





ಬುದ್ಧಿಜೀವಿಗಳ ಮೇಲೆ ಹೆಚ್ಚುತ್ತಿರುವ ನವ–ಫ್ಯಾಸಿಸಂನ ದಾಳಿಗಳು




ಪ್ರೊ. ಪ್ರಭಾತ್ ಪಟ್ನಾಯಕ್

ಅನು: ಕೆ.ಎಂ.ನಾಗರಾಜ್

ದುಡಿಯುವ ಜನರು ಮತ್ತು ಬುದ್ಧಿಜೀವಿಗಳ ನಡುವಿನ ಅಂತರ ಹೆಚ್ಚುವಲ್ಲಿ ನವ–ಉದಾರವಾದವು ಬಹಳಷ್ಟು ಕೊಡುಗೆ ನೀಡಿದೆ. ಇದು, ಸಾಮಾನ್ಯವಾಗಿ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಸಹಿಷ್ಣುತೆಯ ರಕ್ಷಣೆಗಾಗಿ ಮುಂದಾಗುತ್ತಿದ್ದ ಬುದ್ಧಿಜೀವಿಗಳ ಮೇಲೆ ನವ–ಫ್ಯಾಸಿಸಂ ದಾಳಿಯನ್ನು ಸುಲಭಗೊಳಿಸಿದೆ. ಆದರೆ ದುಡಿಯುವ ಜನತೆ ಮತ್ತು ಬುದ್ಧಿಜೀವಿಗಳ ನಡುವಿನ ಅಂತರವನ್ನು ನಿವಾರಿಸಿ ನವ–ಫ್ಯಾಸಿಸಂ ಅನ್ನು ಸೋಲಿಸುವ ಪರಿಸ್ಥಿತಿ ನವ–ಉದಾರವಾದದ ಬಿಕ್ಕಟ್ಟಿನಿಂದಾಗಿಯೇ ಸೃಷ್ಟಿಯಾಗುತ್ತದೆ. ಕಳೆದ ಕೆಲವು ವರ್ಷಗಳಲ್ಲಿ ಭಾರತದಲ್ಲಿ ಉನ್ನತ ಶಿಕ್ಷಣ ವಲಯದ ಬೋಧಕರು ಎದುರಿಸುತ್ತಿರುವ ಆರ್ಥಿಕ ತೊಂದರೆಗಳೇ, ನವ–ಫ್ಯಾಸಿಸಂನ ಬಿಕ್ಕಟ್ಟಿನ ಕಾಲಮಾನದಲ್ಲಿ ಬುದ್ಧಿಜೀವಿಗಳು ಮತ್ತು ದುಡಿಯುವ ಜನರ ಭವಿಷ್ಯಗಳು ಪರಸ್ಪರ ತಳುಕು ಹಾಕಿಕೊಳ್ಳುತ್ತವೆ ಎಂಬ ಅಂಶಕ್ಕೆ ಸಾಕ್ಷಿಯಾಗುತ್ತವೆ.

ಭಾರತದ ಕಮ್ಯುನಿಸ್ಟರು ತಮ್ಮ ಕಾರ್ಯಚಟುವಟಿಕೆಯ ಭಾಗವಾಗಿ ಶಾಲಾ ಕಾಲೇಜುಗಳನ್ನು ಸ್ಥಾಪಿಸುವುದಕ್ಕಾಗಿ ಸಾರ್ವಜನಿಕ ದೇಣಿಗೆ ಸಂಗ್ರಹಿಸಲು ಮತ್ತು ಇದಕ್ಕೆ ಸಾರ್ವಜನಿಕರ ಮನವೊಲಿಸಲು ಬಹಳವಾಗಿ ಶ್ರಮಿಸಿದ್ದಾರೆ. ಅವರ ಈ ಕಾರ್ಯ–ನಿಷ್ಠೆಯು, ಆರ್‌ಎಸ್‌ಎಸ್‌ನಂತಹ ಫ್ಯಾಸಿಸ್ಟ್ ಸಂಘಟನೆಗಳು ಮಕ್ಕಳಿಗಾಗಿ ಶಾಲೆಗಳನ್ನು ಸ್ಥಾಪಿಸುವ ಚಟುವಟಿಕೆಗೆ ಹೋಲಿಸಿದರೆ, ಎರಡು ರೀತಿಯಲ್ಲಿ ಭಿನ್ನವಾಗಿತ್ತು. ಮೊದಲನೆಯದು, ಕಮ್ಯುನಿಸ್ಟರು ಈ ಶಿಕ್ಷಣ ಸಂಸ್ಥೆಗಳನ್ನು ಅವುಗಳ ಮೇಲೆ ಹಿಡಿತ ಸಾಧಿಸಿ ತಮ್ಮದೇ ವಿಶ್ವ–ಕಣ್ಣೋಟವನ್ನು ಪ್ರಸಾರ ಮಾಡುವ ಉದ್ದೇಶದಿಂದ ಆರಂಭಿಸಲಿಲ್ಲ. ಜನರು ಶಿಕ್ಷಣ ಪಡೆದಾಗಅವರಾಗಿ ಅವರೇ ಕಮ್ಯುನಿಸ್ಟರು ಹೊಂದಿರುವ ವಿಶ್ವದೃಷ್ಟಿಯನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಪಡೆಯುತ್ತಾರೆ ಎಂಬ ಧೃಡ ವಿಶ್ವಾಸದಿಂದ ಜನರ ಸಾಧಾರಣ ಶಿಕ್ಷಣ ಮಟ್ಟವನ್ನು ಸುಧಾರಿಸುವುದು ಅವರ ಗುರಿಯಾಗಿತ್ತು. ಹಾಗಾಗಿ, ಕಮ್ಯುನಿಸ್ಟರು ಕಟ್ಟಿ ಬೆಳೆಸಿದ ಸಂಸ್ಥೆಗಳು ವಿಶ್ವಾಸಾರ್ಹ ಶಿಕ್ಷಣ ಸಂಸ್ಥೆಗಳಾಗಿದ್ದವೇ ವಿನಃ, ನಿರ್ದಿಷ್ಟ ಪ್ರಚಾರ ನಡೆಸುವ ಸಾಧನಗಳಲ್ಲ. ಎರಡನೆಯದು, ಕಮ್ಯುನಿಸ್ಟರು ಮಕ್ಕಳ ಶಾಲೆಗಳನ್ನು ಮಾತ್ರ ಸ್ಥಾಪಿಸಲಿಲ್ಲ, ವಿಷಯ–ವಿಚಾರಗಳನ್ನು ಮುಕ್ತವಾಗಿ ಚರ್ಚಿಸುವ ಮೂಲಕ ಅಭಿಪ್ರಾಯಗಳನ್ನು ಪ್ರಬುದ್ಧವಾಗಿ ರೂಪಿಸಿಕೊಳ್ಳಲು ಅನುವಾಗುವಂತೆ ಕಾಲೇಜುಗಳನ್ನು ಸ್ಥಾಪಿಸಿದರು. ಇದಕ್ಕೆ ವ್ಯತಿರಿಕ್ತವಾಗಿ ಫ್ಯಾಸಿಸ್ಟರು ಎಳೆ ಮನಸಿನ ಮಕ್ಕಳನ್ನು ಭಾವನಾತ್ಮಕವಾಗಿ ಪ್ರಭಾವಿಸಿ ಅವರನ್ನು ಸೆಳೆಯುವ ಉದ್ದೇಶದಿಂದ ಮಕ್ಕಳ ಶಾಲೆಗಳನ್ನು ಸ್ಥಾಪಿಸುತ್ತಾರೆ.



ಈ ಎರಡು ಪ್ರಯತ್ನಗಳು ಶಿಕ್ಷಣದ ಬಗ್ಗೆ ಪರಸ್ಪರ ವಿರುದ್ಧವಾದ ಎರಡು ಮನೋಭೂಮಿಕೆಗಳನ್ನು ವ್ಯಕ್ತಪಡಿಸುತ್ತವೆ. ಬರ್ಟೋಲ್ಟ್ ಬ್ರೆಕ್ಟ್ "ಹಸಿದಿರುವ ಮಾನವ; ಪುಸ್ತಕ ಹಿಡಿ" ಎಂದಾಗ, ಶಿಕ್ಷಣವು ಮಾನವ ಗ್ರಹಿಕೆಗಳನ್ನು ವಿಸ್ತರಿಸುವುದರಿಂದ ಜನ ವಿಮೋಚನೆಗೆ ಅದು ಅವಶ್ಯ ಎಂಬ ಎಡಪಂಥೀಯ ಮನೋಭಾವವನ್ನು ಅವರು ಅರ್ಥಪೂರ್ಣವಾಗಿ ಅಭಿವ್ಯಕ್ತಿಸಿದ್ದರು. ಶಿಕ್ಷಣದ ಬಗ್ಗೆ ಫ್ಯಾಸಿಸ್ಟರ ಮನೋಭಾವವು ಇದಕ್ಕೆ ತದ್ವಿರುದ್ಧವಾಗಿದೆ. ಅವರ ಪ್ರಕಾರ, ತಮ್ಮ ಗ್ರಹಿಕೆಗಳನ್ನು ಜನರು ವಿಸ್ತರಿಸತೊಡಗಿದಾಗ ಸಾರಭೂತವಾಗಿ ಅದು ವಿಧ್ವಂಸಕವಾಗಿರುವುದರಿಂದ, ನಿಜ ಶಿಕ್ಷಣವನ್ನು ಕೈಬಿಟ್ಟು ಅದನ್ನು ಫ್ಯಾಸಿಸ್ಟ್ ಪ್ರಚಾರಕ್ಕೆ ಬದಲಾಯಿಸಬೇಕು ಎಂಬುದು.

ಎಡಪಂಥೀಯರು,"ಹಸಿದಿರುವ ಮನುಷ್ಯ"ನನ್ನು "ಪುಸ್ತಕ ಓದು" ಎಂದು ಪ್ರಚೋದಿಸುತ್ತಾರೆ; ಫ್ಯಾಸಿಸ್ಟರು ನಾಜಿ ಜರ್ಮನಿಯಲ್ಲಿ ಮಾಡಿದ್ದಂತೆ ಪುಸ್ತಕಗಳ ಸುಡುವುದನ್ನು ಪ್ರೋತ್ಸಾಹಿಸುತ್ತಾರೆ.

ಫ್ಯಾಸಿಸ್ಟರ ಶಿಕ್ಷಣ–ಭೀತಿ

ಈ ವಿಷಯದಲ್ಲಿ ಇಂದಿನ ನವ–ಫ್ಯಾಸಿಸ್ಟರು ತಮ್ಮ ಹಿರೀಕರನ್ನು ಅನುಕರಿಸುತ್ತಾರೆ. ಸಾಮಾನ್ಯವಾಗಿ ಅವರು ಬೌದ್ಧಿಕ ಚಟುವಟಿಕೆಯನ್ನು ನಿರ್ದಯವಾಗಿ ವಿರೋಧಿಸುತ್ತಾರೆ ಮತ್ತು ಬುದ್ಧಿಜೀವಿಗಳನ್ನು ಒಂದು ಸಾಮಾಜಿಕ ಗುಂಪಾಗಿ ವಿರೋಧಿಸುತ್ತಾರೆ. ಭಾರತದಲ್ಲಿ ಮಾತ್ರವಲ್ಲದೆ ಇದೇ ರೀತಿಯ ಆಡಳಿತಗಳನ್ನು ಹೊಂದಿರುವ ಯುಎಸ್ ಮತ್ತು ಇತರ ದೇಶಗಳಲ್ಲಿಯೂ ಸಹ ಸಂಭವಿಸುತ್ತಿರುವ ಎಲ್ಲ ಶ್ರೇಷ್ಠ ಶಿಕ್ಷಣ ಸಂಸ್ಥೆಗಳ ನಾಶವು ಈ ಪ್ರವೃತ್ತಿಯ ಅಭಿವ್ಯಕ್ತಿಯಾಗಿದೆ. ಭಾರತದಲ್ಲಿ ತಮ್ಮ ಆಲೋಚನೆಗಳನ್ನು ಮುಕ್ತವಾಗಿ ವ್ಯಕ್ತಪಡಿಸುವ ಧೈರ್ಯ ತೋರುವ ಬುದ್ಧಿಜೀವಿಗಳನ್ನು ಜಾರಿ ನಿರ್ದೇಶನಾಲಯದ ದಾಳಿಗಳ ಮೂಲಕ ಹೆದರಿಸುವುದು, ಅವರನ್ನು "ಖಾನ್ ಮಾರ್ಕೆಟ್ ಗ್ಯಾಂಗ್" (ಅದರ ಅರ್ಥ ಏನೇ ಇರಲಿ), "ತುಕ್ಡೆ–ತುಕ್ಡೆ ಗ್ಯಾಂಗ್" (ದೇಶವನ್ನು ತುಂಡು ತುಂಡು ಮಾಡುವ ಗುಂಪು), "ನಗರ ನಕ್ಸಲರು" (ಅಂದರೆ ಉಗ್ರ ಎಡಪಂಥೀಯ ವ್ಯಕ್ತಿಗಳು ಮತ್ತು ಗುಂಪುಗಳು) ಎಂದು ಹಣೆಪಟ್ಟಿ ಹಚ್ಚುವ ಮೂಲಕ, ಅವರ ವಿರುದ್ಧ ಒಂದು ಬದ್ಧ ದ್ವೇಷವನ್ನು ಸಾರ್ವಜನಿಕರಲ್ಲಿ ಹುಟ್ಟಿಸುವುದು ಇವೆಲ್ಲವೂ ಈ ಪ್ರವೃತ್ತಿಯ ಭಾಗವಾಗಿದೆ. ಅಮೆರಿಕದ ವಿಶ್ವವಿದ್ಯಾಲಯಗಳು ಕಮ್ಯುನಿಸ್ಟರಿಂದ ತುಂಬಿ ತುಳುಕುತ್ತಿವೆ ಎಂದು ಡೊನಾಲ್ಡ್ ಟ್ರಂಪ್ ನೋಡುತ್ತಿರುವುದು ಮತ್ತು ಅವರನ್ನು ನಿರ್ಮೂಲ ಮಾಡಬೇಕಾಗಿದೆ ಎಂದು ಹೇಳುತ್ತಿರುವುದು ಕಾಕತಾಳೀಯವೇನಲ್ಲ. ಶಿಕ್ಷಣದ ಬಗ್ಗೆ ಅಂತಹ ಒಂದು ಭೀತಿ ನವ–ಫ್ಯಾಸಿಸ್ಟ್ ಮನೋಭಾವದಲ್ಲೇ ಅಂತರ್ಗತವಾಗಿದೆ.

ಜವಾಹರಲಾಲ್ ನೆಹರು ವಿಶ್ವವಿದ್ಯಾಲಯವನ್ನು ನಾಶಪಡಿಸಲು, ವಿಶ್ವಭಾರತಿ ವಿಶ್ವವಿದ್ಯಾಲಯವನ್ನು ನಿಷ್ಕ್ರಿಯಗೊಳಿಸಲು, ಹೈದರಾಬಾದ್ ಕೇಂದ್ರ ವಿಶ್ವವಿದ್ಯಾಲಯವನ್ನು ಧ್ವಂಸಗೊಳಿಸಲು, ಜಾಮಿಯಾ ಮಿಲಿಯಾ ಇಸ್ಲಾಮಿಯಾವನ್ನು ಬ´ಂು´ು ಬಿ ೀ ತ´ ಗ´ ೊ ಳಿ ಸ´ ಲು , ದೆಹಲಿ ವಿಶ್ವವಿದ್ಯಾಲಯವನ್ನು ಅಸ್ಥಿರಗೊಳಿಸಲು, ಪುಣೆ ಚಲನಚಿತ್ರ ಸಂಸ್ಥೆಯನ್ನು ಸ್ವಾಧೀನಪಡಿಸಿಕೊಳ್ಳಲು (ವಿದ್ಯಾರ್ಥಿಗಳು ಇದರ ವಿರುದ್ಧ ದೀರ್ಘಕಾಲ ಪ್ರತಿಭಟನೆ ನಡೆಸಿದ್ದರು) ಮತ್ತು ಬರೋಡಾದ ಮಹಾರಾಜ ಸಯಾಜಿರಾವ್ ವಿಶ್ವವಿದ್ಯಾಲಯದ ಲಲಿತಕಲಾ ವಿಭಾಗವನ್ನು ನಿಯಂತ್ರಿಸಲು ಮೋದಿ ಸರ್ಕಾರವು ವ್ಯವಸ್ಥಿತವಾಗಿ ಪ್ರಯತ್ನಿಸಿದೆ.

ಇವೆಲ್ಲವೂ ಸ್ವಾತಂತ್ರ್ಯ ಬಂದ ನಂತರ ನಿರ್ಮಿಸಿದ ಮತ್ತು ದೇಶವು ನಿಜಕ್ಕೂ ಹೆಮ್ಮೆಪಡಬಹುದಾದ ಸಂಸ್ಥೆಗಳೇ. ಅವುಗಳ ಮೇಲೆ ನಡೆಸುವ ದಾಳಿಯು ದೇಶದಲ್ಲಿ ಸ್ವಂತಿಕೆಯ ಹಾಗೂ ಸೃಜನಶೀಲ ಚಿಂತನೆಯನ್ನು ನಾಶಮಾಡುವ ಅತ್ಯಂತ ವಿಕೃತ ಪ್ರಯತ್ನವಾಗುತ್ತದೆ. ಚಿಂತನೆಯ ಮೇಲಿನ ಈ ದಾಳಿಯು ಕೊಲಂಬಿಯಾ ವಿಶ್ವವಿದ್ಯಾಲಯ, ಹಾರ್ವರ್ಡ್ ವಿಶ್ವವಿದ್ಯಾಲಯ ಮತ್ತು ಅಮೆರಿಕದ ಇತರ ಖ್ಯಾತಿವೆತ್ತ ಸಂಸ್ಥೆಗಳ ಮೇಲೆ ಟ್ರಂಪ್ ಆಡಳಿತವು ನಡೆಸಿದ ದಾಳಿಯೊಂದಿಗೆ ವಿಲಕ್ಷಣವಾಗಿ ಹೋಲುತ್ತದೆ.

ಚಿಂತನೆಗಳಿಗೆ ಬೆಲೆಯಿಲ್ಲದಂತೆ ಮಾಡುವ ಮತ್ತು ಬೌದ್ಧಿಕ ಚಟುವಟಿಕೆಗಳನ್ನು ಹತ್ತಿಕ್ಕುವ ನವ–ಫ್ಯಾಸಿಸ್ಟರ ಪ್ರಯತ್ನವನ್ನು ಅರ್ಥಮಾಡಿಕೊಳ್ಳುವುದು ಕಷ್ಟವಲ್ಲವಾದರೂ, ಒಂದು ಒಗಟಾಗಿ ಕಾಡುವ ಸಂಗತಿ ಯಾವುದೆಂದರೆ: ಸದಾ ತನ್ನ ಬುದ್ಧಿಜೀವಿಗಳನ್ನು ಅಪಾರ ಗೌರವದಿಂದ ಕಾಣುತ್ತಿದ್ದ (ಇದು ಬಂಡವಾಳಶಾಹಿ–ಪೂರ್ವದ ಪರಂಪರೆಯೂ ಹೌದು) ದೇಶದಲ್ಲಿ ಬೌದ್ಧಿಕ ಚಟುವಟಿಕೆಯನ್ನು ಹತ್ತಿಕ್ಕುವ ಪ್ರಯತ್ನವು ಈ ಮಟ್ಟದ ಯಶಸ್ಸನ್ನು ಕಂಡಿದ್ದಾದರೂ ಹೇಗೆ? ಕೆಲ ವರ್ಷಗಳ ಹಿಂದಿನವರೆಗೂ ಭಾರತದ ಜನ ಸಾಮಾನ್ಯರು ಬುದ್ಧಿಜೀವಿಗಳನ್ನು, ವಿಶೇಷವಾಗಿ ವಿದ್ವಜ್ಜನರನ್ನು ಅಪಾರ ಗೌರವದಿಂದ ಕಾಣುತ್ತಿದ್ದರು ಎಂಬುದನ್ನು ಶೈಕ್ಷಣಿಕ ವಲಯದಲ್ಲಿರುವ ಯಾರಾದರೂ ಖಾತ್ರಿಪಡಿಸುತ್ತಾರೆ. ಹಾಗಿದ್ದರೂ ಸಹ ಮೋದಿ ಸರ್ಕಾರವು ಬುದ್ಧಿಜೀವಿಗಳ ಮೇಲೆ ನಡೆಸಿದ ದಾಳಿಯು ಸಾಮಾನ್ಯವಾಗಿ ನಿರೀಕ್ಷಿಸಬಹುದಾದ ಮಟ್ಟದ ಜುಗುಪ್ಸೆಯನ್ನು ಏಕೆ ಹುಟ್ಟಿಸಲಿಲ್ಲ? ಈ ಬಗ್ಗೆ ಅಮೆರಿಕದ ಪರಿಸ್ಥಿತಿ ಸ್ವಲ್ಪ ಭಿನ್ನವಾಗಿದೆ. ಏಕೆಂದರೆ, ಪಾಳೆಗಾರಿಕೆ ಪದ್ಧತಿಯ ಮಾರ್ಗವನ್ನು ಅದು ಹಾದು ಬರಬೇಕಿರಲಿಲ್ಲವಾದ ಕಾರಣದಿಂದಾಗಿ, ಭಾರತದಂತಹ ಪುರಾತನ ಸಮಾಜಗಳು ಸಾಮಾನ್ಯವಾಗಿ ನೀಡುವ ಉನ್ನತ ಸ್ಥಾನಮಾನವನ್ನು ಅದು ಬುದ್ಧಿಜೀವಿಗಳಿಗೆ ನೀಡಲೇ ಇಲ್ಲ. ಆದರೆ, ಭಾರತದಲ್ಲಿ ಈ ಬದಲಾವಣೆ ಉಂಟಾಗಲು ನಿಜಕ್ಕೂ ಆಗಿದ್ದಾದರೂ ಏನು?

ನವ–ಉದಾರವಾದಿ ಆಳ್ವಿಕೆಯ ಪರಿಣಾಮ

ಈ ಬದಲಾವಣೆಯ ತಳದಲ್ಲಿರುವ ಅತ್ಯಂತ ನಿರ್ಣಾಯಕ ಅಂಶವೆಂದರೆ ಅದು ನವ ಉದಾರವಾದಿ ಆಳ್ವಿಕೆಯನ್ನು ದೇಶದಲ್ಲಿ ಜಾರಿಗೆ ತಂದ ಅಂಶವೇ ಎಂಬುದರ ಬಗ್ಗೆ ಅನುಮಾನವಿಲ್ಲ. ಈ ಬದಲಾವಣೆಯು ಸಾಕಾರಗೊಳ್ಳುವಲ್ಲಿ ನವ ಉದಾರವಾದವು ಕನಿಷ್ಠ ಮೂರು ವಿಭಿನ್ನ ರೀತಿಯಲ್ಲಿ ಕೊಡುಗೆ ನೀಡಿದೆ. ಮೊದಲನೆಯದು, ವರಮಾನದ ಅಸಮಾನತೆಗಳು ಬಹಳವಾಗಿ ವಿಸ್ತರಿಸಿವೆ. ಬುದ್ಧಿಜೀವಿಗಳು ಮತ್ತು ವಿ.ವಿ. ಬೋಧಕರು ಹೆಚ್ಚು ವರಮಾನ ಗಳಿಸುವವರ ಸಾಲಿನಲ್ಲೇನೂ ಇರಲಿಲ್ಲ. ಆದರೂ, ಅವರಲ್ಲಿ ಬಹಳ ಮಂದಿಯ ಸ್ಥಿತಿ–ಗತಿಗಳು ದುಡಿಯುವ ಜನಸಮೂಹದೊಂದಿಗೆ ಹೋಲಿಸಿದರೆ ನವ ಉದಾರವಾದದ ಆಳ್ವಿಕೆಯಲ್ಲಿ ಖಂಡಿತವಾಗಿಯೂ ಉತ್ತಮವಾಗಿವೆ. ಒಂದು ಉದಾಹರಣೆಯು ಈ ಅಂಶವನ್ನು ಸ್ಪಷ್ಟಪಡಿಸುತ್ತದೆ. 1974ರಲ್ಲಿ ಭಾರತದಲ್ಲಿ ಒಂದು ಕ್ವಿಂಟಲ್ ಗೋಧಿಯ ಅಧಿಕೃತ ಕನಿಷ್ಠ ಬೆಂಬಲ ಬೆಲೆಯು 85 ರೂ. ಗಳಷ್ಟಿತ್ತು ಮತ್ತು ಕೇಂದ್ರೀಯ ವಿಶ್ವವಿದ್ಯಾಲಯದ ಒಬ್ಬ ಅಸೋಸಿಯೇಟ್ ಪ್ರೊಫೆಸರ್‌ನ ಆರಂಭಿಕ ಮೂಲ ವೇತನವು ತಿಂಗಳಿಗೆ 1,200 ರೂ. ಗಳಷ್ಟಿತ್ತು. ಇಂದಿನ ದಿನಗಳಲ್ಲಿ ಒಂದು ಕ್ವಿಂಟಲ್ ಗೋಧಿಯ ಅಧಿಕೃತ ಕನಿಷ್ಠ ಬೆಂಬಲ ಬೆಲೆಯು 2,275 ರೂ.ಗಳಷ್ಟಾಗಿದೆ ಮತ್ತು ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಅಸೋಸಿಯೇಟ್ ಪ್ರೊಫೆಸರ್‌ನ ಆರಂಭಿಕ ಮೂಲ ಮಾಸಿಕ ವೇತನವು 131,400 ರೂ.ಗಳಷ್ಟಾಗಿದೆ. ಈ ಅಂಕಿ–ಅಂಶಗಳನ್ನು ನಾವು ಉಲ್ಲೇಖಿಸಿದ ಈ ಎರಡು ವರ್ಗಗಳಿಗೆ ಸೇರಿದ ವ್ಯಕ್ತಿಗಳ ವರಮಾನಗಳಲ್ಲಿ ಆಗಿರುವ ಚಲನೆಯ ಒಂದು ಸ್ಥೂಲ ಅಂದಾಜು ಎಂದು ತೆಗೆದುಕೊಂಡರೆ, ಉನ್ನತ ಶಿಕ್ಷಣ ವಲಯದ ಒಬ್ಬ ಬೋಧಕನ ವರಮಾನವು 100 ಪಟ್ಟು ಹೆಚ್ಚಾಗಿದೆ ಮತ್ತು ಒಬ್ಬ ರೈತನ ವರಮಾನವು 27 ಪಟ್ಟು ಹೆಚ್ಚಾಗಿದೆ ಎಂಬುದು ಕಂಡುಬರುತ್ತದೆ. ಅಂದರೆ, ಈ ಮೂರು–ನಾಲ್ಕು ದಶಕಗಳ ಅವಧಿಯಲ್ಲಿ ಅವರ ವರಮಾನಗಳ ನಡುವಿನ ಅನುಪಾತವು ನಾಲ್ಕು ಪಟ್ಟು ದೊಡ್ಡದಾಗಿದೆ. ಇದು ನವ ಉದಾರವಾದಿ ಯುಗದೊಂದಿಗೆ ಬಹಳವಾಗಿ ತಾಳೆಯಾಗುತ್ತದೆ. ಇಂಥಹ ಒಂದು ಸನ್ನಿವೇಶದಲ್ಲಿ ಉನ್ನತ ಶಿಕ್ಷಣ ವಲಯದ ಬೋಧಕರಿಂದ ಮತು ಇತರ ಬುದ್ಧಿಜೀವಿಗಳಿಂದ ದುಡಿಯುವ ಜನರು ದೂರ ಸರಿಯುವುದು ಆಶ್ಚರ್ಯವಲ್ಲ.

ಎರಡನೆಯದು, ಬಂಡವಾಳಶಾಹಿಯ ಪರಿಣಾಮವಾಗಿ ಹಿಂದಿನ–ಸ್ವರೂಪದ ಸ´ ವ´ು ು ದಾ ಂು´ು ಗ´ ಳ´ು ಪುಟ 15 ಕ್ಕೆ

ಇಸ್ರೇಲ್–ಇರಾನ್ ಯುದ್ಧ: ಏನಾಯ್ತು? ಏಕಾಯ್ತು? ಮುಂದೇನು?

ವಸಂತರಾಜ ಎನ್.ಕೆ.

ಇತ್ತೀಚೆಗೆ ಜಾಗತಿಕವಾಗಿ ಮೂರನೇ ಮಹಾಯುದ್ಧದ ಆತಂಕ ಮೂಡಿಸಿದ್ದ, ಇರಾನ್ ಮೇಲಿನ ಇಸ್ರೇಲಿ ಹಠಾತ್ ದಾಳಿಯಿಂದ ಆರಂಭವಾದ ಯುದ್ಧ, ಅಷ್ಟೇ ಹಠಾತ್ತಾಗಿ ಸದ್ಯಕ್ಕಂತೂ ನಿಂತಿದೆ. ಇದು ಹಲವು ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ಈ ಯುದ್ಧ ಯಾಕೆ ನಡೆಯಿತು? ಈ ವರೆಗೆ ತೆರೆಯ ಹಿಂದೆ ಮಾತ್ರವಿದ್ದ ಯುಎಸ್ ಏಕೆ ಇದ್ದಕ್ಕಿದ್ದ ಹಾಗೆ ಭಾಗವಹಿಸಿತು? ದೀರ್ಘಕಾಲೀನ ಯುದ್ಧದಂತೆ ಕಾಣುತ್ತಿದ್ದರೂ 12 ದಿನಗಳಲ್ಲಿ ಕದನ ವಿರಾಮ ಹೇಗಾಯಿತು? ಈ ಕದನ ವಿರಾಮ ಉಳಿಯಬಹುದೆ? ಈ ಯುದ್ಧದಲ್ಲಿ ಯಾರು ಗೆದ್ದರು? ಮುಂದೇನಾಗಬಹುದು–ಎಂಬ ಪ್ರಶ್ನೆಗಳಿಗೆ ಇಲ್ಲಿ ಉತ್ತರಿಸಲು ಪ್ರಯತ್ನಿಸಲಾಗಿದೆ. –ಮುಂದುವರಿದ ಭಾಗ.

3. ಇಸ್ರೇಲ್–ಇರಾನ್ ಯುದ್ಧದಲ್ಲಿ ಯುಎಸ್ ಏಕೆ ಪ್ರವೇಶಿಸಿತು?

ಯುಎಸ್ ಜೂನ್ 20 ರಂದು ಈ ಯುದ್ಧದಲ್ಲಿ ಪ್ರವೇಶಿಸಿತು ಎಂದು ಹೇಳುವುದೇ ತಪ್ಪಾದೀತು. ಇಸ್ರೇಲಿಗೆ ಈ ಯುದ್ಧ ಆರಂಭಿಸಲು ಹಸಿರು ನಿಶಾನೆ ತೋರಿಸುವುದಲ್ಲದೆ ಶಸ್ತ್ರಾಸ್ತ್ರ ಸರಬರಾಜು, ಡ್ರೋನ್ ಕ್ಷಿಪಣಿ ಉಡಾವಣೆ ನಿಯಂತ್ರಣ, ವಾಯು ರಕ್ಷಣಾ ವ್ಯವಸ್ಥೆ ನಿರ್ವಹಣೆ, ಉಪಗ್ರಹ ಚಿತ್ರ ಬಳಸಿ ದಾಳಿಗೆ ಗುರಿ ಗುರುತಿಸುವಿಕೆ... ಹೀಗೆ ಹಲವು ಆಯಾಮಗಳಲ್ಲಿ ಯುಎಸ್ ಇಸ್ರೇಲಿ ಯುದ್ಧದಲ್ಲಿ ಭಾಗಿಯಾಗಿದೆ. ಈ ಯುದ್ಧದಲ್ಲಿ ಮಾತ್ರವಲ್ಲ, ಇಸ್ರೇಲಿನ ಎಲ್ಲ ಆಕ್ರಾಮಿಕ ಕುಕೃತ್ಯಗಳ ಹಿಂದಿರುವ ನಿಜವಾದ ಶಕ್ತಿ ಯುಎಸ್. ಇಸ್ರೇಲ್ ಯುಎಸ್ ಯೋಜನೆಯನ್ನು ಜಾರಿ ಮಾಡುತ್ತದೆಯಷ್ಟೆ. ಜೂನ್ 20ರಂದು ಯುಎಸ್ ತನ್ನ ನೆಲೆಗಳಿಂದ ವಿಮಾನ ಕಳುಹಿಸಿ ನೇರವಾಗಿ ಇರಾನ್ ಅಣು ಸ್ಥಾವರಗಳ ಮೇಲೆ ದಾಳಿ ಮಾಡಿದ್ದು ಅಷ್ಟೇ ವಿಶೇಷ.

ಭೂಗತ ಅಣು ಸ್ಥಾವರಗಳ ನಾಶಕ್ಕೆ ಬಂಕರ್ ಬ್ಲಸ್ಟರ್ ಬಾಂಬ್ ಅಗತ್ಯ. ಇದನ್ನು ಒಯ್ಯಲು ಅದರ ಬಳಿ ಮಾತ್ರವಿರುವ ಬಿ2 ಬಾಂಬರ್ ವಿಮಾನಗಳು ಅಗತ್ಯ. ಇವನ್ನು ಯಾರಿಗೂ ಯುಎಸ್ ಕೊಡದಿರುವ ಕಾರಣಕ್ಕೆ ಮಾತ್ರ ಯುಎಸ್ ನೇರವಾಗಿ ದಾಳಿ ಮಾಡಿದ್ದು. ಅಧ್ಯಕ್ಷ ಟ್ರಂಪ್ ಅವರೇ 'ಇಸ್ರೇಲಿ ದಾಳಿ ಬಗ್ಗೆ ತಿಳಿದಿತ್ತು, ಖಮೇನಿ ಹತ್ಯೆ ಮಾಡಬಾರದು ಅಂತ ನಿರ್ದೇಶಿಸಿದ್ದೆ' (ಅಂದರೆ ಇತರ ಹಿರಿಯ ನಾಯಕರ ಹತ್ಯೆಗೆ ಹಸಿರು ನಿಶಾನೆ ಕೊಟ್ಟಿದ್ದರು ಬೆಂಬಲಿಸಿದ್ದರು ಎಂಬರ್ಥಲ್ಲವೇ) ಎನ್ನುವುದು; ಇರಾನಿ ಸರಕಾರದ ಬದಲಾವಣೆ ಗುರಿಯಲ್ಲ ಅಂಥ ಒಮ್ಮೆ, ಇನ್ನೊಮ್ಮೆ ಅತ್ಯಂತ ಕೆಟ್ಟ ಇರಾನಿ ಸರಕಾರ ಬದಲಾಯಿಸದೆ ವಿಧಿಯಿಲ್ಲವೆಂದ ಟ್ರಂಪ್‌ನ ಮಾಮೂಲಿ ಗೊಂದಲಮಯ ಹೇಳಿಕೆಗಳೂ– ಹಿರಿಯ ನಾಯಕರ ಹತ್ಯೆ ಸೇರಿದಂತೆ ಈ ಯುದ್ಧದ ಎಲ್ಲದರಲ್ಲೂ ಯುಎಸ್ ಭಾಗಿಯಾಗಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತದೆ.

4. ಉಕ್ರೇನ್, ಗಾಜಾಗಳಂತೆ ದೀರ್ಘ ಕಾಲದಲ್ಲಿ ನಡೆಯಬಹುದು ಅಥವಾ ಮೂರನೇ ಮಹಾಯುದ್ಧಕ್ಕೆ ಹಾದಿ ಮಾಡಬಹುದು ಎಂಬ ನಡುಕ ಹುಟ್ಟಿಸಿದ್ದ ಈ ಯುದ್ಧ 12 ದಿನಗಳಲ್ಲಿ ನಿಂತದ್ದು ಹೇಗೆ?

ಹೌದು. ಇಂತಹ ಭೀತಿ–ಆತಂಕ ಮಾತ್ರವಲ್ಲ, ಸಾಧ್ಯತೆಯೂ ಇತ್ತು. ಹಾಗಾಗಿ ಯುದ್ಧ ನಿಲುಗಡೆ ಆಶ್ಚರ್ಯ ಹುಟ್ಟಿಸಿದೆ. ಇದಕ್ಕೆ ಕಾರಣವೇನು ಎಂಬುದರ ಬಗ್ಗೆ ಹಲವು ವಿಶ್ಲೇಷಣೆಗಳು ಬಂದಿವೆ. ಇವುಗಳಲ್ಲಿ ಬಹುಶಃ ಈ ಮುಂದಿನದು ಹೆಚ್ಚು ಸರಿಯೆನಿಸುತ್ತದೆ:

ಇಸ್ರೇಲ್–ಯುಎಸ್ ಕೂಟ ದಾಳಿ ಯೋಜಿಸಿದಾಗ ಹಿರಿಯ ರಾಜಕೀಯ–ಮಿಲಿಟರಿ ನಾಯಕರ ಕೊಲೆ (ಅಗತ್ಯ ಬಿದ್ದರೆ ಖಮೇನಿ ಅವರ ಕೊಲೆಗೆ ಸಹ ಸಂಚು ಇತ್ತು), ಅಣು ಸ್ಥಾವರಗಳ ಮೇಲೆ ದಾಳಿ, ವಾಯು ರಕ್ಷಣಾ ವ್ಯವಸ್ಥೆಯ ನಾಶ, ಟೆಹರಾನ್ ಮೇಲೆ ದಾಳಿ– ಇರಾನ್ ನಾಯಕತ್ವವನ್ನು ಪೂರ್ಣವಾಗಿ ಧೃತಿಗೆಡಿಸಬಹುದು. ಜನತೆ ಕಂಗಾಲಾಗಿ ಸರಕಾರದ ವಿರುದ್ಧ ದಂಗೆಯೇಳಬಹುದು. ಅರಾಜಕ ವಾತಾವರಣ ಉಂಟಾಗಿ, ಸರಕಾರ ಶರಣಾಗಬಹುದು ಅಥವಾ ಕನಿಷ್ಟ ಪ್ರತಿದಾಳಿ ನಡೆಸಲು ಸಾಧ್ಯವಾಗದೆ ಹೋಗಬಹುದು ಎಂಬ ಯುಎಸ್–ಇಸ್ರೇಲ್ ಲೆಕ್ಕಾಚಾರ ಎರಡನೇ ದಿನವೇ ತಲೆಕೆಳಗಾಯ್ತು. ಎರಡನೇ ದಿನದಿಂದಲೇ ಹಲವು ಹಿರಿಯ ನಾಯಕರ ಕೊಲೆಯ ನಂತರವೂ ಹೊಸ ನಾಯಕತ್ವ ತೀವ್ರ ಮಿಲಿಟರಿ ಪ್ರತಿದಾಳಿ ಸಂಘಟಿಸಿತು. ಟೆಲ್ ಅವಿವ್, ಹೈಫಾದ ಆಯಕಟ್ಟಿನ ಗುರಿಗಳ ಮೇಲೆ ದಾಳಿಯಿಂದಾದ ವಿನಾಶ, ಇಸ್ರೇಲಿ ನಾಯಕತ್ವಕ್ಕೆ ನಡುಕ ತಂದಿತು. ಅದು ಇರಾನ್‌ನ ಮಿಲಿಟರಿ ಶಕ್ತಿ, ವ್ಯೂಹ–ತಂತ್ರಗಳ ನಿಖರ ಅಂದಾಜು ಮಾಡುವುದರಲ್ಲಿ ವಿಫಲವಾಗಿತ್ತು. ಯುದ್ಧದ ಒಂದು ವಾರದೊಳಗೆ ಇಸ್ರೇಲ್‌ನಲ್ಲಿ ಕ್ಷಿಪಣಿ–ನಿರೋಧ ಕ್ಷಿಪಣಿಗಳು ಕೆಲವು ದಿನಗಳ ಸ್ಟಾಕ್ ಸಹ ಇಲ್ಲದೆ ಅದು ಸೋಲಿನ ದವಡೆಯಲ್ಲಿತ್ತು. ಇರಾನ್‌ನ ಮಧ್ಯಮ–ದೂರದ ಕ್ಷಿಪಣಿಗಳಿಗಿಂತ ಮೊದಲೇ ಇಸ್ರೇಲ್‌ನಲ್ಲಿ ಕ್ಷಿಪಣಿ–ನಿರೋಧ ಕ್ಷಿಪಣಿಗಳು ಮುಗಿದು ಹೋಗುತ್ತವೆ ಎಂದು ಹಲವು ಸ್ವತಂತ್ರ ಮಿಲಿಟರಿ ಪರಿಣತರು ಹೇಳಿದ್ದಾರೆ. ಆ ನಂತರವೇ ಯುಎಸ್ ಮಧ್ಯಪ್ರವೇಶ ಮತ್ತು ದಾಳಿಯ ನಿರ್ಣಯ ತೆಗೆದುಕೊಳ್ಳಲಾಯಿತು. ಇದಾದರೂ ಇರಾನ್ ಅನ್ನು ಧೃತಿಗೆಡಿಸಬಹುದು ಎಂಬ ಲೆಕ್ಕಾಚಾರವಿತ್ತು. ದೋಹಾದಲ್ಲಿನ ಇರಾನ್‌ನ ದಾಳಿ ಮತ್ತೆ ಅವರ ಲೆಕ್ಕಾಚಾರ ತಲೆ ಕೆಳಗು ಮಾಡಿತು.

ಯುಎಸ್ ದಾಳಿಗೆ ಪ್ರತಿಯಾಗಿ ಕೊಲ್ಲಿ ದೇಶ ಕತಾರ್‌ನ ರಾಜಧಾನಿ ದೋಹಾದಲ್ಲಿನ ಯುಎಸ್ ಮಿಲಿಟರಿ ನೆಲೆಯ ಮೇಲೆ ಇರಾನ್ ಮಾಡಿದ ಈ ದಾಳಿ, ಎಲ್ಲ ಕೊಲ್ಲಿ ದೇಶಗಳ ಶೇಕ್ ದೊರೆಗಳಲ್ಲಿ ಮತ್ತು ನಾಗರಿಕರಲ್ಲಿ ತೀವ್ರ ನಡುಕ, ಭೀತಿ ಉಂಟು ಮಾಡಿದವು; ಅಶಾಂತಿ, ಅಸ್ಥಿರತೆಯ ಪ್ರಾಣ ನಷ್ಟದ ಭೀತಿ, ತೈಲ ಸ್ಥಾವರದ ನಾಶ, ಹೂಡಿಕೆ, ವ್ಯವಹಾರಗಳಲ್ಲಿ ಏರುಪೇರುಗಳ ಕುರಿತು ಆತಂಕ ಮನೆಮಾಡಿತು. 'ಇರಾನ್ ಬೆದರಿಕೆ' ನಿರ್ಮೂಲನಕ್ಕೆ ಹೋಗಿ, ಇರುವ ನಿಷ್ಠ ಕೊಲ್ಲಿ ದೇಶಗಳ ದೊರೆ ಮತ್ತು ನಾಗರಿಕರ ಬೆಂಬಲಿಗರನ್ನು ಕಳೆದುಕೊಳ್ಳುವುದು ಜಾಣತನವಲ್ಲ; ಮೊದಲ ಬಾರಿ ನಿಜವಾದ ಯುದ್ಧದ ಸಾವು–ನೋವು, ಆತಂಕಗಳನ್ನು ಕಂಡ ಇಸ್ರೇಲಿ ನಾಗರಿಕರ ಆಕ್ರೋಶ ಇರಾನ್ ಬದಲು ಇಸ್ರೇಲಿನ ಸರಕಾರ ಬದಲಾವಣೆಗೆ ಕಾರಣವಾಗಬಹುದು–ಎಂಬ ಎಚ್ಚರ ಯುಎಸ್–ಇಸ್ರೇಲಿ ಕೂಟದಲ್ಲಿ ಮೂಡಿರಬೇಕು.

ಯುಎಸ್ ದಾಳಿಯಿಂದ ಆತಂಕಿತರಾದ ರಷ್ಯಾ, ಚೀನಾ ಸಹ ಯುಎಸ್‌ಗೆ ಮಧ್ಯಪ್ರವೇಶ ಮಾಡುವ ಬೆದರಿಕೆ ಮತ್ತು ಎಚ್ಚರಿಕೆ ಕೊಟ್ಟಿರಬೇಕು. ಇರಾನ್‌ನ ಹೊರ್ಮುಝ್ ಜಲಸಂಧಿ ಮುಚ್ಚುವ ಬೆದರಿಕೆ ಸಹ ಈ ನಿರ್ಣಯದಲ್ಲಿ ಪಾತ್ರ ವಹಿಸಿರಬಹುದು.

5. ಯುದ್ಧದಲ್ಲಿ ಗೆದ್ದವರು ಯಾರು?

ಯುಎಸ್, ಇಸ್ರೇಲ್, ಇರಾನ್–ಮೂವರಿಂದಲೂ ತಾವು ಗೆದ್ದಿರುವುದಾಗಿ ಘೋಷಣೆಗಳು ಕೇಳಿ ಬರುತ್ತಿವೆ. ಯುದ್ಧದಲ್ಲಿ 'ಗೆದ್ದವನು ಸೋತ, ಸೋತವನು ಸತ್ತ' ಎಂಬ ಮಾತು ಹೆಚ್ಚು ಸೂಕ್ತ. ಈ ದೇಶಗಳ ಜನತೆಯಂತೂ ಸೋತಿದ್ದಾರೆ ಎಂಬುದಂತು ಸ್ಪಷ್ಟ. ಇಸ್ರೇಲ್ ತನ್ನ ಎಲ್ಲ ಗುರಿಗಳು–ಅಣ್ವಸ್ತ್ರ ಕ್ಷಮತೆಯ ನಾಶ, ವಾಯು ದಾಳಿ ರಕ್ಷಣಾ ವ್ಯವಸ್ಥೆ, ಕ್ಷಿಪಣಿ ಕ್ಷಮತೆ ನಾಶದ ಮೂಲಕ ಇಸ್ರೇಲಿಗೆ ಬೆದರಿಕೆ ನಿರ್ಮೂಲನೆ, ಇಸ್ರೇಲಿ–ವಿರೋಧಿ ನಾಯಕತ್ವದ ನಾಶ ಸಾಧಿಸಲಾಗಿದೆ ಎಂದು ಹೇಳಿಕೊಂಡಿದೆ. ಇರಾನಿನ ಅಣ್ವಸ್ತ್ರ ಕ್ಷಮತೆಯ ನಾಶ ಮಾತ್ರ ತನ್ನ ಗುರಿಯಾಗಿತ್ತು, ಅದನ್ನು ಸಾಧಿಸಲಾಗಿದೆ ಎಂದು



ಯುಎಸ್ ಹೇಳಿದೆ.

ಅಣ್ವಸ್ತ್ರ ಕ್ಷಮತೆಯ ನಾಶದ ಬಗ್ಗೆ ಹಲವು ಸ್ವತಂತ್ರ ಪರಿಣತರು ತೀವ್ರ ಅನುಮಾನ ವ್ಯಕ್ತಪಡಿಸಿದ್ದಾರೆ. ಅಣ್ವಸ್ತ್ರ ಕ್ಷಮತೆಗೆ ಹಲವು ಆಯಾಮಗಳಿವೆ. ಕೆಲವು ಉನ್ನತ ವಿಜ್ಞಾನಿಗಳನ್ನು ಹತ್ಯೆ ಮಾಡಿದ್ದರೂ, ಇರಾನಿನಲ್ಲಿ ಅಣುವಿಜ್ಞಾನ–ತಂತ್ರಜ್ಞಾನದಲ್ಲಿ ಪರಿಣತಿ ಸಾಕಷ್ಟು ಪ್ರಮಾಣದಲ್ಲಿದೆ. ಈ ದಾಳಿಯ ಅನುಮಾನವಿದ್ದದ್ದರಿಂದ ಶುದ್ಧೀಕರಿಸಿದ ಯುರೇನಿಯಂ ಅನ್ನು ಮೊದಲೇ ಗುಪ್ತ ಸ್ಥಳಗಳಿಗೆ ಸಾಗಾಣಿಕೆ ಮಾಡಲಾಗಿತ್ತು ಎಂದು ತಿಳಿದು ಬಂದಿದೆ. ಐಎಇಎ ದಾಳಿಯ ನಂತರ ಆ ಪ್ರದೇಶಗಳಲ್ಲಿ ಅಣು ವಿಕಿರಣ ಹೆಚ್ಚಿದ್ದು ಕಂಡು ಬಂದಿಲ್ಲವೆಂಬುದು ಇದನ್ನೇ ದೃಢಪಡಿಸುತ್ತದೆ. ಯುರೇನಿಯಂ ಶುದ್ಧೀಕರಣ ಇತ್ಯಾದಿ ಉಪಕರಣಗಳನ್ನೂ ಬೇರೆ ಕಡೆಗೆ ವರ್ಗಾಯಿಸಲಾಗಿದೆ ಎಂದೂ ಹೇಳಲಾಗಿದೆ. ಆದರೆ ಸುಲಭದಲ್ಲಿ ಸಾಗಿಸಲಾಗದ ಕೆಲವು ಉಪಕರಣಗಳ ನಷ್ಟವಾಗಿರುವ ಸಾಧ್ಯತೆಯಿದೆ. ಕೆಲವು ಪರಿಣತರು ಇರಾನ್‌ನ ಅಣ್ವಸ್ತ್ರ ಸೇರಿದಂತೆ ಅಣುಶಕ್ತಿ ಕ್ಷಮತೆಯನ್ನು ಕೆಲವು ತಿಂಗಳುಗಳಷ್ಟು ಮಾತ್ರ ಹಿಮ್ಮೆಟ್ಟಿಸಿರಬಹುದು ಎಂದು ಅಂದಾಜು ಮಾಡಿದ್ದಾರೆ. ಕ್ಷಿಪಣಿ, ವಾಯು ರಕ್ಷಣಾ ವ್ಯವಸ್ಥೆ ನಷ್ಟವಾಗಿದ್ದು ನಿಜವಾದರೂ ಅದನ್ನು ಮತ್ತೆ ಪಡೆಯುವುದು (ಅದರಲ್ಲೂ ರಷ್ಯಾ, ಚೀನಾದ ಬೆಂಬಲದಿಂದ) ಕಷ್ಟವಾಗಲಾರದು.

ಇರಾನ್ ಸರಕಾರ ಬದಲಾಯಿಸಿ ಕೈಗೊಂಬೆ ಸರಕಾರ ತರುವ ಅಥವ ಅದರ ಸ್ವತಂತ್ರ ದೃಢನೀತಿಯನ್ನು ಅಸ್ಥಿರಗೊಳಿಸುವುದರಲ್ಲಿ, ಸರಕಾರದ ವಿರುದ್ಧ ಜನತೆಯಲ್ಲಿ ಆಕ್ರೋಶ, ದಂಗೆ ಉಂಟುಮಾಡುವ ಪ್ರಯತ್ನದಲ್ಲಿ ಯುಎಸ್–ಇಸ್ರೇಲ್ ಕೂಟ ಪೂರ್ಣ ವಿಫಲವಾಗಿದೆ. ಬದಲಿಗೆ ಆಂತರಿಕ ನೀತಿಗಳ ಕಾರಣಕ್ಕೆ ಸಾಕಷ್ಟು ಜನತೆಯ ಕೋಪಕ್ಕೆ ಗುರಿಯಾಗಿದ್ದ ಸರಕಾರವನ್ನು ಯುಎಸ್–ಇಸ್ರೇಲ್ ಕೂಟ ರಕ್ಷಿಸಿದೆ ಎನ್ನಬಹುದು. ಬಾಹ್ಯ ಬೆದರಿಕೆ, ಮಧ್ಯಪ್ರವೇಶ ಜನತೆಯನ್ನು ಸರಕಾರದ ಬೆಂಬಲಕ್ಕೆ ಧಾವಿಸುವಂತೆ ಮಾಡಿ ಅದನ್ನು ಬಲಪಡಿಸಿದೆ. ಅದೇ ರೀತಿ ಯುಎಸ್–ಇಸ್ರೇಲ್ ಕೂಟ ಆಡಳಿತದ ಕುಸಿತ, ಸಾಮಾಜಿಕ ಅರಾಜಕತೆ ವಿಘಟನೆ ತರುವಲ್ಲೂ ವಿಫಲಗೊಂಡಿದೆ. ಇರಾನಿ ಸರಕಾರದ ಉನ್ನತ ವಲಯಗಳಲ್ಲಿ ದೇಶದ್ರೋಹ, ಭ್ರಷ್ಟಾಚಾರ, ಬಾಹ್ಯಶಕ್ತಿಗಳ ಬಗ್ಗೆ ಎಚ್ಚರದ ಅಭಾವ, ಪಶ್ಚಿಮದ ಬಗ್ಗೆ ಭ್ರಮೆ, ಇವನ್ನು ಈ ದಾಳಿ ಅನಾವರಣಗೊಳಿಸಿದ್ದು ಅದನ್ನೂ ತಿದ್ದಿಕೊಳ್ಳಲು ಒತ್ತಾಯಿಸುವ ಮೂಲಕ ಬಲಪಡಿಸಿದೆ.

6. ಈ ಕದನ ವಿರಾಮ ಮುಂದುವರೆಯಬಹುದೆ? ಪಶ್ಚಿಮ ಏಶ್ಯಾ ಮತ್ತು ಜಾಗತಿಕ ರಾಜಕೀಯ ದೀರ್ಘಕಾಲೀನ ಕೂಟ ನೀತಿಯ ಮೇಲೆ ಈ 12 ದಿನಗಳ ಯುದ್ಧದ ಪರಿಣಾಮವೇನು?

ಕದನ ವಿರಾಮಕ್ಕೆ ಈಗಾಗಲೇ ಹೇಳಿದ ಕಾರಣಗಳು ನಿಜವಾದರೆ ಮತ್ತು ಅವು ನಿಜವಾಗಿರುವಷ್ಟು ಕಾಲ ಕದನ ವಿರಾಮ ಮುಂದುವರೆಯಬಹುದು. ಉದಾಹರಣೆಗೆ ಇಸ್ರೇಲಿ ಜನತೆಯಿಂದ, ಕೊಲ್ಲಿ ದೇಶಗಳ ದೊರೆ ಮತ್ತು ಜನತೆಯಿಂದಲೂ ಮತ್ತೊಂದು ಯುದ್ಧಕ್ಕೆ ತೀವ್ರ ವಿರೋಧ ಬರಬಹುದು. ಈ ಪ್ರದೇಶದ ಯುಎಸ್ ನೆಲೆಗಳ ಮೇಲೆ ದಾಳಿಯ ಭೀತಿ ಟ್ರಂಪ್ ಮತ್ತೆ ಇಂತಹ ದುಸ್ಸಾಹಸಕ್ಕೆ ಕೈಹಾಕುವ ಮೊದಲು ಎರಡು ಬಾರಿ ಯೋಚಿಸಬಹುದು. ಇಸ್ರೇಲಿನಲ್ಲಿ ಸರಕಾರ ಬದಲಾವಣೆಯಾಗಿ ನೇತನ್ಯಾಹು ಅಧಿಕಾರ ಕಳೆದುಕೊಳ್ಳುವ ಸಾಧ್ಯತೆಯೂ ಇದೆ. ಯುಎಸ್–ಇಸ್ರೇಲ್ ಕೂಟ ಇರಾನಿನ ಮಿಲಿಟರಿ ಬಲದ ಬಗ್ಗೆ ಮಾಡಿದ ಕಡಿಮೆ ಅಂದಾಜು ಅವರನ್ನು ಎಚ್ಚರಿಕೆಯಿಂದ ಮುಂದಿನ ಹೆಜ್ಜೆ ಇಡುವಂತೆ ಮಾಡಬಹುದು. ತೀವ್ರ ಅತೃಪ್ತಿಯ ನಡುವೆಯೂ ಇರಾನಿನಲ್ಲಿ ಕೈಗೊಂಬೆ ಸರಕಾರದ ರಚನೆ (ಇದು ಯುಎಸ್–ಇಸ್ರೇಲಿ ಕೂಟದ ನಿಜವಾದ ಗುರಿ) ಕಷ್ಟಸಾಧ್ಯ ಎಂಬುದೂ ಹಿಂಜರಿತಕ್ಕೆ ಕಾರಣವಾಗಬಹುದು. ಅಥವಾ ಈ ಬಾರಿಯ ನ್ಯೂನತೆ ಕಡಿಮೆ ಅಂದಾಜುಗಳನ್ನು ಸರಿಪಡಿಸಿಕೊಂಡು ಸ್ವಲ್ಪ ಸಮಯದ ನಂತರ ಮತ್ತೆ ಪೂರ್ಣ ತಯಾರಿಯೊಂದಿಗೆ ಇರಾನಿನ ಮೇಲೆ ಮತ್ತೆ ಹಠಾತ್ ದಾಳಿ ಮಾಡಬಹುದು.

ಈ ಯುದ್ಧವನ್ನು ಬಳಸಿ ಈಗಾಗಲೇ ಐಎಇಎ ಜತೆ ಅಣು ಸ್ಥಾವರ ಪರೀಕ್ಷಣೆ ಇತ್ಯಾದಿ ಸಹಕಾರ ಅಮಾನತಿನಲ್ಲಿಡಲು ಅಥವಾ ರದ್ದು ಮಾಡಲು ಇರಾನಿ ಪಾರ್ಲಿಮೆಂಟು ಈಗಾಗಲೇ ಸರಕಾರಕ್ಕೆ ಅಧಿಕಾರ ಕೊಟ್ಟಿದೆ. ಎನ್‌ಪಿಟಿ ಯಿಂದಲೂ ಇರಾನ್ ಹೊರಬರುವ ಸೂಚನೆಗಳಿವೆ. ಅಣುಸ್ಥಾವರಗಳ ಮೇಲೆ ಯುಎಸ್–ಇಸ್ರೇಲಿ ದಾಳಿಯು ಎನ್‌ಪಿಟಿ ಯನ್ನು ಅರ್ಥಹೀನಗೊಳಿಸಿದೆ. ಇರಾನಿ ವಿದೇಶಿ ಸಚಿವರು ಅಣು ಸ್ಥಾವರಗಳ ನಾಶಕ್ಕೆ ಪರಿಹಾರ ಕೊಡಬೇಕೆಂದು ಒತ್ತಾಯಿಸಿದ್ದಾರೆ. ಐಎಇಎ ಪರೀಕ್ಷಣೆ ಮತ್ತು ಎನ್‌ಪಿಟಿ ಯಿಂದ ಸ್ವತಂತ್ರವಾದ ಮೇಲೆ, ಇರಾನ್ ಮುಂದೆ ಹಲವು ಆಯ್ಕೆಗಳಿವೆ. ಅಣು ಸ್ಥಾವರಗಳು ನಾಶವಾಗಿರುವುದರಿಂದ ಯೋಜನೆ ಸ್ಥಗಿತಗೊಂಡಿದೆ ಎಂದು ಹೇಳಿ, ಐಎಇಎ ಪರೀಕ್ಷಣೆಯಿಂದ ಮುಕ್ತವಾದ ಅಣುಶಕ್ತಿಗೆ ಮಾತ್ರ ಬಳಸುತ್ತೇವೆ ಎಂದು ಹೇಳುತ್ತಾ, ಗುಪ್ತವಾಗಿ ಅಣ್ವಸ್ತ್ರ ತಯಾರಿಕೆಗೆ ಯೋಜಿಸಬಹುದು. (ಭಾರತ ಎನ್‌ಪಿಟಿಗೆ ಸಹಿ ಮಾಡದೆ, ಇದನ್ನೇ ಮಾಡಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು) ಇಲ್ಲವೆ ಆರ್ಥಿಕ ದಿಗ್ಬಂಧನ ಕೂಡಲೇ ತೆಗೆಯಿರಿ, ಇಲ್ಲದಿದ್ದರೆ ತಾನು ಅಣ್ವಸ್ತ್ರ ತಯಾರಿಕೆಗೆ ಸ್ವತಂತ್ರವೆಂದು ಘೋಷಿಸಬಹುದು. ಒಟ್ಟಾರೆಯಾಗಿ ಯುಎಸ್ ಮತ್ತು ಯುರೋಪ್ ಜತೆ ಮಾತುಕತೆ–

ಬುದ್ಧಿಜೀವಿಗಳ ಮೇಲೆ ಹೆಚ್ಚುತ್ತಿರುವ ನವ–ಫ್ಯಾಸಿಸಂನ ದಾಳಿಗಳು..........

ಪುಟ 13 ರಿಂದ

ವಿಸರ್ಜಿಸಲ್ಪಡುತ್ತವೆ. ಭಾರತದಲ್ಲಿ ಬುದ್ಧಿಜೀವಿಗಳ ಮೇಲೆ ಇಟ್ಟ ಗೌರವವು ಬಂಡವಾಳಶಾಹಿ–ಪೂರ್ವ ಕಾಲದಿಂದಲೂ ಸಮುದಾಯ ಪ್ರಜ್ಞೆಯಿಂದ ಮೂಡಿಬಂದ ಒಂದು ಪರಂಪರೆಯಾಗಿದೆ. ದೇಶದಲ್ಲಿ ಪೂರ್ಣ ಪ್ರಮಾಣದ, ಅಡೆತಡೆಯಿಲ್ಲದ ಬಂಡವಾಳಶಾಹಿಯನ್ನು ಹೇರಿರುವ ನವ ಉದಾರವಾದಿ ಆಳ್ವಿಕೆಯು, ಬಂಡವಾಳಶಾಹಿ–ಪೂರ್ವ ಕಾಲದಿಂದಲೂ ಒಂದು ಪರಂಪರೆಯಾಗಿ ಬಂದ ಈ ಸಮುದಾಯದ ಪ್ರಜ್ಞೆಯನ್ನು ಅಳಿಸಿ ಹಾಕಿದೆ ಮತ್ತು ಬುದ್ಧಿಜೀವಿಗಳು ಮತ್ತು ದುಡಿಯುವ ಜನರ ನಡುವಿನ ಅಂತರವನ್ನು ಹಿಗ್ಗಿಸಿದೆ.

ಮೂರನೆಯದಾಗಿ, ಈ ವೈಯಕ್ತೀಕಕರಣದ ಪ್ರವೃತ್ತಿಯು ಬೆಳೆಯುತ್ತಿರುವ ಸಮಯದಲ್ಲೇ ಜಾಗತೀಕರಣದ ವಿದ್ಯಮಾನವೂ ಸಂಭವಿಸಿತು. ಇದು ಬುದ್ಧಿಜೀವಿಗಳ ದೊಡ್ಡ ವಿಭಾಗಗಳನ್ನು ಅವರ ಸುತ್ತಲಿನ ಸಮಾಜದ ಬೇರುಗಳಿಂದ ದೂರ ಸರಿಸಿ ವಿಶ್ವ ಮಟ್ಟದಲ್ಲಿ ಬುದ್ಧಿಜೀವಿಗಳು ಪರಸ್ಪರ ಸಂಬಂಧ ಕಲ್ಪಿಸಿಕೊಳ್ಳುವ ಪ್ರವೃತ್ತಿಯನ್ನು ಉಂಟುಮಾಡಿತು. ಇದೂ ಸಹ ಅವರನ್ನು ದೇಶದ ದುಡಿಯುವ ಜನರಿಂದ ಮತ್ತಷ್ಟು ದೂರ ಸರಿಸಿತು.

ಈ ಎಲ್ಲಾ ಕಾರಣಗಳಿಂದಾಗಿ, ದುಡಿಯುವ ಜನರು ಮತ್ತು ಬುದ್ಧಿಜೀವಿಗಳ ನಡುವಿನ ಅಂತರ ಹೆಚ್ಚುವಲ್ಲಿ ನವ–ಉದಾರವಾದವು ಕೊಡುಗೆ ನೀಡಿದೆ. ಈ ಕೊಡುಗೆಯು, ಸಾಮಾನ್ಯವಾಗಿ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಸಹಿಷ್ಣುತೆಯ ರಕ್ಷಣೆಗಾಗಿ ಮುಂದಾಗುತ್ತಿದ್ದ ಬುದ್ಧಿಜೀವಿಗಳ ಮೇಲೆ ನವ–ಫ್ಯಾಸಿಸಂ ದಾಳಿಯನ್ನು ಸುಲಭಗೊಳಿಸಿದೆ. ಈ ಕೊಡುಗೆಯು ನವ–ಫ್ಯಾಸಿಸಂಗಾಗಿ ಭೂಮಿಕೆಯನ್ನು ನವ–ಉದಾರವಾದವು ಸಿದ್ಧಪಡಿಸಿದ ಇನ್ನೊಂದು ಮಾರ್ಗವಾಗಿದೆ.

ನವ–ಉದಾರವಾದದ ಬಿಕ್ಕಟ್ಟಿನಿಂದಾಗಿಯೇ

ದುಡಿಯುವ ಜನರು ಬುದ್ಧಿಜೀವಿಗಳ ಬಗ್ಗೆ ಅವರು ಹೊಂದಿದ್ದ ಗೌರವವನ್ನು ಕಳೆದುಕೊಳ್ಳುವುದು ಒಂದು ಸ್ವಾಗತಾರ್ಹ ಬೆಳವಣಿಗೆ, ಏಕೆಂದರೆ ಅದು ಸಾಮಾಜಿಕ ಭಿನ್ನತೆಗಳನ್ನು ಮತ್ತು ಸಾಮಾಜಿಕ ಅಸಮಾನತೆಗಳನ್ನು ಅಳಿಸಿಹಾಕುತ್ತದೆ ಎಂದು ಭಾವಿಸಬಹುದು. ಇದು ತಪ್ಪು. ಸಮಾನತೆಯಲ್ಲಿ ನಂಬಿಕೆ ಇಡುವ ಒಂದು ಸಮಾಜದಲ್ಲಿ ಬುದ್ಧಿಜೀವಿಗಳು ಎಂದು ಕರೆಯಲಾಗುವ ಒಂದು ಪ್ರತ್ಯೇಕ ವಿಶೇಷ ವಿಭಾಗ ಇರಬೇಕಾಗಿಲ್ಲ, ಏಕೆಂದರೆ, ಸಮಾಜದ ಪ್ರತಿಯೊಬ್ಬರೂ ದುಡಿಯುವವರೂ ಆಗಿರುತ್ತಾರೆ ಮತ್ತು ಬುದ್ಧಿಜೀವಿಗಳೂ ಆಗಿರುತ್ತಾರೆ (ಕಮ್ಯುನಿಸ್ಟರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಕಾರಣ ಇದುವೇ ತಾನೇ). ಸಮತ್ವದ ಹೆಸರಿನಲ್ಲಿ ಬುದ್ಧಿಜೀವಿಗಳನ್ನು ಸುಮ್ಮನೇ ಟೀಕಿಸುವುದು ಮತ್ತು ತೆಗಳುವುದು ಒಂದು ಸಮಾಜವನ್ನು ಚುಕ್ಕಾಣಿಯಿಲ್ಲದ ಸಮಾಜವಾಗಿ ಮಾಡುತ್ತದೆ ಮತ್ತು ಅದನ್ನು ನವ–ಫ್ಯಾಸಿಸ್ಟರು ಮತ್ತು ಪಂಡಿತರೆನಿಸಿಕೊಳ್ಳುವ ವಂಚಕರ ಪ್ರಭಾವಕ್ಕೆ ಒಡ್ಡುತ್ತದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ವಿಚಾರಗಳು ಒಂದು ಸಣ್ಣ ಗುಂಪಿನೊಳಗೆ ಕೇಂದ್ರೀಕೃತಗೊಂಡು ಅದರ ಏಕಸ್ವಾಮ್ಯ ನಿಯಂತ್ರಣಕ್ಕೆ ಒಳಪಡುವುದರ ಬದಲು, ವಿಚಾರಗಳನ್ನು ಜನರ ನಡುವೆ ಪ್ರಚುರಗೊಳಿಸುವುದು ಮತ್ತು ಇನ್ನೊಂದು ಕಡೆಯಲ್ಲಿ ವಿಚಾರಗಳನ್ನು ನಾಶ ಪಡಿಸುವುದು–ಇವುಗಳ ನಡುವೆ ಒಂದು ಮೂಲಭೂತ ವ್ಯತ್ಯಾಸವಿದೆ.

ವಾಸ್ತವವಾಗಿ, ಅರ್ಥಶಾಸ್ತ್ರಜ್ಞ ಜೆ.ಎಂ. ಕೀನ್ಸ್ ಅವರಂಥಹ ಸೂಕ್ಷ್ಮ ದೃಷ್ಟಿಯುಳ್ಳ ಉದಾರವಾದಿ ಬರಹಗಾರರೂ ಸಹ, ಒಂದು ಬಂಡವಾಳಶಾಹಿ ಸಮಾಜದಲ್ಲಿ ಸಾಮಾಜಿಕ ಸೂಕ್ಷ್ಮತೆಯುಳ್ಳ ಬುದ್ಧಿಜೀವಿಗಳನ್ನು ಹೊಂದಿರುವುದರ ಪ್ರಾಮುಖ್ಯತೆಯನ್ನು ತೀಕ್ಷ್ಣವಾಗಿ ಅರಿತಿದ್ದರು. ವ್ಯವಸ್ಥೆಯನ್ನು ಸರಿಪಡಿಸಲು ಮತ್ತು ಅದರ ದೋಷಗಳನ್ನು ನಿವಾರಿಸಲು ಸಮಾಜದಲ್ಲಿ ಸಾಕಷ್ಟು ಪ್ರಭಾವ ಹೊಂದಿರುವ ಇಂತವರನ್ನು "ವಿದ್ಯಾವಂತ ಬೂರ್ಜ್ವಾ" ವರ್ಗ ಎಂದು ಅವರು ಕರೆದರು. ನವ ಉದಾರವಾದಿ ಆಳ್ವಿಕೆಯಡಿಯಲ್ಲಿ, ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿಯೂ ಸಹ, ಸಮಾಜದಲ್ಲಿ ಪ್ರಭಾವವನ್ನು ಹೊಂದಿರದ, ಸ್ವಾರ್ಥಪರರೂ ಮತ್ತು ಸಾಮಾಜಿಕ–ಅಸೂಕ್ಷ್ಮಿಗಳೂ ಆದ ಬುದ್ಧಿಜೀವಿಗಳ ಸೃಷ್ಟಿಯು ಇತ್ತೀಚಿನ ಬಂಡವಾಳಶಾಹಿಯ ಪ್ರಮುಖ ವೈರುಧ್ಯಗಳ ಪೈಕಿ ಒಂದು. ಈ ವೈರುಧ್ಯವು ಭಾರತದಂತಹ ದೇಶಗಳಲ್ಲಿ ಖಂಡಿತವಾಗಿಯೂ ನವ–ಫ್ಯಾಸಿಸಂನ ಬೆಳವಣಿಗೆಗೆ ಅನುಕೂಲಕರವಾಗಿದೆ.

ದುಡಿಯುವ ಜನತೆ ಮತ್ತು ಬುದ್ಧಿಜೀವಿಗಳ ನಡುವಿನ ಅಂತರವನ್ನು ನಿವಾರಿಸಿ ನವ–ಫ್ಯಾಸಿಸಂ ಅನ್ನು ಸೋಲಿಸುವ ಪರಿಸ್ಥಿತಿಗಳನ್ನು ಸೃಷ್ಟಿಸುವುದು ನವ–ಉದಾರವಾದದ ಬಿಕ್ಕಟ್ಟಿನಿಂದಾಗಿಯೇ ಕಾರ್ಯಸಾಧ್ಯವಾಗುತ್ತದೆ. ಆದರೆ, ಬುದ್ಧಿಜೀವಿ ವರ್ಗವು ಈ ಬಿಕ್ಕಟ್ಟಿನ ಬಲಿಪಶುವಾಗುತ್ತದೆ ಮತ್ತು ಅದು ಹಿಂದೆ ಸಂಪಾದಿಸಿದ್ದ ತನ್ನ ಸವಲತ್ತು ಮತ್ತು ಸ್ಥಾನ–ಮಾನವನ್ನು ನವ ಉದಾರವಾದದ ಅಡಿಯಲ್ಲಿ ಕ್ರಮೇಣ ಕಳೆದುಕೊಳ್ಳುತ್ತಾ ಹೋಗುತ್ತದೆ. ನವ ಉದಾರವಾದೀ ಯುಗದಲ್ಲಿ ರೈತರ ವರಮಾನಕ್ಕೆ ಹೋಲಿಸಿದರೆ ಭಾರತದ ಶಿಕ್ಷಣ ವಲಯದ ಒಬ್ಬ ಬೋಧಕನ ಸಂಬಳವು ವೇಗವಾಗಿ ಏರಿಕೆಯಾದ ಬಗ್ಗೆ ಮೇಲೆ ಉಲ್ಲೇಖಿಸಲಾಗಿದೆ. ಆದರೆ ನವ ಉದಾರವಾದವು ಒಳಗಾಗಿರುವ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ, ಹೆಚ್ಚಿನದು ಎಂದು ಹೇಳಲಾಗುವ ಈ ಸಂಬಳಗಳನ್ನೂ ಸಹ ಸಕಾಲದಲ್ಲಿ ಕೊಡುತ್ತಿಲ್ಲ. ಕಳೆದ ಕೆಲವು ವರ್ಷಗಳಲ್ಲಿ ಭಾರತದಲ್ಲಿ ಉನ್ನತ ಶಿಕ್ಷಣ ವಲಯದ ಬೋಧಕರು ಎದುರಿಸುತ್ತಿರುವ ಆರ್ಥಿಕ ತೊಂದರೆಗಳೇ, ನವ–ಫ್ಯಾಸಿಸಂನ ಬಿಕ್ಕಟ್ಟಿನ ಕಾಲಮಾನದಲ್ಲಿ ಬುದ್ಧಿಜೀವಿಗಳು ಮತ್ತು ದುಡಿಯುವ ಜನರ ಭವಿಷ್ಯಗಳು ಪರಸ್ಪರ ತಳಕು ಹಾಕಿಕೊಳ್ಳುತ್ತವೆ ಎಂಬ ಅಂಶಕ್ಕೆ ಸಾಕ್ಷಿಯಾಗುತ್ತವೆ. ಮತ್ತು ಇದು ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ರಂಗಸ್ಥಳದ ಕೇಂದ್ರಕ್ಕೆ ಬಂದು ಬಿಡುತ್ತದೆ.

➘ ಚೌಕಾಶಿಗಳಲ್ಲಿ ಅಣುತಂತ್ರಜ್ಞಾನವನ್ನು ದಾಳವಾಗಿ ಬಳಸಬಹುದು. ಇರಾನ್ ಒಳಗೆ ಸಹ ಅಣ್ವಸ್ತ್ರ ತಯಾರಿಕೆಗೆ ಹೆಚ್ಚಿನ ಒತ್ತಡ ಬರಬಹುದು. ಈ ವರೆಗೆ ಪರಮ ನಾಯಕ ಖಮೇನಿ ಮತ್ತು ಸಾಂಪ್ರದಾಯಿಕ ನಾಯಕತ್ವ ಅಣ್ವಸ್ತ್ರಗಳು ಇಸ್ಲಾಂ–ವಿರೋಧಿ ಎಂಬ ಧಾರ್ಮಿಕ–ನೈತಿಕ ಕಾರಣಕ್ಕೆ ಅಣ್ವಸ್ತ್ರ ಕಾರ್ಯಕ್ರಮಕ್ಕೆ ಅನುಮತಿ ಕೊಟ್ಟಿರಲಿಲ್ಲ ಎನ್ನಲಾಗಿದ್ದು, ಇದು ಬದಲಾಗುವುದೇ ಎಂದು ಕಾದು ನೋಡಬೇಕಾಗಿದೆ. ಇರಾನ್ ಸಹ 12 ದಿನಗಳ ಯುದ್ಧದಲ್ಲಿ ನಾಶವಾದ ಮತ್ತು ಅದರಿಂದ ಕಲಿತ ಪಾಠಗಳ ಆಧಾರದ ಮೇಲೆ ಮಿಲಿಟರಿ ಬಲ ಮತ್ತೆ ಕಟ್ಟಿಸಿ ಹೆಚ್ಚಿಸಬಹುದು. ಆ ಮೂಲಕ ಇಸ್ರೇಲಿನಿಂದ ಮುಂದಿನ ಹಠಾತ್ ದಾಳಿಗೆ ಸಿದ್ಧವಾಗಬಹುದು. ಅಥವಾ ತಾನೇ ಹಠಾತ್ ದಾಳಿ ಮಾಡಬಹುದು. ಹೀಗೆ ಎರಡೂ ಕಡೆಯಿಂದ ಸದ್ಯಕ್ಕೆ ಕದನವಿರಾಮ ಮುಂದುವರೆಯಬಹುದು. ಆದರೆ ಈ ವಿರಾಮವನ್ನು ಮುಂದಿನ ಯುದ್ಧದ ತಯಾರಿಗೆ ಬಳಸುವ ಸಾಧ್ಯತೆ ಹೆಚ್ಚು.

ಯುಎಸ್–ಇಸ್ರೇಲ್ ಮತ್ತೆ ಅಣ್ವಸ್ತ್ರ ಒಪ್ಪಂದಕ್ಕೆ ಒತ್ತಾಯ ಹೇರಬಹುದು. ಯುರೇನಿಯಂ ಶುದ್ಧೀಕರಣ ಮಾಡಲೇಬಾರದು ಎಂಬ ಷರತ್ತಿಗೆ ಅಂಟಿಕೊಂಡರೆ ಅಥವಾ ಇರಾನ್ ಎನ್‌ಪಿಟಿಯಿಂದ ಹೊರಬಂದರೆ ಮಾತುಕತೆ ಪೂರ್ಣವಾಗಿ ಮುರಿದು ಬೀಳಬಹುದು, ಸಂಘರ್ಷದ ವಾತಾವರಣ ಉಂಟಾಗಬಹುದು.

ಯುಎಸ್–ಇಸ್ರೇಲ್ ಕೂಟ ಮತ್ತು ಇರಾನ್ ಸಂಘರ್ಷಕ್ಕೆ ಬಲವಾದ ಮೂಲಭೂತ ಕಾರಣಗಳಿವೆ. ಅವುಗಳನ್ನು ಹೋಗಲಾಡಿಸದೆ ಕದನ ವಿರಾಮ ಬಹಳ ದೀರ್ಘ ಕಾಲ ನಿಲ್ಲುವ ಸಾಧ್ಯತೆ ಕಡಿಮೆ.

ಪಶ್ಚಿಮ ಏಶ್ಯಾದ ಅಪಾರ ತೈಲ ನಿಕ್ಷೇಪ ಮತ್ತು ಅದರಿಂದ ಸೃಷ್ಟಿಯಾಗಿರುವ ಸಂಪತ್ತಿನ ಮೇಲೆ ತನ್ನ ನಿಯಂತ್ರಣ ಖಾಯಂ ಆಗಿರಬೇಕು. ತೈಲ ವ್ಯಾಪಾರ ಮತ್ತು ಪೆಟ್ರೋ ಡಾಲರ್ ವ್ಯವಸ್ಥೆಯ ಮೂಲಕ ಪ್ರದೇಶದ ಸಂಪತ್ತನ್ನು ವರ್ಗಾಯಿಸಲು ಯುಎಸ್ ಸಾಮ್ರಾಜ್ಯಶಾಹಿಗೆ ತಲೆಬಾಗಿಸುವ ಸರಕಾರಗಳು ಈ ಪ್ರದೇಶದ ದೇಶಗಳಲ್ಲಿರಬೇಕು. ಇಡೀ ಪ್ರದೇಶದ ಮತ್ತು ಹೀಗೆ ತಲೆಬಾಗದ ಸರಕಾರಗಳನ್ನು ಬೆದರಿಸಲು ಇರುವ ಪಾಳೆಯಗಾರನೇ ಇಸ್ರೇಲ್. ಇದಕ್ಕಾಗಿಯೇ ಹಿಂದಿನ ಸಾಮ್ರಾಜ್ಯಶಾಹಿ ಬ್ರಿಟನ್–ಫ್ರಾನ್ಸ್ ಮತ್ತು ಈಗಿನ ಸಾಮ್ರಾಜ್ಯಶಾಹಿ ಯುಎಸ್ ಸೇರಿಯೇ ಝಿಯೊನಿಸ್ಟ್ ಪ್ರಭುತ್ವ ಇಸ್ರೇಲ್ ಅನ್ನು ಹುಟ್ಟುಹಾಕಿರುವುದು. ಎಲ್ಲ ಪ್ಯಾಲೆಸ್ಟನ್ನರನ್ನು ಓಡಿಸಿ ಜ್ಯೂ ಗಳಿಗೆ ಸೀಮಿತವಾದ ಮಹಾ ಇಸ್ರೇಲ್ ಕಟ್ಟುವುದು ಅವರ ಕನಸು.

ಕೊಲ್ಲಿ ದೇಶಗಳ ದೊರೆಗಳಾದ ಶೇಕ್‌ಗಳಂತೂ ಎಂದಿನಿಂದಲೂ ತಲೆಬಾಗಿ ನಡೆಯುತ್ತಿದ್ದಾರೆ. ತಲೆಬಾಗದ ಸರಕಾರಗಳನ್ನು ಉರುಳಿಸುವುದು ಯುಎಸ್‌ನ ವಿದೇಶ ನೀತಿಯ ಭಾಗ. ಈಜಿಪ್ಟ್, ಇರಾನ್ (1953), ಇರಾಕ್, ಲಿಬ್ಯಾ, ಸಿರಿಯಾ, ಲೆಬನಾನ್, ಜೋರ್ಡಾನ್. ಹೀಗೆ ಆಯಾ ಕಾಲದಲ್ಲಿ ತಲೆಬಾಗದ ಸರಕಾರಗಳನ್ನು ಉರುಳಿಸಲಾಗಿದೆ. ಈಗ ತಲೆಬಾಗದ ಮತ್ತು ಪ್ಯಾಲೆಸ್ಟೀನ್ ಬೆಂಬಲಿಸುವ ಒಂದೇ ಶಕ್ತಿ ಇರಾನ್. ಅದನ್ನು ಮಟ್ಟ ಹಾಕಿದರೆ ಮಾತ್ರ ಇಡೀ ಪಶ್ಚಿಮ ಏಶ್ಯಾದ ಮೇಲೆ ಪೂರ್ಣ ಅಧಿಪತ್ಯ ಸಾಧ್ಯ.

ಈಗಿನ ಸಂದರ್ಭದಲ್ಲಿ ಇರಾನ್‌ನ್ನು ಗುರಿ ಮಾಡಲು ಜಾಗತಿಕ ಕಾರಣಗಳೂ ಇವೆ. ಜಗತ್ತು ವೇಗವಾಗಿ ಬಹುಧ್ರುವೀಯ ಆಗುತ್ತಿದೆ. ಆರ್ಥಿಕವಾಗಿ ಜಾಗತಿಕ ಉತ್ತರ (ಜಿ7) ಅವನತಿಯಾಗುತ್ತಿದ್ದು ಅಥವಾ ಸ್ಥಗಿತವಾಗುತ್ತಿದ್ದು, ಜಾಗತಿಕ ದಕ್ಷಿಣ (ಅಭಿವೃದ್ಧಿಶೀಲ ದೇಶಗಳು) ಆರ್ಥಿಕವಾಗಿ ವೇಗವಾಗಿ ಬೆಳೆಯುತ್ತಿದೆ. ಮೊದಲ ಬಾರಿಗೆ ಜಾಗತಿಕ ದಕ್ಷಿಣದ ಜಿಡಿಪಿ ಜಾಗತಿಕ ಉತ್ತರದ ಜಿಡಿಪಿಯನ್ನು ದಾಟಿವೆ. ಜಾಗತಿಕ ಉತ್ತರದ ಮಾರುಕಟ್ಟೆ, ಹೂಡಿಕೆ, ತಂತ್ರಜ್ಞಾನ, ಹಣಕಾಸು ನೆರವು ಇಲ್ಲದೆ ಸ್ವತಂತ್ರವಾಗಿ ಬೆಳೆಯಬಲ್ಲ ಕ್ಷಮತೆಯನ್ನು ಈಗ ಜಾಗತಿಕ ದಕ್ಷಿಣ ಹೊಂದಿದೆ. ಇದರ ಪರಿಣಾಮವಾಗಿ ಎರಡನೇ ಮಹಾಯುದ್ಧದ ನಂತರ ಜಾಗತಿಕ ಉತ್ತರ ರಚಿಸಿದ್ದ ಅಂತರರಾಷ್ಟ್ರೀಯ ವ್ಯವಸ್ಥೆ ಕುಸಿದು ಬೀಳುತ್ತಿದೆ ಹೊಸ ಜಾಗತಿಕ ವ್ಯವಸ್ಥೆ ರೂಪುಗೊಳ್ಳುತ್ತಿದೆ. ಬ್ರಿಕ್ಸ್, ಎಸ್‌ಸಿಒ, ಅಪಡಾಲರೀಕರಣ–ಈ ಹೊಸ ವ್ಯವಸ್ಥೆಯ ಉದಾಹರಣೆಗಳು.

ಇರಾನ್ ಬ್ರಿಕ್ಸ್ ಭಾಗವಾಗಿದ್ದು ರಷ್ಯಾ, ಚೀನದ ಜತೆ ಆರ್ಥಿಕವಾಗಿ, ಮಿಲಿಟರಿಯಾಗಿ, ವ್ಯೂಹಾತ್ಮಕವಾಗಿ ಘನಿಷ್ಠ ಸಂಬಂಧ ಹೊಂದಿವೆ. ರಷ್ಯಾ, ಚೀನಾಗಳು ಯುರೋಪಿನೊಂದಿಗೆ ಸೇರಿ 'ಬೆಲ್ಟ್ ಅಂಡ್ ರೋಡ್ ಇನಿಶಿಯೇಟಿವ್' ಮೂಲಕ ಯುರೇಶಿಯನ್ ಆರ್ಥಿಕ ಕೂಟ ರಚಿಸುವ ಪ್ರಯತ್ನದ ಮೇಲೆ ಯುಎಸ್ ಉಕ್ರೇನ್‌ನಲ್ಲಿ ಕೈಗೊಂಬೆ ಸರಕಾರ ಮತ್ತು ಯುದ್ಧಕ್ಕೆ ಪ್ರಚೋದನೆ ಕೊಡುವ ಮೂಲಕ ವಿಫಲಗೊಳಿಸಿದವು. ಇರಾನ್ ಬ್ರಿಕ್ಸ್‌ನ ಪ್ರಮುಖ ಸದಸ್ಯನಾಗಿದ್ದು, ಹೊಸ ಯುರೇಶಿಯನ್ ಕೂಟ ರಚಿಸುವ ಪ್ರಯತ್ನವನ್ನು ವಿಫಲಗೊಳಿಸುವ ಪ್ರಯತ್ನದ ಭಾಗವೇ ಇರಾಕ್ ಮೇಲೆ ಯುದ್ಧ. ಇರಾನ್ ರಷ್ಯಾದ ದಕ್ಷಿಣದ ಗಡಿಗೆ ಹತ್ತಿರವಾಗಿದ್ದು, ಅಲ್ಲಿ ಉಕ್ರೇನಿನಂತೆ ಕೈಗೊಂಬೆ ಸರಕಾರ ಸಾಧ್ಯವಾದರೆ ರಷ್ಯಾಕ್ಕೆ ಕಿರುಕುಳ ಕೊಡಬಹುದು. ಇರಾನಿನಲ್ಲಿ ಕೈಗೊಂಬೆ ಸರಕಾರ ಸಾಧ್ಯವಾದರೆ ಚೀನಾದ ತೈಲ ಪೂರೈಕೆಗೂ ಅಡ್ಡಿ ಮಾಡಬಹುದು. ಇತ್ತೀಚೆಗಷ್ಟೇ ಚೀನಾದಿಂದ ಇರಾನಿಗೆ ನೇರ ರೈಲು ಸಂಚಾರ ಆರಂಭವಾಗಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಇರಾನ್ ಮೇಲೆ ಯುದ್ಧವು, ಇರಾನ್, ರಷ್ಯಾ, ಚೀನಾ ಯುರೇಶಿಯನ್ ಕೂಟ ಮುರಿಯುವ ದೀರ್ಘಕಾಲೀನ ಗುರಿಯ ಒಂದು ಹೆಜ್ಜೆಯಾಗಿತ್ತು. ಹಾಗಾಗಿ ಈ ಗುರಿ ಇರುವವರೆಗೆ ಇರಾನ್ ಮೇಲೆ ಯುಎಸ್–ಇಸ್ರೇಲ್ ಕೂಟದ ಹದ್ದಿನ ಕಣ್ಣು ಇರುತ್ತದೆ.

ಯುಎಸ್, ಯುರೋಪ್, ಇಸ್ರೇಲ್‌ಗಳಲ್ಲಿ ಗುರಿಯನ್ನು ಬದಲಿಸುವ ತೀವ್ರ ರಾಜಕೀಯ ಬದಲಾವಣೆಗಳು (ಇವು ಅಸಾಧ್ಯವೇನಲ್ಲ) ಆಗದಿದ್ದರೆ ಈ ಗುರಿ ಮುಂದುವರೆಯುತ್ತದೆ.

ಅಪರೂಪದ ಸಿನಿಮಾ ಹೆಬ್ಬುಲಿ ಕಟ್.......

ಪುಟ 16 ರಿಂದ

ಅತ್ಯಂತ ಸೂಕ್ತವಾಗಿದೆ. ಮೊದಲರ್ಧದಲ್ಲಿ ಇದೊಂದು ಎಳೆಯರ ಪ್ರೇಮ ಕತೆ ಎನ್ನುವ ಭಾವನೆ ಹುಟ್ಟಿಸಿ, ವಿರಾಮದ ನಂತರ ಹಠಾತ್ತನೆ ತಿರುವು ಪಡೆಯುವ ಮೂಲಕ ಪ್ರೇಕ್ಷಕರನ್ನು ಜಾತಿ ಬದ್ಧ ವಾಸ್ತವದ ಬಗ್ಗೆ ತಟ್ಟಿ ಎಬ್ಬಿಸುತ್ತದೆ.

ತಿಳಿ ಹಾಸ್ಯ, ಕತೆಗೆ ತಕ್ಕ ವೇಗ, ನಾಯಕ ನಿಷ್ಠವಾಗಿ ಅನವಶ್ಯಕ ಫೈಟ್, ಡ್ಯಾನ್ಸ್‌ಗಳಿಲ್ಲದೆ ಇದ್ದರೂ ಮನರಂಜಕ ಅಂಶಗಳನ್ನು ತಿರುಳನ್ನು ಮೀರದಂತೆ ಒಳಗೊಂಡಿರುವ ಜಾಣ್ಮೆಯಿಂದ ಸಿನಿಮಾ ಕೊನೆಯವರೆಗೂ ಸಮಯದ ಅರಿವಾಗದಂತೆ ನೋಡಿಸಿಕೊಳ್ಳತ್ತದೆ. ಪ್ರೇಕ್ಷಕರು ಸಿನಿಮಾ ಇನ್ನೂ ಇದೆ ಎನ್ನುವ ನಿರೀಕ್ಷೆಯಲ್ಲಿರುವಾಗಲೇ ಕೊನೆಗೊಳ್ಳುತ್ತದೆ.

ಹಾಗೆಂದ ಕೂಡಲೇ ಕೊರತೆಗಳೇ ಇಲ್ಲ ಎಂದಲ್ಲ. ಉದಾಹರಣೆಗೆ ಆ ಪ್ರದೇಶದಲ್ಲಿ ಜನರ ನಡುವೆ ಜನಜನಿತವಾಗಿರುವ ಜಾತಿ ಬೇಧದ ವಿರುದ್ಧದ ತತ್ವಪದಗಳು, ಭಜನೆ ಮಂಡಲಿಗಳು, ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯನವರಂತಹ ಶರಣರ ಬಗ್ಗೆ ಬಸವಣ್ಣನವರ ವಚನಗಳನ್ನು ಸಿನಿಮಾದ ತಿರುಳಿಗೆ ವೈದೃಶ್ಯವಾಗಿ ಬಳಸಿಕೊಂಡರೆ ಚೆನ್ನಾಗಿರುತ್ತಿತ್ತು ಎಂದು ನನ್ನ ಭಾವನೆ. ಆದರೆ ಸಿನಿಮಾ ತಿರುಳನ್ನು ಚಿತ್ರಿಸುವ ಯಶಸ್ಸಿನ ಮುಂದೆ ಅವು ಗೌಣವಾಗುತ್ತವೆ.

ಆರಂಭದಲ್ಲಿಯೇ ಸೂಚಿಸಿರುವಂತೆ, ಪ್ರಗತಿಪರ ಸಾಹಿತ್ಯ, ದಲಿತ ಸಾಹಿತ್ಯ ಕೇವಲ ಓದುಗರ ಅರಿವನ್ನು ಮಾತ್ರ ಹೆಚ್ಚಿಸಬಲ್ಲುದು. ಆದರೆ ರಾಜ್ಯದ ಸಾಮಾಜಿಕ ಚಳುವಳಿ ಮತ್ತು ಸಂಘಟನೆಗಳಲ್ಲಿ ಓದಲಾರದ, ಅನಕ್ಷರಸ್ಥ, ಅರೆ ಬರೆ ಶಿಕ್ಷಣ ಪಡೆದ ಲಕ್ಷಗಟ್ಟಲೆ ಜನರಿದ್ದಾರೆ. ಅವರಿಗೆ ಸಾಮಾಜಿಕ ಅರಿವು ಮೂಡಿಸಲು ಈ ಚಿತ್ರ ಮತ್ತು ಇಂತಹ ಹಲವು ಚಿತ್ರಗಳು ಬಹಳ ಉಪಯುಕ್ತ. ಚಳುವಳಿಗಳು, ಸಂಘಟನೆಗಳು ತಮ್ಮ ಸದಸ್ಯರಿಗೆ, ಅದರಲ್ಲೂ ದಲಿತೇತರರಿಗೆ ಈ ಚಿತ್ರವನ್ನು ನೋಡಲು ಪ್ರೇರೇಪಿಸುವ ಮೂಲಕ, ಅದರ ಬಗ್ಗೆ ಚರ್ಚಿಸುವ ಅವಕಾಶ ಕಲ್ಪಿಸುವ ಮೂಲಕ ಈ ಚಿತ್ರವನ್ನು ಮಾಸ್ ಎಜುಕೇಶನ್‌ನ ಸಾಧ್ಯತೆಯನ್ನು ಅನ್ವೇಷಿಸಬೇಕು.

NEW No. MAG(3)/NPP/205/2021-2022
JANASHAKTHI KANNADA VARA PATRIKE July 7-13, 2025 Price: Rs. 10/- Date of Publication: 4 July 2025 RNI No. KARKAN/2006/17926 Posted on 08-07-2025
Posted at BG PSO, BG - 560026 **Posted at Periodical Rate -** Rs. 2

ಅಪರೂಪದ ಸಿನಿಮಾ ಹೆಬ್ಬುಲಿ ಕಟ್
ಕ್ಷೌರದ ಕಾರಣಕ್ಕಾಗಿ ದೌರ್ಜನ್ಯ ಅನುಭವಿಸುವ ದಲಿತ ಕಥನ

'ಈ ಸಿನಿಮಾ ಗೆಲ್ಲದಿದ್ದರೆ ಕನ್ನಡಿಗರು ಸೋತಂತೆ' – ನೀನಾಸಂ ಸತೀಶ್

ಜಿ.ಎನ್. ನಾಗರಾಜ್



ನೆರೆಯ ತಮಿಳುನಾಡಿನಲ್ಲಿ, ಕೇರಳದಲ್ಲಿ ಪ್ರಗತಿಪರ ಸಿನಿಮಾಗಳನ್ನು ನೋಡಿ ಕನ್ನಡಿಗರು ಅಸೂಯೆ ಪಡುವಂತಾಗಿತ್ತು. ಆದರೆ ಕನ್ನಡದಲ್ಲಿಯೂ ಅಂತಹ ಸಿನಿಮಾ ಮಾಡುವ ಧೈರ್ಯ ತೋರಿಸಿದ್ದಾರೆ. ಕನ್ನಡದಲ್ಲಿ ಕುವೆಂಪುರವರ ಬರಹಗಳಲ್ಲಿ ಶೂದ್ರ ಬದುಕಿನ ಅನಾವರಣ, ದಲಿತರ ಬದುಕು, ಅವರ ಮೇಲಿನ ದೌರ್ಜನ್ಯಗಳನ್ನು ಬಿಂಬಿಸುವ ಸಾಹಿತ್ಯ, ಕ್ರಾಂತಿಗೀತೆಗಳು ಕನ್ನಡದ ಸಾಹಿತ್ಯದ ಓದುಗರ ಸಾಮಾಜಿಕ ಅರಿವನ್ನು ಬೆಳೆಸಿವೆ. ಆದರೆ ಓದುಗರಲ್ಲದ ಕನ್ನಡಿಗರು, ಸ್ವತಃ ದಲಿತರ ಮುಂದೆ ದಲಿತ ಬದುಕಿನ ಸಂಕಟಗಳನ್ನು ಬಿಂಬಿಸುವ ವಸ್ತುವಿನ ಬಗ್ಗೆ ಸಿನಿಮಾ ಮಾಡುವ ಬಹಳ ಪ್ರಯತ್ನಗಳೇನೂ ಆಗಿಲ್ಲ. ಚೋಮನ ದುಡಿಯಂತಹ ಹೊಸ ಅಲೆಯ ಕಲಾ ಚಿತ್ರಗಳೂ ಕೂಡಾ ಕ್ಲಾಸ್ (ಬುದ್ಧಿ ಜೀವಿ) ಪ್ರೇಕ್ಷಕರನ್ನು ಮಾತ್ರ ಸೆಳೆಯುವಂತಹುದು. ಅಂತಹ ಸಂದರ್ಭದಲ್ಲಿ ದಲಿತರ ಬದುಕಿನ ಸಂಕಟಗಳ ಬಗ್ಗೆ ಒಂದು ಜನಪ್ರಿಯ ಸಿನಿಮಾ ಮಾಡಲು ಗಣನೀಯ ದಿಟ್ಟತನ ಬೇಕು.

ಅಂತಹ ದಿಟ್ಟತನ ಮತ್ತು ಬದ್ಧತೆ ತೋರಿದ್ದಾರೆ "ಹೆಬ್ಬುಲಿ ಕಟ್" ಸಿನಿಮಾ ನಿರ್ಮಾಪಕರು, ನಿರ್ದೇಶಕರು. ಈ ಸಿನಿಮಾ ಗೆದ್ದರೆ ಇಂತಹ ಕೆಲವಾದರೂ ಸಿನಿಮಾಗಳನ್ನು ನೋಡುವ ಅವಕಾಶ ಕನ್ನಡಿಗರಿಗೆ ಲಭ್ಯವಾಗುತ್ತದೆ.

ನಾನು ನಮ್ಮ ಚಳುವಳಿಯ ಸಂಗಾತಿಗಳ ಜೊತೆಗೆ ದಲಿತ ಪುರುಷರು ಕ್ಷೌರ ಮಾಡಿಸಿಕೊಳ್ಳುವಾಗ ಹಲ್ಲೆಗೊಳಗಾದ ಹತ್ತಾರು ಪ್ರಸಂಗಗಳಲ್ಲಿ ಆ ಹಳ್ಳಿಗಳಿಗೆ ಭೇಟಿ ಮಾಡಿದ್ದೇನೆ. ದಲಿತ ಯುವಕರುಗಳ ಮೂಗು ಕತ್ತರಿಸಿದ, ಇತರ ರೀತಿಯ ದೈಹಿಕ ಹಿಂಸೆಗೊಳಗಾದ ನೋವು, ಅವರ ಒಳಗೇ ಉರಿಯುವ ಸಿಟ್ಟು, ಅಸಹಾಯಕತೆ, ಅದರ ಜೊತೆಗೆ ಆ ಹಳ್ಳಿಗಳ ಇಡೀ ದಲಿತ ಸಮುದಾಯ ಬಹಿಷ್ಕಾರ, ಮೊದಲಾದ ನಿಷೇಧಗಳನ್ನು ಅನುಭವಿಸುವುದನ್ನು ಕಣ್ಣಾರೆ ಕಂಡಿದ್ದೇನೆ. ದಲಿತ ಚಳುವಳಿ, ಕಮ್ಯುನಿಸ್ಟ್ ಚಳುವಳಿಗಳ ಸಂಗಾತಿಗಳು ಶಿಕ್ಷೆ, ಪರಿಹಾರಕ್ಕಾಗಿ ಪ್ರತಿಭಟನೆ ನಡೆಸಿದ್ದೇವೆ. ಹೆಬ್ಬುಲಿ ಕಟ್ ಸಿನಿಮಾ ನೋಡುವಾಗ ಆ ಎಲ್ಲ ಘಟನೆಗಳು ಕಣ್ಣ ಮುಂದೆ ಹಾದು ಹೋದವು.

ಚಿತ್ರದ ಮೊದಲ ಭಾಗ ಯುವಕ ಯುವತಿಯರ ಮೇಲೆ ಸಿನಿಮಾಗಳು ಬೀರುವ ಗಾಢ ಪ್ರಭಾವ, ಅದರಿಂದ ಹುಟ್ಟುವ ಸ್ಟೈಲ್, ಫ್ಯಾಷನ್ ಗೀಳುಗಳನ್ನು ಮನಮುಟ್ಟುವಂತೆ ಚಿತ್ರಿಸುತ್ತದೆ. ಅದರಲ್ಲೂ ಸಾಹಿತ್ಯದ ಅಭಿರುಚಿ, ಉತ್ತಮ ನಾಟಕಗಳು ಇತ್ಯಾದಿ ಸಾಂಸ್ಕೃತಿಕ ಪರಿಕರಗಳು ಲಭ್ಯವಾಗದ ಸ್ಥಿತಿ, ಹಿರಿಯ ತಲೆಮಾರುಗಳಲ್ಲಿ ಬದುಕಿನ ಕೊರತೆಗಳನ್ನು ತುಂಬಿಕೊಳ್ಳಲು ಅಥವಾ ಮರೆಯಲು ಅವರಲ್ಲಿ ವಿಪುಲವಾಗಿದ್ದ ದಲಿತ ಜಾನಪದವೂ ಅವರಿಗೆ ದಕ್ಕುತ್ತಿಲ್ಲ. ಅಂತಹ ಸಾಂಸ್ಕೃತಿಕ ನಿರ್ವಾತವನ್ನು ಸಿನಿಮಾ, ಟಿವಿ ಧಾರಾವಾಹಿಗಳು ಆಳುತ್ತಿವೆ. ಈ ಸ್ಥಿತಿಯನ್ನು ಹದಿಹರೆಯದವರ ತುಡಿತಗಳ ಜೊತೆಗೆ ಫ್ಯಾಷನ್‌ನ ಪ್ಯಾಷನ್, ಹೇರ್ ಕಟಿಂಗ್ ಸ್ಟೈಲ್‌ಗಳ ಜೊತೆ ತಳುಕು ಹಾಕಿ ಚಿತ್ರಿಸಲಾಗಿದೆ.

ಹೆಬ್ಬುಲಿ ಸಿನಿಮಾದ ನಾಯಕನ ಹೇರ್ ಕಟ್ 'ಹೆಬ್ಬುಲಿ ಕಟ್' ಎಂಬ ಹೇರ್ ಸ್ಟೈಲ್ ಆಗಿ ವರ್ಲ್ಡ್ ಫೇಮಸ್ ಆಗುತ್ತದೆ. ಆ ಹೇರ್ ಕಟ್ ಮಾಡಿಸಿಕೊಂಡು ತನ್ನ ಪ್ರೀತಿಯ ಹುಡುಗಿಯ ಮನಸ್ಸನ್ನು ಸೆಳೆಯುವುದು ಆಗ ತಾನೇ ಮೀಸೆ ಚಿಗುರುತ್ತಿರುವ ದಲಿತ ಹುಡುಗನ ಬಯಕೆ. ಈ ಆಸೆ ಅವನಲ್ಲಿ ಅದಮ್ಯವಾಗಿ ಬೆಳೆಯುತ್ತಾ ಹೋಗುವ ಪ್ರಕ್ರಿಯೆಯನ್ನು ತಿಳಿಹಾಸ್ಯದೊಂದಿಗೆ ಪ್ರೇಕ್ಷಕರಿಗೆ ಮನದಟ್ಟು ಮಾಡುವ ಪ್ರಯತ್ನದಲ್ಲಿ ನಿರ್ದೇಶನದ ನೈಪುಣ್ಯ ಎದ್ದು ಕಾಣುತ್ತದೆ. ತನ್ನ ಹಳ್ಳಿಯ ಜೊತೆಗಾರ ಯುವಕರು, ಸಹಪಾಠಿಗಳಂತೆ ತಾನೂ ಚೆನ್ನಾಗಿ ಕಾಣಬೇಕು, ಹುಡುಗಿಯರ ಮುಂದೆ ಮಿಂಚಬೇಕು ಎಂಬ ಯುವ ಸಹಜ ಆಸೆಗೆ ಜಾತಿಯ ನಿರ್ಬಂಧಗಳಿರುವುದು ಅವನಿಗೆ ತಿಳಿದಿಲ್ಲ. ಎಲ್ಲರಂತೆ ತಾನೂ ಹೊಸ ಜಮಾನದ ಸ್ಟೈಲ್‌ಗಳನ್ನು ತಲೆಯ ಮೇಲೆ ಮೂಡಿಸುವುದರಲ್ಲಿ ಊರಿನ ಕ್ಷೌರಿಕ ಪ್ರಸಿದ್ಧನಾಗಿದ್ದಾನೆ. ಅವನ ಬಳಿಯೇ ತಾನೂ ಹೊಸ ಫ್ಯಾಷನ್ ಆದ ಹೆಬ್ಬುಲಿ ಕಟ್ ಮಾಡಿಸಿಕೊಳ್ಳಲು ಇರುವ ಅಡ್ಡಿ ಕೇವಲ ಕ್ಷೌರಿಕನ ದುಬಾರಿ ದರ ಮಾತ್ರ ಎಂದು ಅವನಿಗೆ ಅವನ ತಾಯಿ, ಸ್ವತಃ ಕ್ಷೌರಿಕ ಬಿಂಬಿಸಿದ್ದಾರೆ. ಆ ಹಣದ ಸಂಪಾದನೆಗಾಗಿ ಅವನು ಏನೆಲ್ಲಾ ಮಾಡುತ್ತಾನೆ ಎಂಬುದರಲ್ಲಿ ಆ ಬಯಕೆಯ ತೀವ್ರತೆ ವ್ಯಕ್ತವಾಗುತ್ತದೆ.

ಕೊನೆಗೆ ಶಾಲೆಗೆ ಚಕ್ಕರ್ ಹೊಡೆದು ಸಂಪಾದಿಸಿದ ಹಣ ತೆಗೆದುಕೊಂಡು ಹೋದಾಗ ಕ್ಷೌರಿಕನಿಗೆ ಎಡೆ ಬಿಡದೆ ತನ್ನ ಬೆನ್ನು ಬಿದ್ದ ಹುಡುಗನ ಮೇಲೆ ಕನಿಕರ ಮೂಡುತ್ತದೆ. ಯಾರಿಗೂ ಕಾಣದಂತೆ ಬೆಳಗಿನ ಜಾವ ಬರಲು ಹೇಳುತ್ತಾನೆ. ಆದರೆ ಅವನಿಗೆ ಹೆಬ್ಬುಲಿ ಕಟ್ ಮಾಡುತ್ತಿರುವಾಗ ಊರ ಗೌಡನ ಕಣ್ಣಿಗೆ ಇದು ಬೀಳುತ್ತದೆ. ಆಗ ಜಾತಿ, ಅಸ್ಪೃಶ್ಯತೆಯ ಭಯಾನಕತೆ ಆ ಗೌಡ ಇದ್ದಕ್ಕಿದ್ದಂತೆ ಬಾರಿಸುವ ಏಟುಗಳ ಮೂಲಕ ಹುಡುಗನ ಮುಂದೆ ದಿಢೀರನೆ ಸ್ಫೋಟಗೊಳ್ಳುತ್ತದೆ. ಅವನ ತಂದೆ ತಾಯಿಯರೂ ಕೂಡಾ ಗೌಡನಿಂದ ನಿಂದೆ, ಅವಮಾನಕ್ಕೊಳಗಾಗುತ್ತಾರೆ. ನಾನೂ, ಊರಿನ ದಲಿತೇತರರೆಲ್ಲರೂ ಕುಳಿತುಕೊಳ್ಳುವ ಕುರ್ಚಿಯ ಮೇಲೆ ಈ ಮುಟ್ಟಬಾರದವ ಕುಳಿತುಕೊಳ್ಳುವ ಅಹಂಕಾರ ತೋರಿಸಿದ್ದಾನೆ, ತಾನು ಅವನು ಕುಳಿತ ಕುರ್ಚಿಯ ಮೇಲೆ ಕುಳಿತುಕೊಳ್ಳುವುದು ಸಾಧ್ಯವೇ ಎನ್ನುವುದು ಅವನ ಆಕ್ಷೇಪಣೆ. ಆದರೆ ಅಷ್ಟೇ ಅಲ್ಲ ಎನ್ನುವುದು, "ಈಗ ಇಲ್ಲಿ ಯಾಕೆ ಕುಳಿತುಕೊಳ್ಳಬಾರದು ಎಂದು ಕೇಳುವವರು ಮುಂದೆ ನಮ್ಮ ಮನೆಗೆ ಯಾಕೆ ಬರಬಾರದು ಎಂದು ಕೇಳುತ್ತಾರೆ" ಎಂಬ ಅವನ ಮಾತಿನಲ್ಲಿ ಅಡಗಿದೆ. ಗೌಡನ ಮಗಳತ್ತ ಈ ಹುಡುಗ ಆಕರ್ಷಿತನಾಗಿದ್ದಾನೆ, ಅವಳ ಜೊತೆ ಈ ದಲಿತ ಹುಡುಗ ಕೇವಲ ಪ್ರಾಸಂಗಿಕವಾಗಿ ಮಾತನಾಡುವುದು ಗೌಡನ ಕಣ್ಣಿಗೆ ಬಿದ್ದಿರುತ್ತದೆ. ಆ ಹುಡುಗನ ತಲೆ ಬೋಳಿಸಬೇಕು ಊರ ಗೌಡನ ದೌರ್ಜನ್ಯಕ್ಕೆ ಊರಿನ ಮೇಲ್ಜಾತಿಯವರೂ ಸಹಕರಿಸುತ್ತಾರೆ.

ಈ ಘಟನೆ ನಡೆಯುತ್ತಿರುವ ಊರ ಬಯಲಿನ ಮುಂದೆಯೇ ಹಿಂದೂ ನಾವೆಲ್ಲ ಒಂದು ಎಂಬ ಗೋಡೆ ಬರಹ ಅಸ್ಪಷ್ಟವಾಗಿ ಕಾಣುತ್ತಿರುತ್ತದೆ.

ಹೀಗೆ ಈ ಹುಡುಗನಿಗೆ ಬಲವಂತವಾಗಿ ತಲೆ ಬೋಳಿಸಿಕೊಳ್ಳುತ್ತಿರುವುದು ಯಾವ ಗೌಡನ ಮಗಳನ್ನು ತನ್ನತ್ತ ಸೆಳೆದುಕೊಳ್ಳುವುದಕ್ಕಾಗಿ ಹೆಬ್ಬುಲಿ ಕಟ್ ಮಾಡಿಸಿಕೊಳ್ಳುವುದಕ್ಕಾಗಿ ನಾನಾ ಅವಸ್ಥೆ ಪಟ್ಟಿರುತ್ತಾನೋ ಆ ಹುಡುಗಿ ನೋಡುತ್ತಿರುವುದು ಅವನಿಗೆ ಗಾಯದ ಮೇಲೆ ಉಪ್ಪು ಸವರಿದಂತಾಗುತ್ತದೆ.

ತಲೆ ಬೋಳಿಸಿದ ಹುಡುಗನನ್ನು ಅವನ ತಂದೆ ತಾಯಿ ಅಳುತ್ತಾ ಆತುಕೊಂಡು ಕರೆದುಕೊಂಡು ಹೋಗುವುದರೊಂದಿಗೆ ಚಿತ್ರ ಕೊನೆಯಾಗುತ್ತದೆ.

ಇಡೀ ಚಿತ್ರಣ ಯಾವುದೇ ಅಬ್ಬರ ಆರ್ಭಟಗಳಿಲ್ಲದೆ ಕೊನೆಯಾಗುವುದರಿಂದ ಪ್ರೇಕ್ಷಕರ ಮನಸ್ಸಿಗೆ ತಟ್ಟುತ್ತದೆ. ಚಿಂತನೆಗೂ ಹಚ್ಚುತ್ತದೆ ಎಂದು ಭಾವಿಸಿದ್ದೇನೆ.

ಸಾಮಾನ್ಯವಾಗಿ ಕ್ಷೌರದ ಪ್ರಸಂಗಗಳಲ್ಲಿ ದೌರ್ಜನ್ಯ ಎಸಗುವುದು ಕ್ಷೌರಿಕ. ಅವನ ಮೇಲೆಯೇ ಅಪರಾಧದ ಎಲ್ಲ ಹೊಣೆ ಹೇರಲಾಗುತ್ತದೆ. ಆದರೆ ಈ ದೌರ್ಜನ್ಯ ಎಸಗುವುದರಲ್ಲಿ ಅವನು ಕೇವಲ ಸಮಾಜದಲ್ಲಿ ಮೆರೆಯುತ್ತಿರುವ ಅಸ್ಪೃಶ್ಯತೆಯ ಕೀಳು ವರ್ತನೆಗಳ ಒಂದು ಸಾಧನ ಮಾತ್ರ. ಈ ಚಿತ್ರದಲ್ಲಿ ಕ್ಷೌರಿಕನೂ ಕೂಡಾ ಗೌಡನಿಂದ ಹೊಡೆತ ತಿಂದು ಅವನೂ ಈ ಪಾಳೆಯಗಾರಿ ವ್ಯವಸ್ಥೆಯ, ಜಾತಿ ವ್ಯವಸ್ಥೆಯ ವಿಕ್ಟಿಮ್ ಎಂಬುದನ್ನು ಸ್ಪಷ್ಟವಾಗಿ ಬಿಂಬಿಸಲಾಗಿದೆ. ಸಮಾಜದಲ್ಲಿ ಎಸಗಲಾಗುತ್ತಿರುವ ದೌರ್ಜನ್ಯದ ಮೂಲ ಕಾರಣ ಯಾರು ಎಂಬುದನ್ನು ಗುರುತಿಸುವುದರಲ್ಲಿ ಮತ್ತೆ ಮತ್ತೆ ಸೋಲುತ್ತಿರುವ ಈ ಸಮಾಜದಲ್ಲಿ ಅದನ್ನು ಕಂಡುಕೊಳ್ಳುವ ಅಗತ್ಯವನ್ನೂ ಕೂಡಾ ಚಿತ್ರ ಈ ಮೂಲಕ ನಮಗೆ ಮನಗಾಣಿಸಲು ತಣ್ಣಗೆ ಪ್ರಯತ್ನಿಸಿದೆ.

ಊರ ಗೌಡ ಮೋಟಾರ್ ಸೈಕಲ್ ಮೇಲೆ ಕುಳಿತುಕೊಂಡು ಬರುವ ರೀತಿಯಲ್ಲಿ, ಚಪ್ಪಲಿ ಅಂಗಡಿಯ ಹಾಸಿನ ಮೇಲೆ ಹೊಲಸು ಮೆತ್ತಿದ ಚಪ್ಪಲಿಯನ್ನು ಒರೆಸುವುದರಲ್ಲಿ, ವ್ಯಾಯಾಮ ಸ್ಪರ್ಧೆಯಲ್ಲಿ ದುಡ್ಡಿನ ದರ್ಪ ತೋರಿಸುವುದರಲ್ಲಿ, ಕ್ಷೌರಿಕನ ಅಂಗಡಿಯಲ್ಲಿ ಕ್ಷೌರ ಮಾಡಿಸಿಕೊಳ್ಳುತ್ತಿದ್ದವನು ಗಡ್ಡಕ್ಕೆ ಸೋಪು ಮೆತ್ತಿದ್ದಂತೆಯೇ ಎದ್ದು ಜಾಗ ಬಿಟ್ಟುಕೊಡುವ ಭಯಮಿಶ್ರಿತ ಗೌರವದಲ್ಲಿ– ಹೀಗೆ ವಿವಿಧ ಆಯಾಮಗಳಲ್ಲಿ ಹಳ್ಳಿಗಳಲ್ಲಿ ಗೌಡಿಕೆಯ ಪಾಳೆಯಗಾರಿ ದರ್ಪ ಮೆರೆಯುವುದನ್ನು ಸೂಚ್ಯವಾಗಿಯೇ ಚಿತ್ರಿಸಲಾಗಿದೆ.

ಹಳ್ಳಿಗಳಲ್ಲಿ ಜಾತಿ ಬೇಧ, ಅಸ್ಪೃಶ್ಯತೆಯನ್ನು ಇಂದೂ ಕೂಡಾ ಜಾರಿಯಲ್ಲಿಟ್ಟಿರುವುದು ಪಾಳೆಯಗಾರಿ ಗೌಡಿಕೆಯ ದಬ್ಬಾಳಿಕೆ ಎಂಬುದನ್ನು ಪ್ರೇಕ್ಷಕರ ಮುಂದಿಡುತ್ತಾರೆ ಸಿನಿಮಾ ನಿರ್ದೇಶಕರು.

ಅದೇ ಸಮಯದಲ್ಲಿ, ಸಮಾಜದಲ್ಲಿ ಹೇಗೇ ಇರಲಿ ಹಳ್ಳಿಯ ಶಾಲೆ ಸಹಪಾಠಿಗಳ ನಡುವೆ ಸಮಾನತೆಯ ಭಾವ ಅವ್ಯಕ್ತವಾಗಿರುವುದನ್ನು ಸಿನಿಮಾದ ನಾಯಕನಾದ ದಲಿತ ಹುಡುಗ ಮತ್ತು ಇತರ ಮೇಲ್ಜಾತಿ ಹುಡುಗರ ಒಡನಾಟ, ಗೌಡನ ಮಗಳು, ಚಿತ್ರದ ನಾಯಕಿ ಪ್ರಾಸಂಗಿಕವಾಗಿ ದಲಿತ ಸಹಪಾಠಿಯ ಜೊತೆ ಮಾತನಾಡುತ್ತಿದ್ದಾಗ ಕಂಡ ಅವಳ ತಂದೆಯ ಕೋಪದ ಬೈಗುಳಕ್ಕೆ ತಾನು ಸಾರಿ ಹೇಳುವುದು ಹೀಗೆ ಸೂಕ್ಷ್ಮವಾಗಿ ತೋರಿಸಲಾಗಿದೆ.

ಇಂದಿನ ಕೋಮು ದ್ವೇಷದ ವಾತಾವರಣದಲ್ಲಿ ಹಳ್ಳಿಗಳೂ ಅದಕ್ಕೆ ಬಲಿಯಾಗುತ್ತಿರುವುದು, ಹಿಂದುತ್ವದ ಘೋಷಣೆಗಳು ಹಳ್ಳಗಳ ಗೋಡೆಗಳ ಮೇಲೆ ಕಾಣಿಸುವುದು, ಒಂದು ಸಣ್ಣ ಅವಕಾಶ ಸಿಕ್ಕರೆ ಸಾಕು ಕೋಮು ಬಣ್ಣ ಹಚ್ಚಲು ದ್ವೇಷ ಹಬ್ಬಿಸಲು ಕಾಯುತ್ತಿರುವ ಕೋಮುವಾದಿಗಳು ವಾಟ್ಸಪ್‌ನಂತಹ ಸಾಮಾಜಿಕ ಮಾಧ್ಯಮವನ್ನು ಇಂತಹ ಕುಕೃತ್ಯಕ್ಕೆ ಬಳಸಿಕೊಳ್ಳುತ್ತಿರುವುದು, ಇದನ್ನು ಕೂಡಾ ಈ ಚಿತ್ರ ಒಂದು ಸಬ್ ಟೆಕ್ಸ್ಟ ಆಗಿ ಒಳಗೊಂಡಿದೆ.

ಈ ಚಿತ್ರ ಕರ್ನಾಟಕದಲ್ಲಿ ಅತ್ಯಂತ ಹಿಂದುಳಿದಿರುವ, ಸಿನಿಮಾ ರಂಗದಲ್ಲಿ ಹೆಚ್ಚು ಕಾಣಿಸಿಕೊಳ್ಳದಿರುವ ಹೈದರಾಬಾದ್ (ಕಲ್ಯಾಣ) ಕರ್ನಾಟಕದ ತಂಡದಿಂದ ರೂಪುಗೊಂಡಿದೆ ಎಂಬುದು ಗುರುತಿಸಬೇಕಾದ ಅಂಶ. ಕರ್ನಾಟಕದಲ್ಲಿಯೇ ಹೆಚ್ಚು ಪಾಳೆಯಗಾರಿ ದರ್ಪ ಇನ್ನೂ ಮೆರೆಯುತ್ತಿರುವ ಈ ಪ್ರದೇಶದ ಹಿನ್ನೆಲೆಯಲ್ಲಿ, ಅಲ್ಲಿನ ಭಾಷೆಯ ಸೊಗಡಿನಲ್ಲಿ ಈ ವಸ್ತು ಮತ್ತಷ್ಟು ಪ್ರಖರವಾಗಿ ಮೂಡಿದೆ.

ಚಿತ್ರದ ಎಲ್ಲ ನಟರೂ ಬಹಳ ಸಹಜವಾಗಿ ನಟಿಸಿದ್ದಾರೆ. ನಾಯಕ ನಟನಾಗಿ ಮೌನೇಶ್ ನಟರಂಗ, ಅವನ ತಾಯಿಯಾಗಿ ತನ್ನ ಹಾಡು ನಾಟಕ, ಸಿನಿಮಾಗಳ ಮೂಲಕ ಪ್ರಗತಿಪರರ ನಡುವೆ ಜನಪ್ರಿಯರಾಗಿರುವ ಉಮಾ ವೈ.ಜಿ., ತಂದೆಯಾಗಿ ಮತ್ತೊಬ್ಬ ಪರಿಣತ ನಟ ಬಡಿಗೇರ್ ಹಾಗೂ ನಾಯಕಿಯಾಗಿ ನವನಟಿ ಸಿನಿಮಾದ ಕತೆಗೆ ಪೂರಕವಾಗಿ ಉತ್ತಮವಾಗಿ ನಟಿಸಿದ್ದಾರೆ.

ನಿರ್ದೇಶನ ಮತ್ತು ಚಿತ್ರ ಕತೆ, ರಾಯಚೂರು ಪ್ರದೇಶದ ಜವಾರಿ ಭಾಷೆಯ ಸಂಭಾಷಣೆಯಂತೂ

ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**